SRI C. M. ARUMUGHAM.—Mr. Deputy Speaker Sir, I only appeal to the Government to consider the release of those 20 ladies in the Cubbon Park Police Station. As they have released two M. L. As, they can also release the other 20 ladies. Secondly I want to submit to you in the Police they consider that as procedure. Women were actually going to the Governor in the procession. After presenting the petition they were returning. That cannot be considered as a procession. After all these ladies may not know the consequence that this road is a prohibited area. They are not aware of it, When they went in a procession to present a petition. They were returning home. I only appeal to the Minister that they can be released.

SRI M. VEERAPPA MOILY.—I did not say, for a moment that we will not release them. What I said was that we will eonsider the release and I will report back at 6 O' Clock. But, witnin 15 minutes, definitely we will inform the House about the developments. It is not our pleasure to retain the lady members. When two Legislators leading a group of more than 36 persons we to come to the prohibited area, can we say that "No, no, it is not a procession, they are just coming casually". That is the point. We do understand the concern of Members. We will definitely within 15 minutes, report back to this House.

Financial Business

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜ ನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಅನೇಕ ಬೇಡಿಕೆಗಳನ್ನು ಒಪ್ಪಿಗೆಗಾಗಿ ಇಟ್ಟಿದ್ದಾರೆ. ಆದರೆ, ನಾನು ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡದೇ, ೮ನೇ ಬೇಡಿಕೆಯಾದಂತ ರೇಷ್ಮೆ ವ್ಯವಸಾಯದ ಬಗ್ಗೆ ಮತ್ತು ರೇಷ್ಮೆ ಇಲಾಖೆಯ ಪ್ರಗತಿಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಪ್ರಗತಿಯ ಬಗ್ಗೆ ಹೇಳುವುದಕ್ಕೆ ಮುಂಚೆ, ರೇಷ್ಮೆ ಬಾಬಿನ ಬಗ್ಗೆ ಮಾತನಾಡುವುದಕ್ಕೆ ಹೊರಟಾಗ, ಈ ವರ್ಷದಲ್ಲಿ ಒಂದು ಹೊಸ ವಿಷಯ ಈಗಾಗಲೆ ಸಭೆಯ ಗಮನಕ್ಕೆ ಬಂದಿದೆ, ಆದರೂ ನಾನೂ ಕರ್ತವ್ಯ ದೃಷ್ಟಿಯಿಂದ ಮತ್ತೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಡೀ ಭಾರತ ದೇಶದಲ್ಲಿ ಶೇಕಡ ೮೦ ರಷ್ಟು ರೇಷ್ಮೆ ಬೆಳೆಯನ್ನು ಬೆಳೆಯುತ್ತೇವೆಂದು ಹೇಳಿಕೊಳ್ಳುತ್ತಿದರೂ, ರೇಷ್ಮೆ ಉದ್ಯಮದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ರೇಷ್ಮೆ ಮಂಡಲಿ ಬೊಂಬಾಯಿನಲ್ಲಿ ತನ್ನ ಕೆಲಸವನ್ನು ಮಾಡುತ್ತಿತ್ತು. ಅದು ರಾಜ್ಯದಲ್ಲಿ ಇರಲಿಲ್ಲ. ೧೯೫೬ನೇ ಇಸವಿಯಲ್ಲಿ. ಸ್ವಲ್ಪ ಕಾಲ ನಮ್ಮ ರಾಜ್ಯದಲ್ಲಿತ್ತು. ಆಗಿನ ಸನ್ನಿವೇಶದಲ್ಲಿ ಟೆಕ್ಸ್‌ಟೈಲ್ ಕಮೀಷನರ್‌ರವರು ಮಂಡಳಿಯ ಅಧ್ಯಕ್ಷರಾಗಿದ್ದರಿಂದ, ಟೆಕ್ಸ್‌ಟೈಲ್ ಕಮೀಷನರ್‌ರವರ ಕಛೇರಿ ಬೊಂಬಾಯಿನಲ್ಲಿದ್ದುದರಿಂದ. ಈ ಮಂಡಲಿಯನ್ನು ಬೊಂಬಾಯಿನಲ್ಲಿಯೇ ಇಟ್ಟುಕೊಳ್ಳಲಾಗಿತ್ತು, ಈ ಮಂಡಲಿಯನ್ನು ನಮ್ಮ ರಾಜ್ಯಕ್ಕೆ ಪಡೆಯುವ ಸಲುವಾಗಿ ಹಿಂದಿನ ಸರ್ಕಾರಗಳು ಸತತವಾಗಿ ಪ್ರಯತ್ನ ಮಾಡಿದವು, ನಾನು ಕೇಂದ್ರ ರೇಷ್ಮೆ ಮಂಡಲಿ ಸದಸ್ಯನಾಗಿ ನಿರ್ಣಗಳನ್ನು ತಂದರೂ ಕೂಡ, ಮತ್ತು ರೇಷ್ಮೆ ಸಮ್ಮೇಳಗಳನ್ನು ಮಾಡಿ ಪಾರ್ಥನೆ ಮಾಡಿದರೂ ಕೂಡ ಇಲ್ಲಿಯತನಕ ಆ ಮಂಡಲಿಯನ್ನು ಪಡೆಯಲಿಕ್ಕೆ ಆಗಿರಲಿಲ್ಲ. ಇವತ್ತು ಸಂತೋಷಪಡಬೇಕಾದ ಸಂಗತಿ, ಇವತ್ತು ನಮ್ಮ ರಾಜ್ಯ ಸರ್ಕಾರ ಹಾಗೂ ಮುಖ್ಯವಾಗಿ ನಮ್ಮ ಮುಖ್ಯಮಂತ್ರಿಗಳು ತಮ್ಮ ಪ್ರಭಾವವನ್ನು ಬೀರಿ, ಒತ್ತಾಯ ತಂದು ರೇಷ್ಮೆ ಮಂಡಲಿಯನ್ನು ಕರ್ನಾಟಕಕ್ಕೆ ವರ್ಗ ಮಾಡುವ ಕೆಲಸ ನಡೆದಿದೆಯೆಂದು ಹೇಳಿದರೆ ತಪ್ಪಾಗಲಾರದು. ನನಗೆ ತಿಳಿದ ಪ್ರಕಾರವಾಗಿ ಪ್ರಧಾನ ಮಂತ್ರಿಯವರಿಂದಲೇ ಆದೇಶ ಹೊರಟು,

ಬೊಂಬಾಯಿನಲ್ಲಿರತಕ್ಕ ರೇಷ್ಮೆ ಮಂಡಳಿಯನ್ನು ಆಗಸ್ಟ್ ೩೧ ರೊಳಗಾಗಿ ಸಂಪೂರ್ಣವಾಗಿ ವರ್ಗಾವಣೆ ಮಾಡಬೇಕೆಂದು ತಿಳಿಸಿದ್ದಾರೆಂದು ಗೊತ್ತಾಗಿದೆ. ನಾನು ಕರ್ನಾಟಕ ರಾಜ್ಯದ ರೇಷ್ಮೆ ಉತ್ಪಾದಕರ ಪರವಾಗಿ, ವೈಯಕ್ತಿಕವಾಗಿ ರಾಜ್ಯಸರ್ಕಾರಕ್ಕೆ, ರಾಜ್ಯದ ಮುಖ್ಯಮಂತ್ರಿಗಳಿಗೆ, ತಮ್ಮ ಮೂಲಕ ಪ್ರಧಾನ ಮಂತ್ರಿಯವರಿಗೂ ಕೂಡ ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕೇಂದ್ರ ರೇಷ್ಮೆ ಮಂಡಲಿಯನ್ನು ಕರ್ನಾಟಕಕ್ಕೆ ಪಡೆಯುವುದರಲ್ಲಿ ಹಿಂದಿನ ಸರ್ಕಾರಗಳು ಪ್ರಯತ್ನ ಮಾಡಿದ್ದವು.

ಶ್ರೀ ಎಂ. ಸಿ. ಬಸಪ್ಪ.—ಹಿಂದಿನ ಮುಖ್ಯಮಂತ್ರಿಗಳು ಪ್ರಯತ್ನ ಪಟ್ಟಿದರು ಎನ್ನುವ ಮಾತನ್ನು ಹೇಳಿದ್ದೇನೆ. ನೀವು ನಾನು ಮುಗಿಸುವ ಹೊತ್ತಿಗೆ ಬಂದಿರಿ. . ಹಿಂದೆ ನಿರ್ಣಯಗಳನ್ನು ತೆಗೆದುಕೊಂಡು ಬಂದ್ದಿರೂ ಯಾವ ಪ್ರಯೋಜನವೂ ಆಗಿರಲಿಲ್ಲ. ಈ ಸರ್ಕಾರ ಬಂದಮೇಲೆ, ಮುಖ್ಯಮಂತ್ರಿಗಳ ಹೆಚ್ಚಿನ ಪ್ರಯತ್ನದಿಂದ ಈ ಕೇಂದ್ರ ರೇಷ್ಮೆ ಮಂಡಳಿ ಕರ್ನಾಟಕಕ್ಕೆ ಬಂದಿದೆ ಎಂದು ಹೇಳಿದ್ದೇನೆ.

ರೇಷ್ಮೆ ಉದ್ಯಮ ಬಹಳ ಹಳೆಯದು, ರೇಷ್ಮೆ ಬೇಸಾಯವನ್ನು ಬಹಳ ವರ್ಷಗಳಿಂದ ನಮ್ಮ ದೇಶದಲ್ಲಿ ಮಾಡುತ್ತಿದ್ದೇವೆ. ಹೆಚ್ಚಿಗೆ ರೇಷ್ಮೆ ಬೆಳೆಯುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ಇವತ್ತು ರೇಷ್ಮೆ ಬೆಳೆಯುತಕ್ಕಂಥ ದೇಶಗಳನ್ನು ತೆಗೆದುಕೊಳ್ಳೋಣ, ಒಂದು ಉದಾಹರಣೆ ಹೇಳುವುದಾದರೆ, ಕೊರಿಯಾ ದೇಶದ ೧೯೬೩ರಲ್ಲಿ ಸುಮಾರು ೩೦೦೦ ಮೆಟ್ರಿಕ್ ಟನ್ ರೇಷ್ಮೆ ಬೆಳೆಯುತ್ತಿದ್ದು. ೧೯೮೧ಕ್ಕೆ ೭,೦೦೦ ಮೆಟ್ರಿಕ್ ಟನ್ ಬೆಳೆಯುತ್ತಿದೆ. ಇವತ್ತು ರೇಷ್ಮೆ ಬೆಳೆಯುತಕ್ಕ ದೇಶಗಳಲ್ಲಿ ಇದು ನಾಲ್ಕನೆಯದಾಗಿದೆ. ಕರ್ನಾಟಕ ರಾಜ್ಯದ ಒಂದೂವರೆಯಷ್ಟು ಈ ದೇಶ ಇರಬಹುದು. ಬಹಳ ಚಿಕ್ಕ ದೇಶ, ನಮ್ಮ ಪ್ರಗತಿ ಏನು ? ೧೯೬೨ರಲ್ಲಿ ೧೩೦೦ ಮೆಟ್ರಿಕ್ ಟನ್ ಬೆಳೆಯುತ್ತಿದ್ದವು, ಇವತ್ತು ೧೯೮೧ಕ್ಕೆ ೨೦ ವರ್ಷಗಳಾದ ಮೇಲೆ ೨೫೦೦ ಮೆಟ್ರಿಕ್ ಟನ್ ಬೆಳೆಯುತ್ತಿದ್ದೇವೆ. ನಾವು ಬಹಳ ದೊಡ್ಡ ಪ್ರಗತಿಯನ್ನು ಮಾಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ಈ ವಿಚಾರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಬೇಕಾದದ್ದು ಇದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ವಿಶ್ವಬ್ಯಾಂಕಿನಿಂದ ೮೦ ಕೋಟಿ ರೂಪಾಯಿಗಳ ನೆರವನ್ನು ಪಡೆದು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಇದು ಮೊದಲನೆಯ ಉದ್ದೇಶ, ಇವತ್ತು ನಾವು ಏನು ೨೫೦೦ ಮೆಟ್ರಿಕ್ ಟನ್ ಬೆಳೆಯುತ್ತಿದ್ದೇವೆ, ಅದನ್ನು ೪೫೦೦ ಮೆಟ್ರಿಕ್ ಟನ್ ಏರಿಸುವುದು. ಇದರಲ್ಲಿ ೧೫೦೦ ಮೆಟ್ರಿಕ್ ಟನ್ ಬೈವೋಲ್ಟೀನ್ ರೇಷ್ಮೆ ಬೆಳೆಯುತಕ್ಕ ಗುರಿಯನ್ನು ಹಾಕಿಕೊಳ್ಳಲಾಗಿದೆ. Farm credit Rs. 7 crores, Improved infrastructure Rs. 32 crores, Modernisation of Silk Filature Rs. 19 crores. Research Rs. 7 crores, Technical Assistance Rs. 2 crores. ಹೀಗೆ ಹಾಕಿಕೊಂಡಿದ್ದೀರಿ, ಆದರೆ, ನಿಮ್ಮ ಇಲಾಖೆಯವರು ಕೊಟ್ಟಿರತಕ್ಕ ವರದಿಯನ್ನು ನಮ್ಮ ಮುಂದಿಟ್ಟಿದ್ದೀರಿ. ಅದನ್ನು ನೋಡಿದರೆ, ಕಳೆದ ವರ್ಷದ ವರದಿಗೂ ಈ ವರ್ಷದ ವರದಿಗೂ ಏನೊ ವ್ಯತ್ಯಾಸ ಇಲ್ಲ. ಏನೇನು ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೇ ? ಫಿಸಿಕಲ್ ಟಾರ್ಜೆಟ್ ಮತ್ತು ಅಚೀವ್‌ಮೆಂಟ್ಸ್ ಬಗ್ಗೆ ಏನು ಮಾಡಿದ್ದಾರೆನ್ನುವುದನ್ನು ಕೊಟ್ಟಿಲ್ಲ.. ಕಥೆ ಬರದಹಾಗೆ ಬರೆದುಕೊಂಡು ಹೋಗಿದ್ದಾರೆ.

"A World Bank assisted Scheme for the development of Sericulture has been launched by the Department of Sericulture......Organisation of large scale grainages, technical service centres, Chawki Rearing Centres, Training School, Cocoon Markets and Training Schools constitute the other salient features of this programme".

೪.೦೦ ಪಿ.ಎಂ.

(ಶ್ರೀ ಎನ್.ಬಿ. ಸರ್‌ದೇಸಾಯಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರೆ, ಟ್ರೈನಿಂಗ್ ಸ್ಕೂಲು ಹೀಗೆ ಅಂತ ಹೇಳಿದರೆ ಉಪಯೋಗವಿಲ್ಲ. ತಮ್ಮಲ್ಲಿ ಒಂದು ಡೆಫನೆಟ್ ಸ್ಕೀಂ ಇದ್ದಾಗ ೮೦ ಕೋಟಿ ರೂಪಾಯಿ ಹಣ ಕೊಟ್ಟು ಮೂರು ವರ್ಷದಲ್ಲಿ ಎರಡೂವರೆ

ಸಾವಿರ ಮೆಟ್ರಿಕ್ ಟನ್ ರೇಷ್ಮೆ ನಾಲ್ಕೂವರೆ ಸಾವಿರ ಮೆಟ್ರಿಕ್‌ಟನ್‌ಗೆ ಮಾಡಬೇಕೆಂದು ಕೊಟ್ಟಾಗ ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಎಷ್ಟರಮಟ್ಟಿಗೆ ಪ್ರಗತಿಯಾಗಿದೆ. ಈ ವರ್ಷದಲ್ಲಿ ಅದರ ಚಿತ್ರ ಬರುತ್ತದೆಂದು ತಿಳಿದುಕೊಂಡಿದ್ದೆ. ಇವೊತ್ತು ಆ ಚಿತ್ರ ಇಲ್ಲಿ ಇಲ್ಲ. ಇದರಲ್ಲಿ ಒಂದು ಸಣ್ಣ ಕಥೆಯನ್ನು ಬರೆದಿದ್ದಾರೆ. ಅದು ಉಪಯೋಗವಾಗುವುದಿಲ್ಲ ಎಂದು ಹೇಳುತ್ತೇನೆ. ಒಂದು ದೊಡ್ಡ ಪ್ರಾಜೆಕ್ಟ್ ಆಶಾದಾಯಕವಾಗಿ ಮಾಡುವ ಸಂದರ್ಭದಲ್ಲಿ ಈ ಕೈಗಾರಿಕೆಗೆ ಒಂದು ದೊಡ್ಡ ಪೆಟ್ಟು ಬಿದ್ದಿದೆ. ಈ ಊಜಿ ನೊಣ ಎನ್ನತಕ್ಕದ್ದು ಕರ್ನಾಟಕಕ್ಕೆ ಹೊಸದು. ಆದರೆ ಇದು ಬಂಗಾಳದಲ್ಲಿ ಬಹಳ ದಿವಸದಿಂದ ಇದೆ ಎಂದು ಹೇಳುತ್ತಾರೆ. ಚೈನಾ, ಜಪಾನ್‌ನಲ್ಲಿ ಇದೆ ಎಂದು ಹೇಳುತ್ತಾರೆ. ಇದರ ಬಗ್ಗೆ ನಾನು ನಮ್ಮ ಕೇಂದ್ರ ರೇಷ್ಮೆ ಮಂಡಲಿಯಲ್ಲಿ ಕೆಲಸ ಮಾಡತಕ್ಕ ಒಬ್ಬ ದೊಡ್ಡ ವಿಜ್ಞಾನಿಗಳನ್ನು ಊಜಿ ನೊಣ ಬಂದದ್ದು ಹೇಗೆ? ಇದನ್ನು ಎರಾಡಿಕೇಟ್ ಮಾಡಬೇಕಾದರೆ ಅದರ ಬಗ್ಗೆ ರಿಸರ್ಚ್ ಮಾಡಿದ್ದೀರಾ ಎಂದು ಕೇಳಿದೆ. ಆ ಬಗ್ಗೆ ನಿಜ ಹೇಳಬೇಕು ಎಂದರೆ ಒಂದು ಮಾತಿನಲ್ಲಿ ಹೇಳುತ್ತೇನೆ. You have to live with it. You can prevent it ಕಡಿಮೆ ಮಾಡಬಹುದು ಎಂದು ಹೇಳಿದರು. ಅದಕ್ಕೆ ಏನು ಮಾಡಬೇಕು ಎಂದರೆ, ರೇರಿಂಗ್ ಟೆಕ್ನಿಕ್ಸ್, ಹುಳು ಸಾಕತಕ್ಕ ಮನೆಗೆ ವೈರ್ ನೆಟ್ ಹಾಕಿ ಈ ನೊಣ ಒಳಗೆ ಬರದಹಾಗೆ ಮಾಡಬೇಕು. ಬಂದಂಥ ನೊಣಗಳು ಮೊಟ್ಟೆ ಇಟ್ಟಿದ್ದರೆ ಸುಡಬೇಕು. ಡಿಸ್‌ಇನ್‌ಫೆಕ್ಟೆಂಟ್ ಸ್ಪ್ರೇ ಮಾಡಬೇಕು. ಈ ರೀತಿ ಪ್ರಿವೆನ್‌ಟಿವ್ ಮೇಜರ್ಸ್ ತೆಗೆದುಕೊಳ್ಳಬೇಕೇ ಹೊರತು ಪೂರ್ತಿ ಎರಾಡಿಕೇಟ್ ಮಾಡುತ್ತೇವೆ ಅಂತ ಮಾಡಲಿಕ್ಕೆ ಆಗುವುದಿಲ್ಲ ಎಂದು ವ್ಯಕ್ತಪಡಿಸಿದರು. ನಮ್ಮ ಸೈಂಟಿಸ್ಟ್ ಕೂಡ ಪತ್ರಿಕೋದ್ಯಮಿಗಳನ್ನು ರಾಮನಗರದ ಹತ್ತಿರ ಕರೆದುಕೊಂಡು ಹೋಗಿ ಯಾವ ರೀತಿ ಇದರ ಬಗ್ಗೆ ಪ್ರಿವೆನ್‌ಟಿವ್ ಮೇಜರ್ಸ್ ತೆಗೆದುಕೊಳ್ಳಬೇಕೆಂದು ತೋರಿಸಿದ್ದಾರೆ ಅಲ್ಲದೆ, eradication is impossible ಎನ್ನುವ ದಿಶೆಯಲ್ಲಿ ಅಭಿಪ್ರಾಯ ಕೊಟ್ಟಿದ್ದಾರೆ. ಸ್ವಲ್ಪಮಟ್ಟಿಗೆ ನಾವು ಪ್ರಿವೆಂಟ್ ಮಾಡಬಹುದು ಎಂದು ಹೇಳಿದ್ದಾರೆ. ಮಾಡರನ್ ರೇರಿಂಗ್ ಹೌಸಸ್ ಕಟ್ಟಬೇಕು. ವೈರ್‌ಮೆಷ್ ಹಾಕಿ, ಮಸ್‌ಕಿಟೋ ಕರ್ಟನ್ ಉಪಯೋಗಿಸಿ, ನೊಣದ ಹಾವಳಿಯಿಂದ ಉಳಿಸಿಕೊಳ್ಳಲಿಕ್ಕೆ ಸಾಧ್ಯ. ಈ ರೀತಿ ಮಾಡುವುದರಿಂದ ಡ್ಯಾಮೇಜ್ ಆಗತಕ್ಕದ್ದನ್ನು ಸ್ವಲ್ಪ ಕಡಿಮೆ ಮಾಡಬಹುದು. ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದಕ್ಕೆ ಎಷ್ಟು ಖರ್ಚಾಗುತ್ತದೆ ಎಂದರೆ, ಸುಮಾರು ಒಂದು ಸಾವಿರದ ಮುನ್ನೂರು ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆಂದು ನಮ್ಮ ರಾಜ್ಯದ ಈ ಇಲಾಖೆಯ ಅಧಿಕಾರಿಗಳು ಅಂದಾಜು ಮಾಡಿದ್ದಾರೆಂದು ತಿಳಿದು ಬಂದಿದೆ. ಈ ವಿಷಯ ಕೇಂದ್ರ ರೇಷ್ಮೆ ಮಂಡಲಿಯಲ್ಲೂ ಕೂಡ ಚರ್ಚೆಯಾಗಿದೆ. ರೇಷ್ಮೆ ಮಂಡಳಿ ಅಧಿಕಾರಿಗೆ ಆದೇಶ ಕೊಟ್ಟಿದ್ದೇವೆ ಎಂದರೆ, ಸರ್ಕಾರದ ಜೊತೆ ಕುಳಿತು ಈ ಬಗ್ಗೆ ಪ್ರಾಜೆಕ್ಟ್ ತಯಾರು ಮಾಡಿ, ಇದಕ್ಕೆ ಕೇಂದ್ರದಿಂದ ಎಷ್ಟು ಸಹಾಯ ಬೇಕಾಗುತ್ತದೆ, ಸಬ್ಸಿಡಿ ಎಷ್ಟು ನಾವು ಕೇಳಬೇಕಾಗುತ್ತದೆ, ಅಥವಾ ಗ್ರ್ಯಾಂಟ್ ರೂಪದಲ್ಲಿ ಏನೇನು ಕೇಳಬೇಕಾಗುತ್ತದೆ, ಸಾಲದ ರೂಪದಲ್ಲಿ ಏನು ಕೇಳಬಹುದು ಇದೆಲ್ಲಾ ಯೋಜನೆಯ ರೂಪದಲ್ಲಿ ಕೆಲಸ ಮಾಡಿ ಈ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಿ ಕೇಂದ್ರ ರೇಷ್ಮೆ ಮಂಡಲಿಯಲ್ಲೂ ಕೂಡ ಒಂದು ನಿರ್ಣಯ ಮಾಡಿದ್ದೇವೆ. ಅದೇ ಪ್ರಕಾರ ನಮ್ಮ ಅಧಿಕಾರಿಗಳು ಬಂದು ನಿಮ್ಮ ಇಲಾಖೆಯವರ ಜೊತೆ ಕುಳಿತು ಒಂದು ನೂರು ಮೂವತ್ತು ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ ಅದು ಈಗಾಗಲೇ ಕೇಂದ್ರ ಸರ್ಕಾರದ ಮುಂದೆ ಇದೆ ಅಂತ ವಿಚಾರ ಅರಿತ್ತಿದ್ದೇನೆ, ನಮ್ಮ ಹಣಕಾಸಿನ ಮಂತ್ರಿಗಳು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರ ಜೊತೆ ಮಾತುಕತೆ ನಡೆಸಿದ್ದಾರೆ, ಪ್ರಿಲಿಮಿನರಿಯಾಗಿ ಇರಬಹುದು ಮಾತುಕತೆ ನಡೆಸಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಬಹುಶಃ ನಮ್ಮ ಈ ಒಂದು ಕೈಗಾರಿಕೆ ಬೆಳೆಯಬೇಕಾದರೆ ಊಜಿ ನೊಣ ಎರಾಡಿಕೇಟ್ ಮಾಡಲಿಕ್ಕೆ ಆಗದೇ ಇದ್ದರೆ ಅದನ್ನು ಪ್ರಿವೆಂಟ್ ಮಾಡತಕ್ಕ ಅವಶ್ಯಕತೆಯ ದೃಷ್ಟಿಯಿಂದ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದಾರೆ ಇದು ಕಾರ್ಯಗತವಾಗತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಇಲಾಖೆಯವರು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದಾರೆಂದರೆ, ಮೊದಲನೆಯದಾಗಿ ಗ್ರೈನೇಜಸ್‌ನಿಂದ ರೈತನಿಗೆ ಮೊಟ್ಟೆ ತಯಾರು ಮಾಡಿ ಸರಬರಾಜು ಮಾಡತಕ್ಕಗ್ದು ೧೯೫೨–೫೩ರಲ್ಲಿ ಗ್ರೈನೇಜ್ ಎರಡೂವರೆ ಕೋಟಿ ಮೊಟ್ಟೆಗಳನ್ನು ತಯಾರು ಮಾಡತಕ್ಕ ಶಕ್ತಿ ಇತ್ತು. ಆದರೆ ಇವೊತ್ತು ೧೯೭೯–೮೦ರಲ್ಲಿ ಸುಮಾರು ೧೧ ಕೋಟಿ ಮೊಟ್ಟೆ ಆಲ್ ಮೋಸ್ಟ್ ೬ರಿಂದ ೭ ಟೈಮ್ಸ್ ಸುಮಾರು ೭ ಪಟ್ಟು ಜಾಸ್ತಿ ಮಾಡಿದ್ದಾರೆ. ಅವರ ಆಕ್ಟಿವಿಟೀಸ್‌ನಲ್ಲಿ ಬಹುಶಃ ಇನ್ನೂ ಜಾಸ್ತಿ ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ವರ್ಲ್ಡ್ ಬ್ಯಾಂಕ್

ಅಸಿಸ್ಟೆನ್ಸ್‌ನಲ್ಲಿ ಬಹು ಮುಖ್ಯವಾದ ಯೋಜನೆ ಏನು ನೋಡಿದ್ದೇವೆ ಎಂದರೆ ದೊಡ್ಡ ಫಾರಮ್ಸ್ ಗ್ರೈನೇಜಸ್ ಕೊಟ್ಯಾಂತರ ಮೊಟ್ಟೆಗಳನ್ನು ತಯಾರು ಮಾಡತಕ್ಕ, ವ್ಯವಸ್ಥೆಗೆ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದಾರೆ, ಆ ದಿಶೆಯಲ್ಲಿ ಸ್ವಲ್ಪ ಮಟ್ಟಿನ ಪ್ರಗತಿ ಮಾಡಿದ್ದಾರೆ. ಆದರೆ ಅದೇ ರೀತಿಯಲ್ಲಿ ಏನು ಚಾಕಿ ರೇರಿಂಗ್ ಸೆಂಟರ್ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಮೊಟ್ಟೆಯನ್ನು ರೈತರಿಗೆ ಕೊಡುವ ಬದಲು ಅದು ಸಣ್ಣ ಮರಿ ಆಗಿರತಕ್ಕ ಕಾಲದಲ್ಲಿ ಅದು ಬಹಳ ಸೂಕ್ಷ್ಮವಾದಂಥ ಪ್ರಾಣಿಯಾಗಿರುತ್ತದೆ. ಅದನ್ನು ಎಂಟು ದಿವಸಗಳ ಕಾಲ ಸಾಕಾಣಿಕೆ ಮಾಡಿ ರೈತನಿಗೆ ಕೊಟ್ಟರೆ ಅದರ ಯೀಲ್ಡ್ ಡಬಲ್ ಆಗುತ್ತದೆ. ಸಣ್ಣ ಸ್ಟೇಜಿನಲ್ಲಿ ಮರಿಗಳನ್ನು ನೋಡಿಕೊಳ್ಳತಕ್ಕದ್ದು ರೈತನಿಗೆ ಬಹಳ ಕಷ್ಟವಾಗುತ್ತದೆ. ಸ್ವಲ್ಪ ಟ್ರೈನ್ಡ್ ಪರಸೊನಲ್ ನಿಗಾ ಕೊಟ್ಟು ನೋಡಿಕೊಂಡರೆ, ಅದರ ಉತ್ಪನ್ನವನ್ನು ಜಾಸ್ತಿ ಮಾಡಬಹುದು. ಸುಮಾರು ೬೦೦–೭೦೦ ಚಾಕಿ ರೇರಿಂಗ್ ಸೆಂಟರ್ ಕೆಲಸ ಮಾಡುತ್ತಿದ್ದುವು, ಆದರೆ ಇವೊತ್ತು ಅಷ್ಟಕ್ಕೆ ನಿಂತು ಹೋಗಿವೆ ಮೊದಲನೇ ಸಲ ಈ ಸೆಂಟರ್‌ಗಳಲ್ಲಿ ತಾವು ಸೆಲ್ಫ್ ಸಫಿಷಿಯೆಂಟ್‌ನಿಂದ ಮಾಡಿದರೆ ೮ ದಿವಸಗಳ ರೈತನ ಶ್ರಮ ಉಳಿಯುತ್ತದೆ. ಅವನು ೧೦೦ ಪ್ರುಸ್ ಮಾಡಿದರೂ ಕೂಡ ೨೪ ಮಂದಿ ಕೆಲಸ ಮಾಡಬೇಕಾಗುತ್ತದೆ. ಒಂದು ಸಾಮೂಹಿಕ ಸೆಂಟರ್‌ನಲ್ಲಿ ತೆಗೆದುಕೊಂಡರೆ ಮೂರ್‍ನಾಲ್ಕು ಸಾವಿರ ಮೊಟ್ಟೆಗಳನ್ನು ಪ್ರುಸ್ ಮಾಡಲಿಕ್ಕೆ ಆಗುತ್ತದೆ. One Supervisor, with two or three assistants can take care of 3000-4000 lines in one rearing centre. ಇಂಡುವಿಜ್ಯುಯಲ್ ಫಾರ್ಮರ್‌ಗೆ ೨೦೦ ರಿಂದ ೩೦೦ರ ವರೆಗೆ ಪ್ರುಸ್ ಮಾಡಿ ಸಾಕತಕ್ಕ ಕೆಪಾಸಿಟಿ ಇರುತ್ತದೆ. ೮ ದಿನಗಳ ಕಾಲ ಇರುತ್ತದೆ. ಅವನು ಸ್ವಲ್ಪ ಹಣಕೊಟ್ಟು ಮರಿಯನ್ನು ತೆಗೆದುಕೊಳ್ಳಲಿಕ್ಕೆ ಹಿಂದು ಮುಂದು ನೋಡುತ್ತಾರೆ. ಸೆಲ್ಫ್‌ಸಫಿಷಿಯೆಂಟ್ ಬೇಸಿಸ್‌ನಲ್ಲಿ ೬೦೦ ಸೆಂಟರುಗಳು ಏನಿವೆ ಅದನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಮೊದಲು ರೈತ ಕಷ್ಟಪಟ್ಟು ಬೆಳೆಯುತ್ತಾನೆ. ಇವೊತ್ತು ಕಕೂನ್ ಮಾರ್ಕೆಟ್ ಎಲ್ಲ ಕಡೆಗಳಲ್ಲಿ ಮಾಡಿದ್ದೀರಿ. ಈ ರೇಷ್ಮೆ ವ್ಯವಸಾಯದಲ್ಲಿ ಎರಡು ರೀತಿಯ ರೋಗಗಳು. ಮೊದಲನೆಯದು ರೈತ ಹುಳುವಿನ ಕೈಯಿಂದ ತಪ್ಪಿಸಿಕೊಂಡು ಬೆಳೆಯಬೇಕು, ಆನಂತರ ಅವನು ಬೆಳೆದ ಮೇಲೆ ಎಕ್ಸ್‌ಪ್ಲಾಯ್‌ಟೇಷನ್. ಈ ಎರಡು ಪಾಯಿಂಟ್‌ಗಳು ಇವೆ. ಅದನ್ನು ಬೆಳೆದಂಥ ಗೂಡುಗಳನ್ನು ಮಾರ್ಕೆಟ್ಟಿಗೆ ತರಬೇಕು ಮಾರ್ಕೆಟ್‌ಗೆ ತಂದಮೇಲೆ ಅದನ್ನು ದೊಣ್ಣೆಯಲ್ಲಿ ತೂಕ ಮಾಡುತ್ತಿದ್ದರು. ಅವನು ಹೇಳಿದಷ್ಟೇ ತೂಕ, ಈ ಎಕ್ಸ್‌ಪ್ಲಾಯ್‌ಟೇಷನ್ ಇಂದು ಮಾರ್ಕೆಟ್‌ನಲ್ಲಿ ತಪ್ಪಿದೆ. ಆದರೆ ಮಾರ್ಕೆಟ್‌ನಲ್ಲಿ ಏನು ಫೆಸಿಲಿಟೀಸ್ ಕೊಟ್ಟಿದ್ದೀರಾ? ಏನೂ ಕೊಟ್ಟಿಲ್ಲ ಕೊಡಲಿಕ್ಕೆ ತಾವು ಮನಸ್ಸು ಮಾಡಿಲ್ಲ. ಹಾಗಾದರೆ ಟ್ರಾನ್‌ಸ್ಯಾಕ್ಷನ್ ಏನು? ೧೯೬೯–೭೦ರಲ್ಲಿ ೩೩–೩೪ ಲಕ್ಷ ಕೆ.ಜಿ. ಟ್ರಾನ್‌ಸ್ಯಾಕ್ಷನ್ ಆಗಿದೆ. ೧೯೮೦–೮೧ರಲ್ಲಿ ೩ ಲಕ್ಷ, ೫೫ ಸಾವಿರ ಮೆಟ್ರಿಕ್‌ಟನ್ ಟ್ರಾನ್‌ಸ್ಯಾಕ್ಷನ್ ಆಗಿದೆ. ಸುಮಾರು ೮ ಸಾವಿರ ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕ ಗೂಡಿನ ವ್ಯಾಪಾರ ಮಾರ್ಕೆಟ್‌ನಲ್ಲಿ ನಡೆದಿದೆ. ಎಷ್ಟು ಮಾರ್ಕೆಟ್ ಫೀಜು ಬಂದಿದೆ. ಮಾರ್ಕೆಟ್ ಫೀಜು ಬಂದದ್ದನ್ನು ಏನು ಮಾಡುತ್ತಿದ್ದೀರಿ. ಅದು ಗವರ್ನಮೆಂಟ್ ರೆವಿನ್ಯೂ ಎಂದು ತೆಗೆದುಕೊಳ್ಳುತ್ತಿದ್ದೀರಿ. ಇದರ ಬಗ್ಗೆ ನಾನು ಅನೇಕ ಸಾರಿ ಹೇಳಿದ್ದೇನೆ. ಮಾರ್ಕೆಟ್‌ನಲ್ಲಿ ಅನುಕೂಲ ಮಾಡಿಕೊಡಲಿಕೋಸ್ಕರ ಚಾರ್ಜ್ ಮಾಡಬೇಕೆಂದು ಹೈಕೋರ್ಟ್ ಆದೇಶ ಇದೆ, ನಮ್ಮ ಉದ್ದೇಶ, ಲೆಜಿಸ್ಲೇಷನ್ ಉದ್ದೇಶವು ಅಷ್ಟೆ. ಇವೊತ್ತು ಕಕೂನ್ ಮಾರ್ಕೆಟ್‌ನಲ್ಲಿ ಬರತಕ್ಕ ಉತ್ಪನ್ನವನ್ನು ತೆಗೆದುಕೊಳ್ಳುತ್ತೀರಿ. ಆದರೆ ಮಾರ್ಕೆಟ್ ಆಫಿಸ್‌ನಲ್ಲೆಲ್ಲ ಗೂಡು ಇಡಲಿಕ್ಕೆ ಸರಿಯಾಗಿ ಸ್ಥಳ ಇಲ್ಲ, ಒಂದು ಟಾರ್‌ಪಾಲಿನ್ ಇಲ್ಲ. ಹರಾಜಿಗೆ ತೆಗೆದುಕೊಂಡು ಹೋದ ಗೂಡುಗಳನ್ನು ಅಲ್ಲಿ ಇಡಲಿಕ್ಕೆ ಸೇಫ್ಟಿ ಇಲ್ಲ. ಎಕ್ವಿಪ್‌ಮೆಂಟ್ ಇಲ್ಲ. ತಟ್ಟೆಗಳಿಲ್ಲ, ಮೇಜುಗಳಿಲ್ಲ. ಅದನ್ನು ಹಾಗೆ ಇಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅವನು ಮನೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಮಾರ್ಕೆಟ್ ಫೀಜಿನಿಂದ ಅವನಿಗೆ ಅನುಕೂಲ ಒದಗಿಸಿಕೊಟ್ಟಿಲ್ಲ. ಇವೊತ್ತು ಸ್ಟೇಟ್ ರೆವಿನ್ಯೂ ತೆಗೆದುಕೊಂಡು ಆತ ಅಲ್ಲಿ ಗೂಡುಗಳನ್ನು ಇಡಲಿಕ್ಕೆ ಕ್ಷೇಮ ಇಲ್ಲದೇ ಇದ್ದರೆ ಏನು ಪ್ರಯೋಜನ. ಆದ್ದರಿಂದ ಮಾರ್ಕೆಟ್ಟಿನಲ್ಲಿ ರೈತನಿಗೆ ಬೇಕಾದಂಥ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದು ಊಜಿ ನೊಣ ಏನಿದೆ ಅದು ಸ್ಪಿನ್ನಿಂಗ್ ಸ್ಟೇಜ್‌ನಲ್ಲಿರತಕ್ಕ ಹುಳುಗಳಿಗ ಅಟ್ಯಾಕ್ ಆಗುತ್ತದೆ. ಅದು ಸ್ಪಿನ್ ಆದ ೨–೩ ದಿವಸದೊಳಗೆ ಅಟ್ಯಾಕ್ ಮಾಡುತ್ತದೆ, ಮೆಗಾಸ್ ಗೂಡನ್ನು ಒಡೆಯುತ್ತದೆ. ಇದಕ್ಕೆ ಎಕ್ಸ್‌ಪರ್ಟ್ಸ್ ಏನು ಹೇಳುತ್ತಾರೆ. In the early stage you should prevent the damage and the losses ಈ ಕಕೂನ್ ಒಂದುಸಾರಿ

ಒಡೆದುಕೊಂಡು ಆ ಗೂಡಿನಿಂದ ಹೊರಗೆ ಬಂದರೆ You cannot spin the cocoon. Within four days you will have to stifle it in hot air chamber ಇದಕ್ಕೆ ಏನು ಮಾಡಬೇಕು.? every market should be equipped with hot air chambers. ಯಾರಾದರೂ ಕಕೂನ್ ಕೊಂಡುಕೊಳ್ಳತಕ್ಕ ವ್ಯಾಪಾರಿ ಇದನ್ನು ಸ್ಟೈಫಲ್ ಮಾಡಿಸಿ ಆಮೇಲೆ ನಾನು ತೆಗೆದುಕೊಂಡು ಹೋಗುತ್ತೇನೆಂದರೆ ಅನುಕೂಲವಾಗತಕ್ಕ ರೀತಿಯಲ್ಲಿ ಹಾಟ್ ಏರ್ ಛೇಂಬರ್‌ಗಳನ್ನು ಪ್ರತಿಯೊಂದು ಮಾರ್ಕೆಟ್‌ನಲ್ಲೂ ಮಾಡಿಸಬೇಕಾದ್ದು ಅವಶ್ಯಕವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ನಮ್ಮ ರಾ ಸಿಲ್ಕ್ ಮರ್ಚೆಂಟ್ಸ್ ಒಂದು ದೊಡ್ಡ ಗಂಡಾಂತರಕ್ಕೆ ಸಿಕ್ಕಿದ್ದರು. ಹೇಗೆಂದರೆ, ಅವರು ಅಲ್ಲಿಂದ ಕಷ್ಟಪಟ್ಟು ತಂದಂಥ ಮಾಲನ್ನು ಅವಿನ್ಯೂ ರೋಡಿನಲ್ಲಿ ಮೋಸಮಾಡುತ್ತಿದ್ದರು. ಇದನ್ನು ನೋಡಿ ನಾನು ಅಸೆಂಬ್ಲಿ ಸದಸ್ಯನಾದಮೇಲೆ ಹೇಳಿದೆ, ಅವಿನ್ಯೂ ರೋಡಿನಲ್ಲಿ ಹಗಲು ದರೋಡೆ ನಡೆಯುತ್ತಿದೆ, ಸರ್ಕಾರದವರು ಇದನ್ನು ತಪ್ಪಿಸಿ ಎಂದು. ಆದರೆ ಇದನ್ನು ತಪ್ಪಿಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಆದರೆ ಸಿಲ್ಕ್ ಎಕ್ಸ್‌ಛೇಂಜ್‌ನ್ನು ಸ್ಥಾಪನೆ ಮಾಡಿ to some extent you have succeeded. ಆದರೆ ಪೂರ್ತಿಯಾಗಿ ಸಕ್ಸೀಡ್ ಆಗಿಲ್ಲ. ತಾವು ಕೇಳಬಹುದು ಏಕೆ ಆಗಿಲ್ಲ ಎಂದು. ಅದಕ್ಕೆ ನನ್ನ ಹತ್ತಿರ ಅಂಕಿಅಂಶಗಳಿವೆ. ೧೯೮೦–೮೧ರಲ್ಲಿ ಈ ಮಾರ್ಕೆಟ್ ಆ್ಯಕ್ಟ್ ಜಾರಿಗೆ ಬಂತು. ಆಗ ಸುಮಾರು ೧೪೫ ಮೆಟ್ರಿಕ್ ಟನ್‌ನಷ್ಟು ವ್ಯವಹಾರ ಈ ಬೆಂಗಳೂರಿನಲ್ಲಿ ನಡೆದಿದೆ ೧೯೭೯–೮೦ ರಲ್ಲಿ ನಿಮಗೆ ೧೬ ಲಕ್ಷರೂ. ಮಾರ್ಕೆಟ್ ಫೀ ತಮಗೆ ಬಂದಿದೆ. ೧೯೮೦–೮೧ ರಲ್ಲಿ transactions are to the tune of 1,553 metric tonnes. The market fee realised is Rs. 85 lakhs, I would like to ask what is your expenditure. ೧ ವರ್ಷದಲ್ಲಿ ೧ ಕೋಟಿ ರೂ. ಮಾರ್ಕೆಟ್ ಫೀ ಬಂದಿದೆ. ತಾವು ಈ ೧ ಕೋಟಿ ರೂ.ನಲ್ಲಿ ನಿಮ್ಮ ಸಿಲ್ಕ್ ಎಕ್ಸ್‌ಛೇಂಜಿಗೆ ಗೂಡನ್ನು ತರತಕ್ಕ ರೈತನ ಅನುಕೂಲಕ್ಕಾಗಿ ಏನು ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ ಎಂದರೆ ಏನೂ ಇಲ್ಲ, ಆತ ಎಷ್ಟೇ ದೊಡ್ಡ ಮನುಷ್ಯನಾಗಿದ್ದರು ಆತನೇ ತಾನು ತಂದ ಮೂಟೆಯನ್ನು ಹೊತ್ತುಕೊಂಡು ಹೋಗಿ ಒಳಗಡೆ ಇಡಬೇಕು, ಅಲ್ಲಿ ಒಬ್ಬ ಲೈಸೆನ್ಸ್ ಇರತಕ್ಕ ಕೂಲಿಯವನೂ ಕೂಡ ಇಲ್ಲ. ಅಲ್ಲಿ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿಲ್ಲ ಆ ಮಾರ್ಕೆಟ್‌ನಲ್ಲಿ ಬರತಕ್ಕ ಶುಲ್ಕವನು ಆ ಮಾರ್ಕೆಟ್‌ನ ಅಭಿವೃದ್ಧಿಗಾಗಿಯೇ ಖರ್ಚುಮಾಡಬೇಕು This is another instance where you have taken money as revenue ಇದು ಸರಿಯಾದ ಮಾರ್ಗವಲ್ಲ. ಡೆವಲಪ್‌ಮೆಂಟ್ ಫಂಡ್ ಎಂದು ಕ್ರಿಯೇಟ್ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಆದ್ದರಿಂದ ಅಲ್ಲಿ ಬರತಕ್ಕ ಹಣವನ್ನು ಆ ಮಾರ್ಕೆಟ್‌ನ ಅಭಿವೃದ್ಧಿಗಾಗಿ ಉಪಯೋಗಿಸಬೇಕು. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಅವಿನ್ಯೂ ರೋಡಿನಲ್ಲಿ ಏನು ಎಕ್ಸ್‌ಪ್ಲಾಯ್‌ಟೇಷನ್ ನಡೆಯುತ್ತಿತ್ತು ಅದನ್ನು ತಾವು ೧೦೦ ಪರ್ಸೆಂಟ್ ತಪ್ಪಿಸಿದ್ದೀರಾ? ಇಲ್ಲ. ಸ್ವಾಮಿ, ತಮ್ಮ ಪುಸ್ತಕದಲ್ಲಿ ಕೊಟ್ಟಿರತಕ್ಕ ಪ್ರಕಾರ your annual production is somewhere about $2\frac{1}{2}$ to 3 thousand metric tonnes. Total transactions of silk exchange for the whole year was 1,550 metric tonnes and 50% of the raw silk is still going to the Avenue Road. That means, clandestine business is going on. Exploitation is still going on. So you have to tighten it. Firstly, silk should be sold in the Exchange only. ಇದರಲ್ಲಿ ೨ನೇ ಸೇಲ್ಸ್, ೩ನೇ ಸೇಲ್ಸ್ ಬರುವುದಿಲ್ಲ. ಕೊಡುವವರು ಎಷ್ಟಕ್ಕೆ ಬೇಕಾದರೂ ಕೊಡಬಹುದು. ಅದನ್ನು ತೆಗೆದುಕೊಂಡು ಹೋಗಿ ಎಷ್ಟಕ್ಕೆ ಬೇಕಾದರೂ ಮಾರಬಹುದು, ತಾವು ಕಾನೂನನ್ನು ಬಿಗಿ ಮಾಡುವುದರಿಂದ ಈ ಎಕ್ಸ್‌ಪ್ಲಾಯ್‌ಟೇಷನ್‌ನ್ನು ಸಂಪೂರ್ಣವಾಗಿ ನಿಲ್ಲಿಸಬಹುದೆಂದು ನಾನು ಹೇಳಬಯಸುತ್ತೇನೆ ಈ ಸಿಲ್ಕ್ ಎಕ್ಸ್‌ಛೇಂಜ್ ಜೊತೆಗೆ ಇಂಡಸ್ಟ್ರೀಸ್ ನಲ್ಲಿರತಕ್ಕ ಕೆಲವು ಅಧಿಕಾರಿಗಳಿಂದಲೂ ಕಿರುಕುಳ ನಡೆಯುತ್ತಿದೆ. We have registered another body called Karnataka Silk Marketing Board. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡಿನ ಮತ್ತೊಂದು ಉದ್ದೇಶವಾದರೂ ಸಿಲ್ಕ್ ಮಾರ್ಕೆಟ್‌ನಲ್ಲಿ there is lot of fluctutation. ಒಂದುಸಾರಿ ೪೦೦ ರೂ. ಆಗುತ್ತದೆ, ಇನ್ನೊಂದುಸಾರಿ ೨೦೦ ರೂ.ಗೆ ಬರುತ್ತದೆ. ವರ್ತಕರು ಬಹುಶ: ಒಂದೊಂದು ಗುಂಪಾಗಿ ಮಾತನಾಡಿಕೊಂಡು ನೂಲನ್ನು ಬಿಚ್ಚುವವರಿಗೆ ತೊಂದರೆ ಮಾಡುವ ಉದ್ದೇಶದಿಂದ ಮಾರ್ಕೆಟ್‌ನಲ್ಲಿ

ಏರುಪೇರು ಮಾಡುತ್ತಿದ್ದಾರೋ ಏನೋ ಅನಿಸುತ್ತದೆ. ಇದನ್ನು ತಡೆಯಬೇಕೆಂದು ಈ ಸಿಲ್ಕ್
ಮಾರ್ಕೆಟಿಂಗ್ ಬೋರ್ಡ್ ಎಂದು ಮಾಡಿ ಅವರಿಗೆ ಸಾಕಷ್ಟು ದುಡ್ಡು ಕೊಟ್ಟಿದ್ದಾರೆ. They must
enter the market. ರಾ ಸಿಲ್ಕ್ ಮಾರ್ಕೆಟ್‌ನಲ್ಲಿ ೩೦೦ ರೂ.ಗೆ ಜಾಸ್ತಿಯಾಗಬಾರದು, ೨೦೦
ರೂ.ಗೆ ಕೆಳಗಡೆ ಹೋಗಬಾರದು. This Marketing Board should enter the market
purchase and release the socks. ೨೦೦ ರೂ.ಗಿಂತ ಕೆಳಗೆ ಹೋದಾಗ ತಾನು
ಮಾರ್ಕೆಟ್‌ಗೆ ಬಂದು ಮಾಲನ್ನು ಪರ್ಚೇಸ್ ಮಾಡಬೇಕು. ಈ ಉದ್ದೇಶದಿಂದ ಈ ಬೋರ್ಡ್ ಕ್ರಿಯೇಟ್
ಆಯಿತು. ಅವರು ಹಿಂದಿನ ೪ ಕೋಟಿ ರೂ. ಮಾಲನ್ನು ಕೊಂಡಿದ್ದಾರೆ. ಆದರೆ ಈಗ ಕೊಳ್ಳುತ್ತಿಲ್ಲ.
ನಾವು ವರ್ತಕರನ್ನು ಕೇಳಿದಾಗ, ಸಿಲ್ಕ್ ಬೋರ್ಡ್‌ನವರು ಸಿಲ್ಕ್‌ನ್ನು ಕೊಳ್ಳುತ್ತಿಲ್ಲವೆಂದು ಹೇಳು
ತ್ತಿದ್ದಾರೆ, ಆದರೆ ಬೋರ್ಡ್‌ನವರು ನಾವು ಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅಂದರೆ ಇದು
ನನಗೆ ಏನು ಅರ್ಥವಾಗುತ್ತದೆ ಎಂದರೆ ಅವರಿಗೆ ೪ ಕೋಟಿ ರೂ.ಗೆ ಪ್ರಾವಿಷನ್ ಇತ್ತು ಅಂತ ಕಾಣು
ತ್ತಿದೆ. Therefore, the Silk Marketing Board should stock the silk to
its maximum capacity, ಅವರಿಗೆ ಫೇವರ್‌ಬಲ್ ಮಾರ್ಕೆಟ್ ಬರಲಿಲ್ಲ. ಕಳೆದ ವರ್ಷ
ನಾಲ್ಕೂವರೆ ಕೋಟಿ ರೂ.ಗೆ ಕೊಂಡಿದ್ದ ಎಲ್ಲ ಮಾಲನ್ನೂ ಈ ಸಾರಿ ೮ ಕೋಟಿ ರೂ.ಗೆ ಮಾರಾಟ
ಮಾಡಿದ್ದಾರೆ. ಇವರೂ ಕೂಡ ಸ್ವಲ್ಪ ಪ್ರಾಫಿಟ್ ಮಾಡುವುದಕ್ಕೆ ಹೋಗಿದ್ದಾರೆ. ಈ ಏರುಪೇರನ್ನು
ಸರಿಪಡಿಸುವುದಕ್ಕೆ ಇರತಕ್ಕ ಈ ಬೋರ್ಡ್ ಸರಿಯಾದ ರೀತಿಯಲ್ಲಿ ತನ್ನ ಕರ್ತವ್ಯವನ್ನು ಮಾಡುತ್ತಿಲ್ಲ
ಎನ್ನುವ ಶಂಕೆ ನನಗೆ ಬಂದಿದೆ. ಆದರೆ ಒಂದು ವಿಚಾರವನ್ನು ಅವರಿಗೆ ನಾನು ಹೇಳಬೇಕಾಗಿದೆ. ಅವರು
ನಷ್ಟವನ್ನು ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. ೮೦–೮೧ರಲ್ಲಿ ೧೮೧ ಮಿಲಿಯನ್ ಟನ್ ಕೊಂಡಿದ್ದಾರೆ.
೪.೯೨ ಕೋಟಿ ರೂ.ಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಆದರೆ ಹಿಂದಿನವರ್ಷದ ಸ್ಟಾಕೂ ಸೇರಿ ೨೮೪
ಮೆಟ್ರಿಕ್ ಟನ್‌ನ್ನು ಮಾರಿ ೮ ೫೨ ಕೋಟಿ ರೂ.ಗಳನ್ನು ಸಂಪಾದನೆ ಮಾಡಿದ್ದಾರೆ. ಆದರೆ ಈ
ವ್ಯವಹಾರ ರೇಷ್ಮೆ ಮಾರುಕಟ್ಟೆಯಲ್ಲಿ ಹೆಚ್ಚಿನ ಪರಿಣಾಮವನ್ನು ಉಂಟುಮಾಡಿಲ್ಲವೆಂದು ಹೇಳಬಯಸು
ತ್ತೇನೆ. ಏಕೆಂದರೆ ೮ ಸಾವಿರ ಕೋಟಿ ವ್ಯವಹಾರವಾಗತಕ್ಕ ಜಾಗದಲ್ಲಿ ಕೇವಲ ೪–೫ ಕೋಟಿ ರೂ,
ಇನ್‌ವೆಸ್ಟ್ ಮಾಡುವುದಾದರೆ ಅದು ಏನೇನೂ ಸಾಕಾಗುವುದಿಲ್ಲ. ಈ ಮಾರ್ಕೆಟ್‌ಮೇಲೆ ಹೆಚ್ಚಿನ ಪರಿ
ಣಾಮವನ್ನು ಬೀರಬೇಕೆಂದರೆ ಕೊನೇಪಕ್ಷ ೨೦೦–೩೦೦ ಕೋಟಿ ರೂ.ಗಳನ್ನಾದರೂ ಬಂಡವಾಳ ಹಾಕಿ
ಈ ಮಾರ್ಕೆಟ್ ಚೆನ್ನಾಗಿ ಕೆಲಸಮಾಡುವಂತೆ ಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾವು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್ ಎಂಬ
ವಂತಹೊಂದು ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದ್ದೇವೆ. ನಮ್ಮ ಕರ್ನಾಟಕದಲ್ಲಿರತಕ್ಕ ೭ ಫಿಲೇಚರ್‌ನಲ್ಲಿ
ಸುಮಾರು ೧ ಕೋಟಿ ರೂ. ಪ್ರತಿವರ್ಷ ಏನು ನಷ್ಟವಾಗುತ್ತಿದೆ ಅದನ್ನು ಸ್ಟಡಿ ಮಾಡಿ ಕೆಲವು ಬದಲಾವಣೆ
ಗಳನ್ನು ಮಾಡುವುದರ ಮೂಲಕ ಸರಿದೂಗಿಸಬಹುದು, ಇದಕ್ಕೆ ಒಂದು ರಿಪೋರ್ಟ್ ಕೊಡಿ ಎಂದು ಹಿಂದೆ
ಈ ಉಪಸಮಿತಿಯ ಸದಸ್ಯನಾಗಿ ಕೆಲಸಮಾಡುತ್ತಿದ್ದಾಗಲೇ ಕೇಳಿದ್ದೆ. ಆಗ ನಾನು ಇದೆಲ್ಲವನ್ನೂ ಸ್ಟಡಿ
ಮಾಡಿ ನೋಡಿದಾಗ ಸುಮಾರು ೫೦ ರಿಂದ ೬೦ ಲಕ್ಷ ರೂ.ಗಳ ವರೆಗೆ ಪ್ರತಿವರ್ಷ ಈ ಸಿಲ್ಕ್ ಫಿಲೇಚರ್
ನಿಂದ ಕಳೆದು ಕೊಳ್ಳುತ್ತಿದ್ದೇವೆಂದು ತಿಳಿದು ಬಂದಮೇಲೆ ನಾನು ಏನು ಸಲಹೆ ಮಾಡಿದೆ ಎಂದರೆ ಈ
ಎಲ್ಲ ಆರ್ಗನೈಸೇಷನ್‌ಗಳನ್ನೂ ಸೇರಿಸಿ ಸಿಲ್ಕ್ ಕಾರ್ಪೊರೇಟೀವ್ ಬಾಡಿ ಎಂದು ಮಾಡಿ ಅದಕ್ಕೆ ಬಂಡವಾಳ
ವನ್ನು ಕೊಟ್ಟರೆ ಅವರು ಆ ಉದ್ಯಮದಿಂದ ನಷ್ಟವಾಗದ ರೀತಿಯಲ್ಲಿ ಬಹಳ ಉತ್ತಮವಾಗಿ ವ್ಯವಹಾರ
ನಡೆಸಲು ಅನುಕೂಲವಾಗುತ್ತದೆ ಎಂದು ಹೇಳಿದೆ. ಆದರೆ ಇದು ಅಸ್ತಿತ್ವಕ್ಕೆ ಬಂದಮೇಲೆ ತನ್ನ
ದಿಕ್ಕನ್ನು ಬದಲಾಯಿಸಿದಂತೆ ಕಾಣುತ್ತಿದೆ. ತಮ್ಮ ವರದಿಯಲ್ಲಿ ಈ ರೀತಿ ಹೇಳಿದ್ದೀರಿ.

> " Karnataka Silk Industries Corporation Ltd., was established during 1980–81. The seven filatures, one twisting unit and one weaving factory and one spun silk mill which were being run as departmental undertaking will be brought under the Corporation. These provide employment to about 3,800 persons.'

ಇದು ನಿಮ್ಮ ರಿಪೋರ್ಟಿನಲ್ಲಿ ಇರತಕ್ಕಂಥದ್ದು. ಬೋರ್ಡ್ ಆಫ್ ಡೈರೆಕ್ಟರ್ಸ್‌ರವರು ಒಂದು ಪೊಸಿಷನ್ ಪೇಪರ್ ಇಲ್ಲಿ ಕೊಟ್ಟಿದ್ದಾರೆ. ಅದೇನೆಂದರೆ.

Position paper of Karnataka Silk Industries Corporation as on 31-5-1981 ಇದರಲ್ಲಿ ಏನು ಹೇಳಂತ್ತಾರೆಂದರೆ "It is proposed to take over the following units:

1. Government Spun Silk Mills, Channapatna,
2. Government Silk Weaving Factory, Mysore,
3. Government Silk Filature, T. Narasipur,
4. Government Silk Filature, Kanakapura,"

ಈಗ ಬರೇ ನಾಲ್ಕು ಇನ್ಸ್‌ಸ್ಟಿಟ್ಯೂಷನ್‌ಗಳನ್ನು ತೆಗೆದುಕೊಳ್ಳುತ್ತಿದ್ದೀರಿ, ಆದರೆ ೧೦ ಇನ್ಸ್‌ಟ್ಯೂಷನ್‌ಗಳನ್ನು ತೆಗೆದುಕೊಳ್ಳಬೇಕೆಂದು ತಾವೇ ರೆಸಲ್ಯೂಷನ್ ಮಾಡಿದ್ದೀರಿ. This is according to the position paper of the Karnataka Silk Industries Corporation. Further I draw your attention to the Annexure to that, ಇದರ ಪ್ರಕಾರ the details of the proposed capital expenditure of Karnataka Silk Industries Corporation Units ಜೊತೆಗೆ Silk Filature, T. Narasipur, Spun Silk, Channapatna, Silk Weaving Factory Mysore ಅಲ್ಲದೆ ಒಂದು ಹೊಸ ಇನ್‌ಸ್ಟಿಟ್ಯೂಷನ್. ಕ್ರಿಯೇಟ್ ಮಾಡಿದ್ದಾರೆ. Central Workshop is to supply the raw materials to keep up the entire machinery running. At present they have got a small workshop, but they want to create a big workshop at Channapatna with an investment of Rs. 67,00,000. ಅಂದರೆ ಅದರ ಒಂದು ಮೂಲ ಉದ್ದೇಶ ಕಾರ್ಪೋರೇಷನ್ ರಚನೆ ಮಾಡಿ ಇದಕ್ಕೆ ತಿಲಾಂಜಲಿ ಕೊಟ್ಟಂತೆ ಕಾಣುತ್ತದೆ. ಅದಕ್ಕೆ ನಾನು ಹೇಳುತ್ತಿದ್ದೇನೆ, ಈವತ್ತು ಒಟ್ಟು ಎಂಟುಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಸಿಲ್ಕ್ ಫಿಲೇಚರ್‌ನಲ್ಲಿ ಮತ್ತು ಸ್ಪನ್ ಸಿಲ್ಕ್‌ಮಿಲ್‌ನಲ್ಲಿ ಇಷ್ಟು ಮಾತ್ರ ತೆಗೆದು ಕೊಂಡರೂ ಸ್ವಲ್ಪ ಹೆಚ್ಚು ಕಡಿಮೆ ಎರಡುಸಾವಿರ ಜನಕ್ಕೆ ಉದ್ಯೋಗ ಕೊಡಬಹುದು. ಆದರೆ ಇನ್ನೂ ಎರಡು ಸಾವಿರ ಜನಗಳು ಕೆಲಸವನ್ನು ಕಳೆದುಕೊಂಡು ಮನೆಗೆ ಹೋಗಬೇಕಾಗುತ್ತದೆ. ಆದ್ದರಿಂದ ಈಗಲೂ ಸರ್ಕಾರ ನಡೆಸುತ್ತಿರುವ ಎಲ್ಲ ಫಿಲೇಚರ್ಸ್‌ಗಳನ್ನು ಟ್ವಿಸ್ಟಿಂಗ್ ಯೂನಿಟ್‌ಗಳನ್ನು ವೀವಿಂಗ್ ಫ್ಯಾಕ್ಟರಿಗಳನ್ನು ಮತ್ತೆ ಸ್ಪನ್ ಸಿಲ್ಕ್ ಮಿಲ್ಸ್‌ಗಳನ್ನೂ ಎಲ್ಲ ಕಾರ್ಖಾನೆಗಳನ್ನೂ ಕೂಡ ಈ ಒಂದು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರೇ ತೆಗೆದುಕೊಂಡು ನಡೆಸತಕ್ಕಂಥದ್ದು ಬಹಳ ಮುಖ್ಯವಾದ ಅಂಶ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸ್ವಾಮಿ, ಒಂದು ವಿಚಾರ ಕರ್ನಾಟಕ ಸರ್ಕಾರವನ್ನು ಕೇಳಬಯಸುತ್ತೇನೆ, ಬಹಳ ಸಂತೋಷ ಈ ಒಂದು ಕೈಗಾರಿಕೆ ಕುಂಟುಕೊಂಡು ನಡೆಯುತ್ತಿದೆ. We are not able to destroy it; it is going on, on its own accord. Take for example Korea, we have sent our officers to Korea. With the assistance of World Bank, one team, consisting of 18 officers has gone to Japan; they are in Japan now. They are studying the crop system and other things. Another team, consisting of 8 officers from the Central Silk Board, has also gone to Japan. Their duration is 2 months. You ask them to study what are the methods adopted in Korea. China is a communist country, but it is also competing in the World market. In fact they are trying to sell their Silk in the Indian Market. The 10% export orientation replenishment incentive scheme is there and in fact you are getting foreign exchange in the form of China Silk. So, we

should not allow such things to happen. Today, the Sericulture Industry is giving employment to 20 lakhs of people. You foregt the Sericulture Industry and tell me only one industry which can give employment to 20 lakhs of people. You cannot find even a single industry of this type which can give that much of employment opportunities. Do you want to kill this industry ? You have to go all out and do what is necessary for this industry. ನಿಜಕ್ಕೂ ಕೂಡ ಸರಿಯಾದ ರೀತಿಯಲ್ಲಿ ಸಹಾಯ ಮಾಡಿದರೆ ಇನ್ನೂ ಬಹಳ ಚೆನ್ನಾಗಿ ನಡೆಯುತ್ತದೆ. ಇದು ತುಂಬಾ ಮಂದಗತಿಯಲ್ಲಿ ನಡೆಯುತ್ತಿದೆ. ಇದನ್ನು ಬೆಳೆಸುವುದಕ್ಕೆ. ಪ್ರಯತ್ನ ಮಾಡಬೇಕು. We are not able to destroy this industry ; that is an achievement. If we try to flourish this industry, definitely, we will beat even China and Korea. Now, I would like to quote some figures. In 1962, the Korea's production was 300 metric tonnes and 1981, it is 7,000 tonnes. In Karnataka, the production of silk in the year 1962 was 1,300 metric tonnes. and today it is 2,500 tonnes What is our progress and what is their progress ? Are you not doing sericulture? Are there no favourable conditions to adopt and grow more ? You have to think over this problem by sending your officers and ask them to study things. Today, the World Bank has come forward to provide a loan of Rs. 80 crores. In addition to this, you can raise loans from other financial institutions and implement these schemes in rural areas. ಸುಮಾರು ೨೦ ಲಕ್ಷ ಜನಗಳಿಗೆ ಉದ್ಯೋಗವನ್ನು ಕೊಡತಕ್ಕಂಥ ಒಂದು ಉದ್ದಿಮೆ ಇದು. ೨೦ ಲಕ್ಷ ಜನಗಳಿಗೆ ಉದ್ಯೋಗವನ್ನು ಕೊಡತಕ್ಕಂಥ ಬೇರೆ ಯಾವುದಾದರೂ ಒಂದು ಉದ್ದಿಮೆ ಇದ್ದರೆ ಹೇಳಿಸ್ವಾಮಿ ನೋಡೋಣ ?. ಸೆಂಟ್ರಲ್ ಸಿಲ್ಕ್‌ಬೋರ್ಡ್ ಬಗ್ಗೆ ಈ ವಿಚಾರವನ್ನು ಮೊದಲೇ ಪ್ರಸ್ತಾಪ ಮಾಡಿದ್ದೆ. We thank the Government and the Chief Minister for having made all efforts to bring the Board. But, ಈಗ ಏನಾಗುತ್ತಿದೆ ಎಂದರೆ ನಮಗೆ ಅವರಿಂದ ಸಿಲ್ಕ್‌ಬೋರ್ಡ್ ಬರಬೇಕಾದರೆ ಅವರ ಕಂಡಿಷನ್ಸ್‌ಗೆ ನಾವು ಒಪ್ಪಬೇಕು. ಅವರು ಹೇಳಿದಹಾಗೆ ಆಫೀಸ್ ಮನೆ, ಸ್ಥಳ ಇನ್ನೂ ಮುಂತಾದ ಸವಲತ್ತುಗಳನ್ನು ನಾವು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಒಪ್ಪುವುದಿಲ್ಲ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಇಲ್ಲಿ ಜ್ಞಾಪಕಕ್ಕೆ ತರುತ್ತೇನೆ. ೧೯೬೮-೬೯ರಲ್ಲಿ ಶ್ರೀಮಾನ್ ಬಿ. ರಾಚಯ್ಯನವರು ಸಿರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ ಒಂದು ಜನರಲ್‌ಬಾಡಿ ಮೀಟಿಂಗ್ ಆಯಿತು. ಆಗ ಒಂದು ವೆಲ್‌ಕಮ್ ಅಡ್ರೆಸ್ ಮಾಡಿದರು. ಆಗ He has held out all assurances. You can go through his welcome address. ಕೇಂದ್ರ ಸರ್ಕಾರದವರು ರೇಷ್ಮೆ ಮಂಡಲಿಯನ್ನು ಬೆಂಗಳೂರಿಗೆ ತರುವ ಪಕ್ಷದಲ್ಲಿ ಏನೇನು ಸೌಕರ್ಯಗಳು ಬೇಕೋ ಅದನ್ನು ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಅದನ್ನು ಕೊಡಿಸಿಕೊಡಿ ಎಂದು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದ್ದಾರೆ. The Government's attitude remains the same, according to me. ಈಗ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ ಆಫೀಸ್ ಬಿಲ್ಡಿಂಗ್, ಮತ್ತು ಇತರೇ ಅನುಕೂಲತೆಗಳನ್ನು ಮಾಡಿಕೊಟ್ಟು ಬೊಂಬಾಯಿನಿಂದ ಬೆಂಗಳೂರಿಗೆ ಸೆಂಟ್ರಲ್ ಸಿಲ್ಕ್ ಬೋರ್ಡ್ ವರ್ಗಾವಣೆ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. Before 31st, the entire establishment should be changed from Bombay to Bangalore. ಈ ದಿಸೆಯಲ್ಲಿ ಎಲ್ಲ ವಿಚಾರಗಳನ್ನು ಪ್ರಸ್ತಾಪಮಾಡಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಕೇಂದ್ರ ರೇಷ್ಮೆ ಮಂಡಲಿಯನ್ನು ಸರಿಯಾಗಿ ಉಪಯೋಗಿಸಿಕೊಂಡಲ್ಲಿ ನೇರವಾಗಿ ಹೆಚ್ಚು ಸಹಾಯವನ್ನು ಪಡೆಯಬಹುದು. There must be some co-ordination between the Central Silk Board and the

State Government. We have to get some Central assistance and Central Funds. ಈಗ ನಾವು ಶೇಕಡ ೮೦ರಷ್ಟು ರೇಷ್ಮೆಯನ್ನು ಬೆಳೆಯುತ್ತಿದ್ದೇವೆ. ಇದನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಉಪಾಧ್ಯಕ್ಷರೇ ಈ ಸಭೆಯ ಮುಂದೆ ಕೈಗಾರಿಕೆ ಮತ್ತು ಹಣಕಾಸಿನ ಇಲಾಖೆ ಈ ಎರಡೂ ಪ್ರಮುಖವಾದ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಬೇಡಿಕೆಗಳನ್ನು ಈ ದಿವಸ ಸಭೆಯ ಅಂಗೀಕಾರಕ್ಕೆ ಮಂಡನೆ ಮಾಡಿದ್ದಾರೆ.

MR. DY. SPEAKER.—Before this, I would request the Government to release the lady Member of this House.........

SRI M. VEERAPPA MOILY.—Sir. the Hon. Members Sri H. D. Deve gowda and others wanted to know the position with regard to the arrest of Smt. Anasuya Gajanana Sharma. Now, I must say that they have been released at 3-45 P.M All of them have been released and none of them are in the Police costody.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಈ ಅಧಿಕಾರಕ್ಕೆ ಬಂದು ನಿನ್ನೆ ಹೇಳಿದಂಥ ಮಾತನ್ನು ಪುನರ್ ಉಚ್ಚಾರ ಮಾಡಬೇಕಾಗುತ್ತದೆ. ಒಂದು ವರ್ಷ ಐದು ತಿಂಗಳು ಗತಿಸಿದೆ. ಮಾನ್ಯ ಅರ್ಥ ಸಚಿವರು ೧೯೮೦ರಲ್ಲಿ ಅವರು ಹೊಸದಾಗಿ ಅರ್ಥ ಸಚಿವರಾದಮೇಲೆ ಈ ಸಭೆಗೆ ಏನು ಆದೇಶ ಕೊಟ್ಟಿದ್ದಾರೆ. ಬಡ್ಜೆಟ್ ಮಂಡನೆಯನ್ನು ಮಾಡತಕ್ಕಂಥ ಕಾಲದಲ್ಲಿ ಅವರು ಹೇಳಿದಂಥ ಒಂದು ಮಾತನ್ನು ಜ್ಞಾಪಕಕ್ಕೆ ತಂದುಕೊಡುತ್ತೇನೆ. ಪೇಜ್ ನಂ. ೧೯ರಲ್ಲಿ ಔದ್ಯಮಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಪ್ರಗತಿ ಸಾಕಷ್ಟು ತೃಪ್ತಿಕರವಾಗಿ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

೪-೩೦ ಪಿ.ಎಂ.

೧೯೮೦-೮೧ರ ಆಯವ್ಯಯ ಭಾಷಣದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಈ ರೀತಿ ಹೇಳಿದ್ದಾರೆ.—

"ಔದ್ಯಮಿಕ ಅಭಿವೃದ್ಧಿ ಕ್ಷೇತ್ರದಲ್ಲಿ, ಪ್ರಗತಿಯು ಸಾಕಷ್ಟು ತೃಪ್ತಿಕರವಾಗಿಲ್ಲ. ವಿದ್ಯುಚ್ಛಕ್ತಿ ಸರಬರಾಜಿನ ಜಟಿಲ ಪರಿಸ್ಥಿತಿ ಹಾಗೂ ಈ ಹಿಂದಿನ ಔದ್ಯಮಿಕ ನೀತಿಯ ಅಭಾವವೇ ಇದಕ್ಕೆ ಮುಖ್ಯ ಕಾರಣ. ಸದ್ಯದ ರಾಜಕೀಯ ಸ್ಥಿರತೆಯು ಔದ್ಯಮಿಕ ಅಭಿವೃದ್ಧಿಗೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವುದೆಂಬ ಭರವಸೆ ಕೊಡಬಯಸುತ್ತೇನೆ.

ನಾನು ಕಳೆದ ಸಾರಿ ಮಾತನಾಡಲಿಲ್ಲ. ಹಿಂದಿನ ಸಾರಿಯೂ ನಾನು ಮಾತನಾಡಲಿಲ್ಲ. ನಾವು ಸರ್ಕಾರಕ್ಕೆ ಸಾಕಷ್ಟು ಕಾಲಾವಕಾಶವನ್ನು ಕೊಡಬೇಕಾಗುತ್ತದೆ. ನಾನು ಮಾತನಾಡದೇ ಇದ್ದಾಗ ಹಲವಾರು ಜನ ಹಲವಾರು ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. I am not a competent politician to play to the gallery. I must accept that position. ಆದರೆ ಈ ಸದನದಲ್ಲಿ ಚರ್ಚೆ ಮಾಡುವಾಗ ನಮ್ಮಲ್ಲಿರುವ ಅಲ್ಪ ಸ್ವಲ್ಪ ಶಕ್ತಿಯ ಒಳಗೆ ಕೆಲಸ ಮಾಡಬೇಕಾಗುತ್ತದೆ. ಈ ವಿಷಯ ವನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಮುಂದಕ್ಕೆ ಹೋಗುವುದಿಲ್ಲ. ಮಾನ್ಯ ಅರ್ಥ ಸಚಿವರು ನಾನು ಮೇಲೆ ತಿಳಿಸಿದಂತಹ ಮಾತನ್ನು ಸದನದಲ್ಲಿ ಹೇಳುವಾಗ ನಮ್ಮ ರಾಜ್ಯದಲ್ಲಿ ಪೊಲಿಟಿಕಲ್ ಇನ್‌ಸ್ಟೆಬಲಿಟಿ ಇರಲಿಲ್ಲ. ಕರ್ನಾಟಕದಲ್ಲಿ ಸರ್ಕಾರ ಕೂಡಾ ಬದಲಾವಣೆ ಆಗಿರಲಿಲ್ಲ. ೧೯೭೨ ರಿಂದ ಒಂದೇ ಸರ್ಕಾರ ಇದೆ. ೧೯೭೮ರ ಪೂರ್ವದಲ್ಲಿ ಯಾವ ಸರ್ಕಾರ ಇತ್ತೋ ಅದೇ ಸರ್ಕಾರ ೧೯೭೮ನೇ ಇಸವಿ ಆದಮೇಲೂ ಇತ್ತು. ಮಧ್ಯೆ ದಲ್ಲಿ ೮-೧೦ ತಿಂಗಳ ಕಾಲ ಕೆಲವರು ಬಣ್ಣ ಬೇರೆ ಮಾಡಿ ಅದರ ಲೇಪವನ್ನು ಹಂಚಿಕೊಂಡರು. ಆದರೆ ಸರ್ಕಾರ ಒಂದೇ, ಇಲ್ಲಿ. ಕೇಂದ್ರದಲ್ಲಿ ಸರ್ಕಾರ ಬದಲಾಯಿತು. ಬಹುಶಃ ಅವರು ಕೇಂದ್ರವನ್ನು ಕುರಿತು ಮಾತನಾಡಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. "ವಿದ್ಯುಚ್ಛಕ್ತಿ ಸರಬರಾಜಿನ ಜಟಿಲ ಪರಿಸ್ಥಿತಿ" ಇದು ಕೇಂದ್ರದ ಸಮಸ್ಯೆಯಲ್ಲ, ಇದು ರಾಜ್ಯದ್ದೇ. ಆಗ ಪ್ರಧಾನಮಂತ್ರಿಗಳಾಗಿದ್ದ ಮಾನ್ಯ ಮುರಾರ್ಜಿದೇಸಾಯಿಯವರಿಗೆ, ವಿದ್ಯುಚ್ಛಕ್ತಿ ಸಮಸ್ಯೆ ಉದ್ಭವವಾಗಿದೆಯೆಂದು ಅಂದಿನ ಮುಖ್ಯ ಮಂತ್ರಿಗಳು ಹೇಳೇ ಇಲ್ಲ. ಹಿಂದಿನ ಮುಖ್ಯ ಮಂತ್ರಿಯವರು ಹೇಳೇ ಇಲ್ಲ. ರಾಜಕೀಯ ಅಸ್ಥಿರತೆ ಕರ್ನಾಟಕದಲ್ಲಿ ಬರಲಿಲ್ಲ. ಹಿಂದಿನ ಮುಖ್ಯಮಂತ್ರಿಯವರು ಚುನಾವಣೆ ಆಗುವವರೆಗೆ ಬಲವಾಗೇ

ಇದ್ದರು. ಆದರೆ ಪ್ರಗತಿ ಏಕೆ ಆಗಲಿಲ್ಲ ? ಕೇಂದ್ರದ ಕೈಗಾರಿಕಾ ವತಿಯಿಂದ ಆಗಲಿಲ್ಲವೆಂದು ಹೇಳುವುದಾದರೆ, ಸ್ವಾಮಿ ಅದನ್ನು ನಾನು ಸ್ವಲ್ಪ ನೋಡುತ್ತಾ ಇದ್ದೆ. In the Preface of the Sixth Plan document, Smt Indira Gandhi has said:

> "The progress of industrialisation over the last 30 year has been a striking feature of the Indian Economic Development. The process of industrialisation was the deliberate policy in the early 50s."

ಇದನ್ನು ಹೇಳಿಕೊಂಡು ಹೋಗಿದ್ದಾರೆ. ಇವರು ಜನತಾ ಬಗ್ಗೆ ವ್ಯಾಖ್ಯಾನ ಮಾಡಿಲ್ಲ, ಸ್ವಾಮಿ, ನಾನು ತಮಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. The average gowth rate has been about 4% per annum. From the year 1970-71 to 1979-80, till the last phase of the so called coalition Government headed by Sri Charan Singh. ಇದು ಆದಮೇಲೆ ಮತ್ತೊಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ನಾನು ಈ ಮಾತನ್ನು ಕಳೆದಸಾರಿ ಹೇಳಿದ್ದರೆ ಈ ಮಾತನ್ನು ಹೇಳುವುದಕ್ಕೆ ಹೋಗುತ್ತಾ ಇರಲಿಲ್ಲ. ಏನೋ ಅಸ್ಥಿರತೆಯಿಂದಾಗಿ ಕರ್ನಾಟಕದಲ್ಲಿ ಪ್ರಗತಿ ಆಗಲಿಲ್ಲ ಎಂದು ಹೇಳಿದ್ದಾರೆ. ಸ್ವಾಮಿ, ೩ನೇ ಪಂಚವಾರ್ಷಿಕ ಯೋಜನೆ, ೪ನೇ ಪಂಚವಾರ್ಷಿಕ ಯೋಜನೆ, ೫ನೇ ಪಂಚವಾರ್ಷಿಕ ಯೋಜನೆಗಳ ಬಗ್ಗೆ ನನ್ನಲ್ಲಿ ವಿವರ ಇದೆ. ಅವನ್ನು ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ.

> "As against the average growth rate of industrial production of 7% envisaged during the V Plan, the actual rate achieved during first four years of the V Plan was 2·6%.

The political stability was there. The present leadership was also there at that time. It went upto 9.5% during the emergency. The growth rate declined to 3.9% after the emergency period. ೩.೯ ಪರ್ಸೆಂಟ್‌ಗೆ ಹೋಯಿತು. ಎಂದರೆ ಏನು ಈ ಮಾತನ್ನು ಹೇಳಿದ್ದೀರಿ, ಇದಕ್ಕೆ ಬುಡ ಇಲ್ಲ. ಯಾವುದೇ ಆಧಾರದಿಂದ ಹೇಳಿದ ಮಾತು ಇದಲ್ಲ. ರಾಜಕೀಯವಾಗಿ ಹೇಳುವುದಾದರೆ, ಆ ಮಾತು ಬೇರೆ ನಾನು ಕೇಂದ್ರ ಸರ್ಕಾರದ ಒಂದು ಪಬ್ಲಿಕೇಷನ್‌ನಲ್ಲಿ ಹೇಳಿರುವುದನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವರು ಅಧಿಕಾರ ವಹಿಸಿಕೊಂಡು ಒಂದು ವರ್ಷ ಆಗಿ ಎರಡನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ಇವತ್ತು ನಾನು ಎರಡು, ಮೂರು ಪ್ರಶ್ನೆಗಳನ್ನು ನೇರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. "ಪೊಲಿಟಿಕಲ್ ಸ್ಟೆಬಿಲಿಟಿ" ಕೇಂದ್ರದಲ್ಲಿ ಒಬ್ಬ ಸಚಿವ ಸಂಪುಟ ಮಟ್ಟದ ಕೈಗಾರಿಕಾ ಮಂತ್ರಿಗಳು ಇದ್ದಾರೆಯೇ ; ಏನು ಪೊಲಿಟಿಕಲ್ ಸ್ಟೆಬಿಲಿಟಿ? ಕರ್ನಾಟಕದಲ್ಲಿ ಒಬ್ಬ ಕ್ಯಾಬಿನೆಟ್ ದರ್ಜೆಯ ಇಂಡಸ್ಟ್ರೀಸ್ ಮಿನಿಸ್ಟರ್ ಇದ್ದಾರೆಯೇ? ನಾನು ಮಾನ್ಯ ಮುಖ್ಯ ಮಂತ್ರಿಗಳು ಅಶಕ್ತರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರ ಶಕ್ತಿ ಎಷ್ಟೇ ಇರಬಹುದು. ಆದರೆ ಇಲ್ಲಿ ಒಬ್ಬ ಪೂರ್ಣ ಪ್ರಮಾಣದ ಸಚಿವ ಸಂಪುಟದ ಸಚಿವರು ಇದ್ದರೆ ಬಹುಶಃ ಈ ಕೈಗಾರಿಕಾ ಬೆಳವಣಿಗೆ ಬಗ್ಗೆ ನಮ್ಮ ಅಧಿಕಾರಿಗಳು ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಇದಕ್ಕೆ ಪ್ರತ್ಯೇಕ ಮಂತ್ರಿಗಳು ಇದ್ದರೆ ಅಧಿಕಾರಿಗಳಿಗೆ ಸಂದರ್ಶನ ಸಿಕ್ಕತಕ್ಕದ್ದು ಸುಲಭವಾಗುತ್ತದೆ. ಹಾಗೂ ಹೊರಗಡೆಯಿಂದ ಬರತಕ್ಕಂತಹ ಕೈಗಾರಿಕಾ ಮಂತ್ರಿಗಳನ್ನು ಭೇಟಿ ಮಾಡಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ದಿನವಿಡೀ ಕಾರ್ಯಕ್ರಮಗಳು ಇರುತ್ತವೆ, ಇವರಿಗೆ ಈ ಬಗ್ಗೆ ಚರ್ಚಿಸಲು ಕಾಲ ಕೂಡಾ ಸಿಕ್ಕದೇ ಹೋಗಬಹುದು. ಪೊಲಿಟಿಕಲ್ ಸ್ಟೆಬಿಲಿಟಿ ಇದ್ದಂತಹ ಕಾಲದಲ್ಲಿ ಕೇಂದ್ರದಲ್ಲಿ ಒಬ್ಬ ಪೂರ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಇಲ್ಲ. ಕರ್ನಾಟಕದಲ್ಲಿ ಒಬ್ಬ ಪೂರ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಇಲ್ಲ ಇನ್ನು ಪೊಲಿಟಿಕಲ್ ಸ್ಟೆಬಿಲಿಟಿ ಮಾತು ಬಂದಿದೆ. ಸಂಖ್ಯಾ ಬಲದಿಂದ ಪೊಲಿಟಿಕಲ್ ಸ್ಟೆಬಿಲಿಟಿ ಬರುವುದಕ್ಕೆ ಸಾಧ್ಯವಿಲ್ಲ. ನಿನ್ನೆ ಮಾನ್ಯ ಅಧ್ಯಕ್ಷರು, ಒಂದು ಮಾತನ್ನು ಹೇಳಿದರು. "ಇದು ಪಾರ್ಟಿ ಮೀಟಿಂಗ್ ಅಲ್ಲ" ಎಂದು ಹೇಳಿದರು. ಈ ವಿಷಯವನ್ನು ಇಲ್ಲಿಗೇ ಬಿಡುತ್ತೇನೆ. ಏಕೆಂದರೆ ಇದು ನಗೆಪಾಟಲು ಆಗಬಾರದು ತಾನೇ ? ನಾವು ಕಳೆದ ಒಂದು ವರ್ಷದಿಂದ ಎಷ್ಟು ಹೊಸ ಕೈಗಾರಿಕೆಗಳನ್ನು ಸ್ಥಾಪನೆ

ಮಾಡತಕ್ಕ ಬಗ್ಗೆ ಪರವಾನಿಗೆಯನ್ನು ಪಡೆದಿದ್ದೀರಿ ? ಮೇಜರ್ ಇಂಡಸ್ಟ್ರೀಸ್ ಆಗಲೀ ಅಥವಾ ಮೀಡಿಯಂ ಇಡಸ್ಟ್ರೀಸ್ ಆಗಲೀ, ಸ್ಮಾಲ್ ಸ್ಕೇಲ್ ಇಡಸ್ಟ್ರೀಸ್ ಆಗಲೀ, ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಆಗಲೀ ಅಥವಾ ಉಡ್ ಬೇಸ್ಡ್ ಇಂಡಸ್ಟ್ರೀಸ್ ಆಗಲಿ, ಕೆಮಿಕಲ್ ಇಂಡಸ್ಟ್ರೀಸ್ ಆಗಲಿ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಆಗಲಿ ಅಥವಾ ಎಂಜಿನಿಯರಿಂಗ್ ಇಂಡಸ್ಟ್ರೀಸ್ ಆಗಲಿ, ಯಾವುದೇ ವಿಭಾಗದಲ್ಲಿ ಎಷ್ಟು ತಾವು ಹೊಸ ಲೈಸೆನ್ಸ್‌ಗಳನ್ನು ಪಡೆದಿದ್ದೀರೆಂದು ತಿಳಿಸಬೇಕು.

೧೯೭೯-೮೦ರ ವಾರ್ಷಿಕ ವರದಿಯಲ್ಲಿ ಅಂದರೆ ಹಿಂದಿನ ಸರ್ಕಾರದವರು ಹೇಳಿದ್ದಾರೆ. ಅದಕ್ಕೆ ಹೋಲಿಸಿದರೆ ತಮ್ಮ ಸರ್ಕಾರದ ಸಾಧನೆ ಇಳಿಮುಖವಾಗಿದೆ, ಆ ಫಿಗರ್ಸ್ ನನ್ನಲ್ಲಿ ಇದೆ. ೧೯೭೯-೮೦ರಲ್ಲಿ During 1979-80 till March 1980, the State has received 34/25 letters of Intent/Industrial Licenses covering new investment in the large and medium sectors. The total investment involved here is Rs. 158-00 crores with an employment potential of 13,277 persons. ಈ ದಿಕ್ಕಿನಲ್ಲಿ ವಾರ್ಷಿಕ ವರದಿಯಲ್ಲಿ ೩೪ ಲೈಸೆನ್ಸ್‌ಗಳನ್ನು ಪಡೆದಿದ್ದೇವೆಂದು ಹೇಳಿದ್ದೀರಿ. ೫ ಸಾವಿರ ಜನ ಉದ್ಯೋಗ ಕಾರ್ಮಿಕರಿಗೆ ಉದ್ಯೋಗ ನಿರ್ಮಾಣ ಮಾಡಿದ್ದೇವೆಂದು ಹೇಳಿದ್ದಾರೆ. ೧೯೭೯-೮೦ಕ್ಕಿಂತ ೧೯೮೧ರಲ್ಲಿ ಇಳಿಮುಖವಾಗಿದೆ. ಇದು ತಮ್ಮ ಪ್ರಗತಿ ರಾಜಕೀಯವಾಗಿ ತಮಗೆ ಒಳ್ಳೆಯ ವಾತಾವರಣ ಪರಿಸರ ಚೆನ್ನಾಗಿದೆ ಎಂದು ಹೇಳಿದಂತಹ ಒಂದು ಭಾಷಣ ಏನಿದೆ, ಅದರ ಹಿನ್ನೆಲೆಯಲ್ಲಿ ಈ ಮಾತನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ, ತಮ್ಮ ಪ್ರಗತಿ ಇಮ್ಮುಖವಾಗಿ ನಡೆದಿದೆ. ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೋ ಕಾಲದಲ್ಲಿ ಹಳೇ ಮೈಸೂರು ಭಾಗದಲ್ಲಿ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿದಂತಹ ಕೈಗಾರಿಕೆಗಳೇನಿವೆ ಅವುಗಳನ್ನೇ ಹೇಳಿಕೊಂಡು ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗುತ್ತಾರೆ. ಆ ಒಂದು ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ಹೊಸದಾಗಿ ಕೈಗಾರಿಕೆಗಳನ್ನು ಎಷ್ಟರ ಮಟ್ಟಿಗೆ ಸ್ಥಾಪಿಸಿದ್ದೇವೆ ಎಂಬುದನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವು ಹಿಂದೆ ಬಿದ್ದಿದ್ದೇವೆ ಇದನ್ನು ಅರ್ಥಮಾಡಿಕೊಳ್ಳಬೇಕು. ೧೯೬೪ರಲ್ಲಿ ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಥಾಪನೆ ಮಾಡಿದ್ದೇವೆ. ಅದರ ಉದ್ದೇಶ ಈ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಯನ್ನು ಹೆಚ್ಚಿನ ವೇಗದಲ್ಲಿ ಆಗಬೇಕು ಅದಕ್ಕೆ ಸರಿಯಾದ ಬಂಡವಾಳ ತೊಡಗಿಸುವುದಕ್ಕೆ ಕೈಗಾರಿಕೆಗಳನ್ನು ಸುರು ಮಾಡುವುದಕ್ಕೆ ಬೇಕಾದ ಎಲ್ಲಾ ಪರಿಸರಗಳನ್ನು ಒದಗಿಸಿಕೊಡತಕ್ಕ ದೃಷ್ಟಿಯಿಂದ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ೧೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡುವುದರ ಮುಖೇನ ಈ ಒಂದು ಸಂಸ್ಥೆಯನ್ನು ೧೯೬೪ರಲ್ಲಿ ಪ್ರಾರಂಭ ಮಾಡಿದ್ದೇವೆ. ಈಗ ನಾವು ೧೯೮೧ರಲ್ಲಿ ಕಾಲಿಟ್ಟಿದ್ದೇವೆ. ತಾವು ಹೇಳುತ್ತೀರಿ ಇವತ್ತು ಆ ಕಾರ್ಪೊರೇಷನ್ನಿನ ಬಂಡವಾಳ ೧೫ ಕೋಟಿ ರೂಪಾಯಿ ಇದ್ದದ್ದು ೨೦ ಕೋಟಿಗೆ ಏರಿದೆ ಎಂದು. "Now the authorised share capital has been increased to Rs. 20 crores. ನಿಮ್ಮ ಸರ್ಕಾರ ಪ್ರಥಮವಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಒಂದು ನಿರ್ಣಯ ಮಾಡಿದಿರಿ. ಎಲ್ಲಾ ನಿವೃತ್ತ ಅಧಿಕಾರಿಗಳನ್ನು ತೆಗೆಯಬೇಕು ಎಂದು. ಕೆಲವು ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳನ್ನು ರಾಜಕೀಯವಾಗಿ ಇರತಕ್ಕವುಗಳನ್ನು ತೆಗೆದಿದ್ದೇವೆಂದು ಪ್ರಸ್ತಾಪ ಮಾಡಲಾಗಿದೆ. ಕೆಲವು ಉದ್ಯಮಗಳಿಗೋಸ್ಕರ ಅವಶ್ಯಕವಾಗಿ ಕೆಲವು ಕಾರ್ಪೊರೇಷನ್‌ಗಳು ಮತ್ತು ಬೋರ್ಡ್‌ಗಳಿವೆ. ಯಾವುದೇ ಬೆಳವಣಿಗೆಗೆ ಆತಂಕವಾಗದಂತ ರೀತಿಯಲ್ಲಿ ಕೆಲಸ ಮಾಡತಕ್ಕ ಜವಾಬ್ದಾರಿ ಸರ್ಕಾರಕ್ಕೆ ಇದೆ. ನಿಮ್ಮ ತೀರ್ಮಾನದ ಪ್ರಕಾರ ಹಿಂದೆ ಅಧ್ಯಕ್ಷರಾಗಿದ್ದವರನ್ನು ತೆಗೆದಿದ್ದೀರಿ ಇದು ನಿಮ್ಮ ಸರ್ಕಾರದ ನಿರ್ಣಯ. ಆದರೆ ನೀವು ಅಧಿಕಾರಕ್ಕೆ ಬಂದು ೧½ ವರ್ಷದಲ್ಲಿ ಎಲ್ಲಾ ಕಡೆ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಸರ್ಕಾರದ ಹಿರಿಯ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಪ್ರಗತಿಯ ಸಾಧನೆ ಏನು ? ದಯಮಾಡಿ ತಾವು ತಿಳಿಸಬೇಕು. ಕಾಂಗ್ರೆಸ್‌ನವರು ಇಲ್ಲ ರಿಟೈರ್ಡ್ ಅಧಿಕಾರಿಗಳು ಇಲ್ಲ. ಇವತ್ತು ನೀವು ಎಷ್ಟು ಹೊಸ ಉದ್ಯಮಗಳನ್ನು ಪಡೆದಿದ್ದೀರಿ (ಲೆಟರ್ ಆಫ್ ಇನ್‌ಟೆಂಟ್ಸ್) ಹೊಸ ಉದ್ಯಮಗಳಲ್ಲಿ ಬಂಡವಾಳವನ್ನು ಹೂಡಲಿಕ್ಕೆ ಸಾಧ್ಯವಾಗಿದೆಯೆ. ಈ ಸಭೆ ನಿಮ್ಮಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ನಿಮ್ಮ ಅಸ್ತಿತ್ವಕ್ಕೆ ಬಂದ ಮೇಲೆ ಸುಮಾರು ೫ ಕೋಟಿ

ರೂಪಾಯಿಗಳನ್ನು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಕೊಡಲಾಗಿದೆ. ೧೯೭೯–೮೦ರಲ್ಲಿ ಹಿಂದಿನ ಸರ್ಕಾರ ಸುಮಾರು ೧೩ ಕೋಟಿಗಳನ್ನು ಕೈಗಾರಿಕಾ ಬಂಡವಾಳದಲ್ಲಿ ಹೂಡಲಾಗಿದೆ. ಕರ್ನಾಟಕ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಿಂದ ೧೯೭೮–೭೯ರಲ್ಲಿ ೯ ಕೋಟಿ ಬಂಡವಾಳ ಹೂಡಿದ್ದಾರೆ. ಅಂದರೆ ಯಾವ ಉದ್ದೇಶದಿಂದ ಈ ಸಂಸ್ಥೆಯನ್ನು ಕೈಗಾರಿಕಾ ಬೆಳವಣಿಗೆ ಗೋಸ್ಕರ ಸ್ಥಾಪನೆ ಮಾಡಿದ್ದರೋ ಆ ಒಂದು ಕಾರಣಕ್ಕೋಸ್ಕರ ಒಬ್ಬ ಕೈಗಾರಿಕಾ ಉದ್ದಿಮೆಗೆ ಮೇಜರ್ ಬೇಡ ಮಿನಿಮಮ್ ಇನ್‌ವೆಸ್ಟ್ ಮಾಡತಕ್ಕ ಕಾಲದಲ್ಲಿ ಖಾಸಗೀಯವರು ಹಾಕತಕ್ಕದ್ದು ಸ್ವಾಭಾವಿಕ. ಅದಕ್ಕೋಸ್ಕರ ಈ ಸಂಸ್ಥೆಯನ್ನು ಜಾಯಿಂಟ್ ವೆಂಚರ್ ಮಾಡತಕ್ಕ ಪರಿಸ್ಥಿತಿ ಬಂದಾಗ, ಸಂಸ್ಥೆಯ ಬಂಡವಾಳ, ಸಾರ್ವಜನಿಕರಿಂದ ತೆಗೆದುಕೊಳ್ಳತಕ್ಕ ಬಂಡವಾಳ ಉದ್ದಿಮೆ ಮಾಡಲು ಮುಂದೆ ಬರತಕ್ಕ ವರು ಹಾಕತಕ್ಕ ಬಂಡವಾಳ ಇವುಗಳನ್ನು ಹಾಕಿಕೊಂಡು ಉದ್ದಿಮೆಯ ಬೆಳವಣಿಗೆ ಅತೀ ವೇಗವಾಗಿ ಬೆಳೆಯಲಿ ಎಂಬ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದೇವೆ. ಒಂದು ಕೈಗಾರಿಕೆ ಉದ್ದಿಮೆಯನ್ನು ಸ್ಥಾಪನೆ ಮಾಡುವಾಗ ೨೬ ಪರ್ಸೆಂಟ್ ಬಂಡವಾಳವನ್ನು ಈ ಸಂಸ್ಥೆ ಹೊಡಬೇಕು, ೨೫ ಪರ್ಸೆಂಟ್ ಹಣವನ್ನು ಉದ್ದಿಮೆಯನ್ನು ಸ್ಥಾಪನೆ ಮಾಡತಕ್ಕವರು ಹೂಡಬೇಕು ಉಳಿದೆ ಸುಮಾರು ೪೯ ಪರ್ಸೆಂಟ್ ಬಂಡವಾಳವನ್ನು ಸಾರ್ವಜನಿಕರಿಂದ ಎತ್ತುತಕ್ಕದ್ದು ಇದೆ. ಇವತ್ತು ದಯಮಾಡಿ ಹೇಳಬೇಕು ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೨೬ ಪರ್ಸೆಂಟ್ ಬಂಡವಾಳವನ್ನು ಹೂಡುವುದಕ್ಕೆ ಬದಲಾಗಿ it has been reduced to 10%. Why? Do you know Why ? ನಮ್ಮ ಪಕ್ಕದ ನೆರೆ ರಾಜ್ಯವಾದ ಆಂಧ್ರದಲ್ಲಿ ಸುಮಾರು ೧೬೦ ಕೋಟಿ ರೂಪಾಯಿ ಜಾಯಿಂಟ್ ವೆಂಚರ್ ಉದ್ದಿಮೆಗಳು ಅಸ್ತಿತ್ವದಲ್ಲಿವೆ. ಆಂಧ್ರ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ವತಿಯಿಂದ ೧೬೦ ಕೋಟಿ ರೂಪಾಯಿ ಬಂಡವಾಳವನ್ನು ಹೂಡಲಾಗಿದೆ. Whereas in Karnataka it is hardly 11.

ಏನು ಕಾಂಪ್ಯರಿಸನ್ ಇದೆಯೆ? ತಾವು ಭಾರಿ ಭಾರಿ ಉದ್ದಿಮೆಗಳಲ್ಲಿ ಖಾಸಗಿಯವರನ್ನು ತೆಗೆದು ಸರ್ಕಾರಿ ಅಧಿಕಾರಿಗಳನ್ನು ತಾವು ನೇಮಕ ಮಾಡಿದ್ದೀರಿ ಅದರಲ್ಲೂ ಸೀನಿಯರ್ ಐ.ಎ.ಎಸ್. ಆಫೀಸರ್ ಗಳು. They are heading these organisations. ಚೀಫ್ ಸೆಕ್ರೆಟರಿ, ಆಡಿಷನಲ್ ಚೀಫ್ ಸೆಕ್ರೆಟರಿ, ಫೈನಾನ್ಸ್ ಸೆಕ್ರೆಟರಿ, ಕೈಗಾರಿಕಾ ಸೆಕ್ರೆಟರಿಗಳು ಇದ್ದಾರೆ. ಭಾರಿ ಭಾರಿ ಆನೇಕ ಉದ್ದಿಮೆಗಳಲ್ಲಿ ಅದರಲ್ಲೂ ಮುಖ್ಯವಾದವುಗಳು ಇವುಗಳಲ್ಲಿ ಈ ಅಧಿಕಾರಿಗಳು ಅಧಿಕಾರ ನಿರ್ವಹಣೆ ಮಾಡುತ್ತಿದ್ದಾರೆ.

ನಿಮ್ಮ ಪ್ರಗತಿ ಎತ್ತ ಸಾಗಿದೆ ಅನ್ನುವುದನ್ನು ನೋಡಬೇಕಾಗಿದೆ, ಮಂಗಳೂರು ಫರ್ಟಿಲೈಸರ್ಸ್‌ಗೆ ಒಬ್ಬ ಹಿರಿಯ ಅಧಿಕಾರಿಯನ್ನು ಹಾಕಿದ್ದೀರಿ. ಹಾಗೆಯೇ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ಗೆ ಒಬ್ಬ ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ಛೇರ್ಮನ್ ಮಾಡಿ ಹಾಕಿದ್ದೀರಿ. ಹಾಗೆಯೇ Handloom Develoment Corporation and Handloom Development Board and Karnataka Small Scale Industries Corporation and NGEF ಇವಕ್ಕೆಲ್ಲಾ ಒಬ್ಬೊಬ್ಬ Senior most I.A.S. Officer ಅವರನ್ನು ಹಾಕಿದ್ದೀರಿ. ಹಾಗೆಯೇ ಷಿಪ್ಪಿಂಗ್ ಕಾರ್ಪೊರೇಷನ್‌ಗೆ ಒಬ್ಬರನ್ನು ಹಾಕಿದ್ದೀರಿ. ಹಾಗೆಯೇ ಕರ್ನಾಟಕ ಸ್ಟೇಟ್ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ಗ ಚೀಫ್ ಸೆಕ್ರೆಟರಿಯನ್ನು ಹಾಕಿದ್ದೀರಿ. ಹಾಗೆಯೇ ಕರ್ನಾಟಕ ಸ್ಟೇಟ್ ಫೈನಾಷಿಯಲ್ ಕಾರ್ಪೊರೇಷನ್‌ಗೆ ಫೈನಾನ್ಸ್ ಸೆಕ್ರೆಟರಿಯವರನ್ನು ಹಾಕಿದ್ದೀರಿ. ಈ ರೀತಿಯಾಗಿ ಸಾಮಾನ್ಯವಾಗಿ ಎಲ್ಲಾ ಸಂಸ್ಥೆಗಳಿಗೂ ಹಾಕಿದ್ದೀರಿ. ಈ ಬಗ್ಗೆ ನನಗೆ ತಾವು ಸ್ವಲ್ಪ ವಿವರಣೆ ಕೊಡಬೇಕು. ನಿಮ್ಮ, ಈ ಒಂದು ವರ್ಷದ ಆಡಳಿತದ ದಕ್ಷತೆ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ, ಅದಕ್ಕಾಗಿ ಹೆಚ್ಚು ಕಾಲವನ್ನು ಈಗ ಮೀಸಲಾಗಿಡದೇ ಇರವುದಕ್ಕೆ ಸಾಧ್ಯವಾಗದೇ ಇರಬಹುದು ಇದರ ಪರಿಣಾಮ ಈಗ ಏನಾಗಿದೆ ಎಂದರೆ ಈ ಒಂದು ವರ್ಷದ ನಿಮ್ಮ ಆಡಳಿತದಲ್ಲಿ ಯಾವುದಾದರೂ ಒಂದು ಇಂಡಸ್ಟ್ರಿ ಆಶಾದಾಯಕವಾಗಿ ಕೆಲಸ ಮಾಡುತ್ತಾ ಇದೆಯೋ ಅನ್ನುವುದು ನನಗೆ ಬೇಕಾಗಿದೆ. ಇದರಲ್ಲಿ ಕೇವಲ ೨–೩ ಇಂಡಸ್ಟ್ರೀಸ್ ಮಾತ್ರ ಸ್ವಲ್ಪ ಆಶಾದಾಯಕವಾಗಿ ಕೆಲಸ ಮಾಡುತ್ತಾ ಇದೆ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. (೧) ಎನ್.ಜಿ.ಇ.ಎಫ್ (೨) ಸೋಪ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದಂಥಾ ಈ ಒಂದು ಇಂಡಸ್ಟ್ರಿ ಮೇಲೆ ಕೆಲವರು ಆರೋಪಣೆ ಮಾಡಿದರು. ಆದರೂ ಸಹ

ಇದನ್ನು ರೆಕಾರ್ಡ್ ಮಾಡಿ ಹೋಗಿದ್ದಾರೆ. ಯಾವ ಇಂಡಸ್ಟ್ರಿ ಕೂಡ ನಮ್ಮ ಕರ್ನಾಟಕದಲ್ಲಿ ಇಷ್ಟೊಂದು ಎಸ್ಟ್ಯಾಬ್ಲಿಷ್ ಆಗಿಲ್ಲಾ. ಯಾವುದಾದರೂ ಇಂಡಸ್ಟ್ರೀಸ್ ಎಸ್ಟ್ಯಾಬ್ಲಿಷ್ ಆಗಿದ್ದರೆ. ಅದು ಮೈಸೂರು ಡಿಟರ್ಜೆಂಟ್ ಮತ್ತು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಮಾತ್ರ ಐರನ್ ಅಂಡ್ ಸ್ಟೀಲ್ ವರ್ಕ್ಸ್ ನೋಡಿದರೆ ಅದು ಬಹಳ ಲಾಸ್‌ನಲ್ಲಿ ನಡೆಯುತ್ತಾ ಇದೆ. ಬಾಕಿ ಎಲ್ಲಾ ಉದ್ದಿಮೆಗಳಲ್ಲೂ ಕೂಡ ಹಣ ಸೋರಿ ಹೋಗುತ್ತಾ ಇದೆ. ಇದರ ಬಗ್ಗೆ ನೇರವಾಗಿ ತಾವು ಈ ಸಭೆಗೆ ವಿವರಣೆ ಕೊಡಬೇಕು ಎಂದು ಹೇಳುತ್ತೇನೆ. ಕಳೆದ ಒಂದು ವರ್ಷದ ಆಡಳಿತದಲ್ಲಿ ಕೇವಲ ಅಧಿಕಾರಿಗಳನ್ನು ಆ ಸ್ಥಾನದಲ್ಲಿ ಇಟ್ಟಿದ್ದರೂ ಕೂಡ ತಮ್ಮ ಕರ್ತವ್ಯ ನಿರ್ವಹಣೆ ಮಾಡತಕ್ಕಂಥಾ ಕಾಲದಲ್ಲಿ ಆ ಉದ್ದಿಮೆಗಳಲ್ಲಿ ಆಗತಕ್ಕಂಥಾ ನಷ್ಟವನ್ನು ತುಂಬು ವುದಕ್ಕೆ ಏತಕ್ಕೆ ಆಗಲಿಲ್ಲಾ ? ನಿಮ್ಮ ಮುನ್ನುಡಿ ಏತಕ್ಕೆ ಬರಲಿಲ್ಲಾ ? ಅದಕ್ಕೆ ತಾವು ಉತ್ತರ ಕೊಡ ಬೇಕಾಗುತ್ತದೆ. ೧೯೮೦ರ ಪಿ.ಯು.ಸಿ ಕಮಿಟಿ ರಿಪೋರ್ಟ್ ಅನ್ನು ಕೂಲಂಕಷವಾಗಿ ಪರಿಶೀಲನೆ ಮಾಡು ವುದಾದರೆ Karnataka State Agro Industries Corporation is also headed by a Senior most I.A.S. Officer. ಹಾಗೆಯೇ ಮಂಗಳೂರು ಫರ್ಟಿಲೈಸರ್ಸ್ ಮತ್ತು ದಾವಣಗೆರೆ ಷುಗರ್ ಫ್ಯಾಕ್ಟರಿ ಮತ್ತು ಕರ್ನಾಟಕ ಕಾಂಪೋಸ್ಟ್ ಫ್ಯಾಕ್ಟರಿ ಹೀಗೆ ಸಾಮಾನ್ಯವಾಗಿ ಎಲ್ಲಾ ಫ್ಯಾಕ್ಟರಿಗಳಲ್ಲೂ ಕೂಡ ಸೀನಿಯರ್ ಮೋಸ್ಟ್ ಆಫೀಸರ್ಸ್‌ನ್ನು ನೇಮಕ ಮಾಡಿಕೊಂಡಿದ್ದಾರೆ. ನಾನು ಮೊದಲೇ ಹೇಳಿದ ೨–೩ ಇಂಡಸ್ಟ್ರೀಸ್ ಬಿಟ್ಟರೆ ಮತ್ತಾವುದರಲ್ಲೂ ಇವರು ಪ್ರಗತಿಯನ್ನು ಸಾಧಿಸಿಲ್ಲಾ. ಸಾಧಿಸುವುದಕ್ಕೂ ಆಗಿಲ್ಲ ಅನ್ನುವ ಮಾತನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಅನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕದಲ್ಲಿರುವ ಉದ್ದಿಮೆಗಳ ಬೆಳವಣಿಗೆ ಈ ರೀತಿಯಾಗಿ ಕುಂಠಿತವಾಗುವುದಕ್ಕೆ ಕಾರಣ ಏನು ? ತಮ್ಮ ಒಂದು ವರ್ಷದ ಆಡಳಿತದಲ್ಲಿ ಬರೇ ಸರ್ಕಾರೀ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಿದ ಮೇಲೂ ಈ ರೀತಿ ಕುಂಠಿತವಾಗುವುದಕ್ಕೆ ಕಾರಣ ಏನು ? ೫೨ ತಾಲ್ಲೂಕುಗಳನ್ನು ತಾವು ಹಿಂದುಳಿದ ತಾಲ್ಲೂಕುಗಳೆಂದು ತಾವು ಇಂಡಸ್ಟ್ರಿಯಲ್ಲಿ ಬ್ಯಾಕ್‌ವಡ್ ಎಂದು ಘೋಷಣೆ ಮಾಡಿದ್ದೀರಿ. ಈ ರೀತಿಯಾಗಿ ಘೋಷಣೆ ಮಾಡಿದ ಮೇಲಾದರೂ ಆ ಮೇಲೆ ಅದರಲ್ಲಿ ಯಾವ ಪ್ರಗತಿಯನ್ನು ಸಾಧಿಸಿದ್ದೀರಿ ? ಈ ೫೨ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು ಎಂದು ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಯಾವ ಒಂದು ಅಥಾರಿಟಿ ಮೇಲೆ ತೆಗೆದುಕೊಂಡಿದ್ದೀರಿ ಅನ್ನುವುದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಈವೊತ್ತು ಯಾವ ಯಾವ ತಾಲ್ಲೂಕುಗಳನ್ನು ಇಂಡಸ್ಟ್ರಿಯಲ್ ಬ್ಯಾಕವರ್ಡ್ ಏರಿಯಾಸ ಅಂತ ಘೋಷಣೆ ಮಾಡಿದ್ದೀರಿ ನನ್ನ ಹತ್ತಿರ ಆ ಪಟ್ಟಿ ಇದೆ ಆದ್ದರಿಂದ ಹೇಳುತ್ತಿದ್ದೇನೆ. ಈ ರೀತಿಯಾಗಿ ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದೀರಿ ಅನ್ನುವುದು ನನಗೆ ಸರಿಯಾಗಿ ಹೇಳುವುದಕ್ಕೆ ಗೊತ್ತಾಗುತ್ತಾ ಇಲ್ಲ. ಈವಾಗ ನೀವು ಅಧಿಕಾರದಲ್ಲಿರುವುದರಿಂದ it is my visdom ಅಂತ ಏನಾದರೂ ಮಾಡಿದ್ದೀರಾ ? ಹೋಗಲಿ ಈ ತರಹ ಒಂದು ನಿರ್ಣಯ ತೆಗೆದು ಕೊಂಡ ಮೇಲೆ ಅಲ್ಲಿಯ ಪ್ರಗತಿ ಏನಾದರೂ ಸಾಧಿಸಿದ್ದೀರಾ ? ಹಾಗೆ ಪ್ರಗತಿ ಸಾಧಿಸದೇ ಇರುವುದಕ್ಕೆ ಕಾರಣ ಏನು ? ತಮಗೆ ಹೇಳಬೇಕಾದರೆ ಈವೊತ್ತಿನದಿವಸ ಇಡೀ ರಾಜ್ಯದ ಸಮಗ್ರ ಚಿತ್ರ ಈ ಕೈಗಾರಿಕೆ ಬೆಳೆಯುವ ದೃಷ್ಟಿಯಿಂದ ಮಾಡಬೇಕಾಗಿತ್ತು, ಅದು ಈಗ ನಮ್ಮ ಮುಂದೆ ಇಲ್ಲ. ಅದಕ್ಕಾಗಿ ನಾನು ೧೯೭೭ ರಲ್ಲೇ ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇಡೀ ರಾಜ್ಯಕ್ಕೆ ಅನ್ವಯ ವಾಗುವಂಥಾ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆ ದೃಷ್ಟಿಯಿಂದ ಒಂದು ಬ್ಲೂ ಪ್ರಿಂಟ್ ಅನ್ನು ತಯಾರು ಮಾಡಬೇಕು ಎಂದು ಪ್ರಸ್ತಾಪ ಮಾಡಿದ್ದೆ. ಯಾವ ಯಾವ ಭಾಗ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಹಿಂದುಳಿದ ಭಾಗವಾಗಿದೆ ಅದನ್ನು ಗುರುತಿಸಿ ಎಲ್ಲೆಲ್ಲಿ ಮೇಜರ್ ಇಂಡಸ್ಟ್ರಿ ಹಾಕಬಹುದು, ಎಲ್ಲೆಲ್ಲಿ ಮಿಡಿಯಂ ಇಂಡಸ್ಟ್ರಿ ಹಾಕಬಹುದು, ಎಲ್ಲೆಲ್ಲಿ ಆಗ್ರೋ ಬೇಸ್ಡ್ ಇಂಡಸ್ಟ್ರಿ ಹಾಕಬಹುದು ಮತ್ತು ಎಲ್ಲೆಲ್ಲಿ ರಾಮೆಟೀರಿಯಲ್ಸ್ ಸಿಕ್ಕುತ್ತದೆ ಅಲ್ಲಿ ಯಾವ್ಯಾವ ಇಂಡಸ್ಟ್ರಿ ಹಾಕಬಹುದು ಹಿಂದುಳಿದಿರತಕ್ಕಂಥಾ ಭಾಗದ ಬಗ್ಗೆ ಒಂದು ಬ್ಲೂ ಪ್ರಿಂಟ್ ಅನ್ನು ತಯಾರು ಮಾಡುವುದಕ್ಕೆ ತಾವು ಈಗಾದರೂ ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಹಿಂದೆ ಈ ವಿಚಾರವಾಗಿ ಪ್ರಸ್ತಾಪ ಮಾಡಿದರೂ ಸಹ ಅದು ಕಾರ್ಯ ರೂಪಕ್ಕೆ ಇದುವರೆಗೆ ಬಂದಹಾಗೆ ಕಾಣಲಿಲ್ಲಾ. ಯಾರೇ ಅಧಿಕಾರದಲ್ಲಿರಲಿ ಅವರಿಗೆ ಪದೇ ಪದೇ ಈ ವಿಚಾರವನ್ನು ಗಮನಕ್ಕೆ ತಂದು ಇದರ ಬಗ್ಗೆ ಸಲಹೆ ಕೊಟಿದ್ದರೂ ಕೂಡ ಇದುವರೆಗೂ ಮಾಡಲಿಲ್ಲಾ. ಯಾವಾಗಲೂ ಇದೇರೀತಿಯಾಗಿ ಮುಂದುವರೆಸಿಕೊಂಡು ಹೋಗುವುದು ಸಹ ರಾಜ ಕೀಯವಾಗಿ ಸಹಜವಾಗಿಯೇ ಇದೆ ಈವೊತ್ತಿನ ದಿವಸ ಇಡೀ ರಾಜ್ಯಕ್ಕೆ ಅನ್ವಯವಾಗುವಂಥ ಒಂದು ಬ್ಲೂ ಪ್ರಿಂಟ್ ಅನ್ನು ತಯಾರು ಮಾಡಿದ್ದರೆ ನೀವ್ಯಾತಕ್ಕೆ ಹೊರಗಡೆ ಹೋಗಿ ಎಂಟರ್‌ಪ್ರೆನರ್ಸ್‌ನ್ನು ಇಲ್ಲಿಗೆ ಬರುವುದಕ್ಕೆ ಕರೆಯುತ್ತಿದ್ದೀರಿ. ಇದರಿಂದಾಗಿ ಹೊರಗಡೆಯವರು ಇಲ್ಲಿ ಬಂಡವಾಳ ಹೂಡು

ವುದಕ್ಕೆ ಅನುಕೂಲವಾಗಿ ನಮ್ಮ ರಾಜ್ಯದ ಲಾಭವನ್ನು ಪಡೆಯುತ್ತಿದ್ದಾರೆ ಅವರು ಹಿಂದುಮುಂದು ನೋಡದೆ ಇಲ್ಲಿಗೆ ಬರುತ್ತಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಹೊರಗಡೆ ಹೋಗಿ ಬಾಂಬೆ ಕಲ್ಕತ್ತಾಗೆ ಹೋಗಿ ಎಂಟರ್‌ಪ್ರೆನರ್ಸ್ ಅನ್ನು ಇಲ್ಲಿಗೆ ಬನ್ನಿ ಎಂದು ಕರೆಯುವಂಥಾದ ಸರಿಯಲ್ಲ. ಈವೊತ್ತು ಕೇಂದ್ರದಲ್ಲಿ ಹಲವಾರು ಫೈನಾನ್ಸಿಂಗ್ ಏಜೆನ್ಸೀಸ್ ಇವೆ. ಕೇಂದ್ರ ಸರ್ಕಾರದಿಂದ ಬೇರೆ ಬಂಡವಾಳ ಹೂಡಿ ಲಾಭ ಮಾಡತಕ್ಕಂಥಾ ಏಜೆನ್ಸೀಸ್ ಇವೆ. ಈ ಬಗ್ಗೆ ಕೆಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಹಣ ಪಡೆಯಲಿಕ್ಕೆ ಆಗಲಿಲ್ಲಾ. ಆದ್ದರಿಂದ ನಮ್ಮ ಕರ್ನಾಟಕದ ಉದ್ದಿಮೆ ಬೆಳವಣಿಗೆ ಕುಂಠಿತವಾಗಿದೆ ಎಂದು ಹೇಳಬೇಕಾಗಿದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಎಕನಾಮಿಕ್ ಸರ್ವೆ ೧೯೮೦-೮೧ರಲ್ಲಿ ಏನು ಕೋಟ್ ಮಾಡಿದ್ದಾರೆ ಅನ್ನುವುದರ ಬಗ್ಗೆ ಒಂದೇ ಒಂದು ಪ್ಯಾರಗ್ರಾಫ್ ಅನ್ನು ತಮ್ಮ ಮುಂದೆ ಓದುತ್ತೇನೆ ಅದು ಈ ರೀತಿ ಇದೆ.—Financial assistance by Central Financial Institutions during 1979-80, ಅಂತ ಹೇಳಿ ಅದರಲ್ಲಿ ಏನಿದೆ ಅಂದರೆ Sir, the per capital assistance what we have received for the institutions ಅಂತ ಇಷ್ಟು ಮಾತ್ರ ಕೋಟ್ ಮಾಡಿದ್ದಾರೆ ಆ ಪ್ರಕಾರ the per capita assistance for Gujarath was Rs. 105 and for Karnataka only Rs. 52 ಅಂತ ಇದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ನೀವು ನಿಮ್ಮ ಕರ್ತವ್ಯದಲ್ಲಿ ವಿಳಂಬ ಮಾಡಿದ್ದರಿಂದ ಈವೊತ್ತು ಈ ರೀತಿಯಾಗಿದೆ ಅನ್ನುವ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಾದದ ಬಗ್ಗೆ ನಾನು ತಮ್ಮ ಗಮನಕ್ಕೆ ತರುವುದಾದರೆ ರಾಜಕೀಯ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡತಕ್ಕಂಥಾದು ಸರಿಯಲ್ಲ, ರಾಜ್ಯದ ಪ್ರಗತಿಯ ದೃಷ್ಟಿಯಿಂದ ಕೆಲಸ ಮಾಡಬೇಕು, ರಾಜ್ಯದ ಜವಾಬ್ದಾರಿ ಹೊತ್ತಿರತಕ್ಕಂಥಾವರು ಈ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಈ ಕಡೆಗೆ ತಮ್ಮ ಗಮನವನ್ನು ಹರಿಸಬೇಕು ಎಂದು ಹೇಳುತ್ತೇನೆ. ಇಡೀ ರಾಜ್ಯಕ್ಕೆ ಅನ್ವಯವಾಗತಕ್ಕಂಥ ಕೈಗಾರಿಕೆ ಬೆಳೆಯುವ ದೃಷ್ಟಿಯಿಂದ ತಾವು ಒಂದು ಬ್ಲೂ ಪ್ರಿಂಟ್ ಅನ್ನು ತಯಾರು ಮಾಡಬೇಕೆಂದು ನಾನು ಪುನಃ ಸಲಹೆ ಕೊಡಲು ಇಷ್ಟಪಡುತ್ತೇನೆ.

೫-೦೦ ಪಿ.ಎಂ.

ಇವತ್ತು ಕೇಂದ್ರ ಸರ್ಕಾರ ಕೆಲವು ಇನ್‌ಸೆಂಟೀವ್ಸನ್ನು ಕೊಡಬೇಕೆಂದು ತೀರ್ಮಾನ ಮಾಡಿದೆ. ಕಳೆದ ವರ್ಷ ೧೫ ಪರ್ಸೆಂಟ್ ಇನ್‌ಸೆಂಟೀವ್ಸ್ ಕೊಡಬೇಕೆಂದು ಒಂದು ಗೌರ್ನ್‌ಮೆಂಟ್ ಆರ್ಡರ್ ಮೂಲಕ ಅನೌನ್ಸ್ ಮಾಡಿದ್ದಾರೆ. ನೀವು ಅದಕ್ಕೆ ೧೦ ಪರ್ಸೆಂಟ್ ಸಬ್ಸಿಡಿಯನ್ನು ಕೊಡಬೇಕೆಂದು, ಅದನ್ನು ಇನ್‌ಸೆಂಟೀವ್ ರೂಪದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಈ ಇನ್‌ಸೆಂಟಿವ್ ಅನ್ನು ಕೊಡತಕ್ಕಂಥ ಉದ್ದೇಶ ಏನೆಂದರೆ ಯಾವ ಭಾಗ ಇವತ್ತು ಹಿಂದುಳಿದೆಯೋ ಆ ಭಾಗದ ಪ್ರಗತಿಗೆ ಇದರಿಂದ ಹೆಚ್ಚು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಅದನ್ನು ಕೊಟ್ಟಿದ್ದಾರೆ. ಈ ಒಂದು ದೃಷ್ಟಿಯಿಂದಲೇ ಅವರು ಈ ಒಂದು ನೀತಿಯನ್ನು ಘೋಷಣೆ ಮಾಡಿದ್ದಾರೆ. ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ನಾನು ಮೊದಲೇ ಹೇಳಿದಹಾಗೆ ನೀವು ೫೨ ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೀರಿ ; ಇದನ್ನು ಗಮನದಲ್ಲಿಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳು ಇದೆಯೋ ಅಂತಹ ಪ್ರದೇಶದಲ್ಲಿ ಔದ್ಯಮೀಕರಣದ ಬೆಳವಣಿಗೆಗೆ ಆಗಬೇಕೆಂದು ಹೇಳಿ ಈ ಇನ್‌ಸೆಂಟಿವ್ ಅಥವಾ ಸಬ್ಸಿಡಿ ಮತ್ತಿತರ ಹಲವಾರು ರಿಯಾಯಿತಿಗಳನ್ನು ಕೊಡಬೇಕೆಂದು ನೀವು ನಿರ್ಣಯ ಮಾಡಿದ್ದೀರಿ. ಈ ಸಂದರ್ಭದಲ್ಲಿ ನಾನು ತಮಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ರಾಜ್ಯದಲ್ಲಿ ಯಾವ ಭಾಗದಲ್ಲಿ ಏನೊಂದು ಪರಿಸ್ಥಿತಿ ಇದೆ ಎಂಬುದನ್ನು ಮೊದಲು ಗುರುತಿಸಿ ಆಮೇಲೆ ಈ ಬಗ್ಗೆ ತಮ್ಮ ಒಂದು ನೀತಿ ಏನಿದೆ ಎಂಬುದನ್ನು ಘೋಷಣೆಮಾಡಿ. ನೀವು ಇಟ್ಟುಕೊಂಡಿರತಕ್ಕ ಇಂಡಸ್ಟ್ರಿಯಲ್ ಪಾಲಿಸಿ ಏನಿದೆ ಅದರ ಬಗ್ಗೆ ನೀವು ಒಂದು ವೈಟ್ ಪೇಪರನ್ನು ಪಬ್ಲಿಷ್ ಮಾಡಬೇಕಾಗುತ್ತದೆ. ನಿರಂತರವಾಗಿ ೫ ವರ್ಷದವರೆಗೆ ಅದಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆ ಬರದ ರೀತಿಯಲ್ಲಿ ಅದನ್ನು ಮುಂದುವರಿಸಿಕೊಂಡು ಹೋಗಬೇಕು. ೧೯೭೮ರ ಚುನಾವಣೆ ಆದಮೇಲೆ ಈ ರಾಜ್ಯದಲ್ಲಿ ಇಬ್ಬರು ಮಾನ್ಯ ಮುಖ್ಯ ಮಂತ್ರಿಗಳು ಬದಲಾವಣೆಯಾಗಿದ್ದಾರೆ. ಇದು ರಾಜಕಾರಣಕ್ಕೆ ಸಂಬಂಧಪಟ್ಟ ವಿಷಯ ಇದು ಬೇರೆ. ಆದರೆ ಈಗ ರಾಜ್ಯದಲ್ಲಿ ಆಡಳಿತ ಮಾಡ

ತಕ್ಕಂಥ ಸರ್ಕಾರದಲ್ಲಿ ಕೈಗಾರಿಕಾ ನೀತಿ ಏನಿದೆ ಎಂಬುದನ್ನು ಸ್ಪಷ್ಟೀಕರಣ ಮಾಡತಕ್ಕಂಥ ಕಾಲದಲ್ಲಿ ಇವರ ಇಂಡಸ್ಟ್ರಿಯಲ್ ಪಾಲಿಸಿ ಏನು ಎನ್ನತಕ್ಕಂಥಾದರ ಬಗ್ಗೆ ಒಂದು ವೈಟ್ ಪೇಪರನ್ನು ನೀವು ಪಬ್ಲಿಷ್ ಮಾಡಿ. ಹಾಗೆ ಮಾಡುವಾಗ ಅದನ್ನು ೪ ಶ್ರೇಣಿಯಲ್ಲಿ ವರ್ಗೀಕರಣ ಮಾಡಿ. ಒಂದನೆಯದು ಕೈಗಾರಿಕೆಯಲ್ಲಿ ಅತಿ ಹೆಚ್ಚು ಬೆಳವಣಿಗೆಯಾಗಿರತಕ್ಕಂಥ ಪ್ರದೇಶವನ್ನು ಗುರುತಿಸಿ. ಎರಡನೆಯದಾಗಿ ಕೆಲವು ಫಾರೆಸ್ಟ್ ಅಂಡ್ ಪ್ಲಾಂಟೇಷನ್ಸ್ ಏರಿಯಾ ಏನಿದೆ ಅದನ್ನು ಎಲ್ಲಿ ಅರಣ್ಯವನ್ನು ನಾಶ ಮಾಡತಕ್ಕಂಥಾದಕ್ಕೆ ಅವಕಾಶ ಇಲ್ಲದೇ ಇರತಕ್ಕಂಥ ಏರಿಯಾ ಏನಿದೆ ಅದನ್ನು ೨ನೇ ದರ್ಜೆಗೆ ವರ್ಗೀಕರಣ ಮಾಡಿ. ಇಲ್ಲಿ ಇಂಡಸ್ಟ್ರೀಸ್ ಬರಬಾರದು ಎಂದು ನಾನು ಹೇಳುವುದಿಲ್ಲ. ಇಂಡಸ್ಟ್ರೀಸ್ ಬೆಳವಣಿಗೆ ಕೆಲವು ಕಡೆ ಅನಾವಶ್ಯಕವಾಗಿ ಬಂದು ಅದರಿಂದ ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ. ಬೆಂಗಳೂರಿನಲ್ಲಿ ಹಲವಾರು ಇಂಡಸ್ಟ್ರೀಸ್‌ಗಳು ಬಂದಿದೆ. ಇಂತಹ ಕಡೆ ಅವರಿಗೆ ಸಾಕಷ್ಟು ಸವಲತ್ತುಗಳನ್ನು ಕೊಡಬೇಕಾಗುತ್ತದೆ, ನಾನು ಹೇಳಿದ್ದು ಏನೆಂದರೆ ನ್ಯಾಚುರಲ್ ಆಗಿ ಇರತಕ್ಕಂಥ ಇದನ್ನು ಉಳಿಸಿಕೊಂಡು ಹೋಗಬೇಕಾದರೆ ಪ್ಲಾಂಟೇಷನ್ ಇರತಕ್ಕಂತ ಏರಿಯಾ ಮತ್ತು ಫಾರೆಸ್ಟನ್ನು ರೀಟೈನ್ ಮಾಡತಕ್ಕಂಥ ಕಡೆ ಹೆಚ್ಚು ಉತ್ತೇಜನ ಕೊಡಬೇಕಾಗಿ ಬರುವುದಿಲ್ಲ, ಕಲ್ಕತ್ತ, ಬೊಂಬಾಯಿ, ಮದ್ರಾಸಿಗೆ ನಮ್ಮದನ್ನು ಹೋಲಿಸಿದಾಗ ಈ ಬೆಂಗಳೂರು ಅಷ್ಟೊಂದು ಬೃಹದಾಕಾರವಾಗಿ ಬೆಳೆದಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಕೆಲವು ಸಮಸ್ಯೆಗಳನ್ನು ನಾವಾಗಿ ನಿರ್ಮಾಣ ಮಾಡಿಕೊಳ್ಳುವುದಕ್ಕೆ ಬದಲಾಗಿ ಇಲ್ಲಿ ಕೆಲವು ಇಂಡಸ್ಟ್ರಿಗಳನ್ನು ಪರ್ಮಿಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಇಂಜಿನಿಯರಿಂಗ್ ಇಂಡಸ್ಟ್ರೀಸ್ ಇರಬಹುದು ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಇರಬಹುದು. ಮೊದಲೇ ಜಟಿಲ ಸಮಸ್ಯೆ ಇರತಕ್ಕಂಥ ಸನ್ನಿವೇಶವಲ್ಲಿ ಮೇಜರ್ ಇಂಡಸ್ಟ್ರೀಸ್ ಮತ್ತು ಮೀಡಿಯಂ ಇಂಡಸ್ಟ್ರೀಸ್‌ಗಳನ್ನು ತರುವುದಕ್ಕೆ ಬದಲಾಗಿ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಮತ್ತು ಇಂಜಿನಿಯರಿಂಗ್ ಇಂಡಸ್ಟ್ರೀಸ್‌ಗಳನ್ನು ತರತಕ್ಕಂಥ ಸನ್ನಿವೇಶದಲ್ಲಿ ಅಲ್ಲಿ ಕೆಲವು ಸಮಸ್ಯೆಗಳನ್ನು ಪುನಃ ದ್ವಿಗುಣಗೊಳಿಸತಕ್ಕಂಥಾದಕ್ಕೆ ನೀವು ಅವಕಾಶ ಕೊಡುವುದಿಲ್ಲ ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳಿದ್ದೇನೆ. ಎಲ್ಲೆಲ್ಲಿ ಹೆಚ್ಚು ಪ್ರಗತಿಯಾಗಿದೆ ಅಂತಹ ಪ್ರದೇಶಗಳನ್ನು 'ಎ' ಶ್ರೇಣಿಯಲ್ಲಿ ಇಟ್ಟುಕೊಳ್ಳಿ. ಇನ್ನು ಎರಡನೆಯ ಭಾಗ ಎಂದರೆ ಎಲ್ಲಿ ಸಾಮಾನ್ಯ ಬೆಳವಣಿಗೆಯಾಗಿದೆ ಅದು ಮೈಸೂರು ಇರಬಹುದು, ಅಥವಾ ಹುಬ್ಬಳ್ಳಿ-ಧಾರವಾಡ ಇರಬಹುದು, ಅಥವಾ ಮಂಗಳೂರು ಇರಬಹುದು ; ಹೀಗೆ ಕೆಲವು ಕಡೆ ಏನು ಮೊದಲನೇ ದರ್ಜೆಗಿಂತ ಸ್ವಲ್ಪ ಕಡಿಮೆ ಬೆಳವಣಿಗೆ ಆಗಿದೆ ಅದನ್ನು 'ಬಿ' ಶ್ರೇಣಿಯಲ್ಲಿ ಇಟ್ಟುಕೊಳ್ಳಬೇಕು. ಅಂತಹ ಕಡೆ ತಾವು ಕೊಡತಕ್ಕಂಥ ರಿಯಾಯಿತಿಗಳು ಏನಿದೆ ಆ ರಿಯಾಯಿತಿಗಳನ್ನು ಸ್ವಲ್ಪ ಮೊಟಕುಗೊಳಿಸಬೇಕಾಗುತ್ತದೆ. ಇನ್ನು ಬ್ಯಾಕ್‌ವರ್ಡ್ ಏರಿಯಾ ಏನಿದೆ ಅಲ್ಲಿ ಕೊಡತಕ್ಕಂಥ ಇಂಸೆಂಟೀವ್ ಮತ್ತು ಸಬ್‌ಸಿಡಿ ಅಥವಾ ಇಂಟರೆಸ್ಟ್ ಫ್ರೀ ಲೋನ್ ಅನ್ನು ಸ್ವಲ್ಪ ಹೆಚ್ಚು ಕೊಡತಕ್ಕಂಥಾದಕ್ಕೆ ವ್ಯವಸ್ಥೆ ಮಾಡಬೇಕು. ಇದನ್ನು 'ಸಿ' ಅಥವಾ ೩ನೇ ದರ್ಜೆಯ ಪ್ರದೇಶ ಎಂದು ಅಲ್ಲಿ ಗುರುತಿಸಿ. ಇನ್ನು ೪ನೇ ಶ್ರೇಣಿಯಲ್ಲಿ ಮೋರ್ ಬ್ಯಾಕ್‌ವರ್ಡ್ ಏರಿಯಾ ಏನಿದೆ ಅಲ್ಲಿ ತುಂಬಾ ಇಂಟೀರಿಯರ್ ಪ್ಲೇಸಸ್ ಇರತಕ್ಕಂಥ ಜಾಗಗಳನ್ನು ಗುರುತು ಮಾಡಿ. ಅಲ್ಲಿಗೆ ಅತಿ ಹೆಚ್ಚಿನ ಮಟ್ಟದಲ್ಲಿ ಎಲ್ಲಾ ಸವಲತ್ತುಗಳನ್ನು ಕೊಡತಕ್ಕಂಥಾದಕ್ಕೆ ವ್ಯವಸ್ಥೆ ಮಾಡಬೇಕು. ಹೀಗೆ ಇದರಲ್ಲಿ ೪ ವಿಧದ ವರ್ಗೀಕರಣ ಮಾಡಿ, ಇಡೀ ರಾಜ್ಯದಲ್ಲಿ ಎಲ್ಲಾ ಭಾಗದಲ್ಲೂ ಕೂಡ ಒಂದು ಸಮತೋಲನವಾದ ಕೈಗಾರಿಕಾ ಬೆಳವಣಿಗೆಗೆ ಆದ್ಯತೆ ಕೊಡತಕ್ಕಂಥ ದೃಷ್ಟಿಯಿಂದ ಇವತ್ತು 'ವೈಟ್ ಪೇಪರ್ ಅನ್ ಇಂಡಸ್ಟ್ರೀಯಲ್ ಪಾಲಿಸಿ ಆಫ್ ಕರ್ನಾಟಕ' ಎಂದು ಘೋಷಣೆ ಮಾಡತಕ್ಕಂಥಾದ್ದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರದಲ್ಲಿ ತಮಿಳುನಾಡು ಮತ್ತು ಗುಜರಾತ್ ಸರ್ಕಾರದಲ್ಲಿ ಕೆಲವು ಒಳ್ಳೆಯ ನಿರ್ಣಯಗಳನ್ನು ಮಾಡಿರತಕ್ಕಂಥಾದ್ದನ್ನು ನಾನು ಈ ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮತ್ತು ಈ ಸದನದ ಮುಖೇನ ಈ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಎಲ್ಲಾ ಪರಿಸರಗಳನ್ನು ಒದಗಿಸಿಕೊಡತಕ್ಕಂಥಾದಕ್ಕೆ ಯಾರು ಎಂಟರ್‌ಪ್ರೀನಿಯರ್ಸ್ ಮುಂದೆ ಬರುತ್ತಾರೆ ಅವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಯಾವುದಾದರೂ ಒಂದು ಏಜೆನ್ಸಿಯನ್ನು ತಾವು ನಿರ್ಮಾಣ ಮಾಡಬೇಕು ; ಈ ಬಗ್ಗೆ ಒಂದು ಅಪೆಕ್ಸ್ ಬಾಡಿಯನ್ನು ತಾವು ನಿರ್ಮಾಣ ಮಾಡಬೇಕು. ತಮಿಳುನಾಡಿನಲ್ಲಿ, ಸ್ಟೇಟ್ ಇಂಡಸ್ಟ್ರೀಯಲ್ ಪ್ರಮೋಷನ್ ಕಾರ್ಪೊರೇಷನ್ ಆಫ್ ತಮಿಳುನಾಡು ಎನ್ನತಕ್ಕಂಥ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಇಂತಹ ಒಂದು ಏಜೆನ್ಸಿ ಮುಖೇನ ಅವಕ್ಕೆ ಬೇಕಾದ ಫೈನಾನ್ಸಿಯಲ್ ಅಸಿಸ್ಟೆನ್ಸ್, ಬೇಕಾದಂಥ ನೀರು, ಲೈಸೆನ್ಸನ್ನು

ಕೊಡಿಸತಕ್ಕಂಥ ಜವಾಬ್ದಾರಿ, ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥಾದ್ದು, ಸಬ್ಸಿಡಿ ಹಣ ಮತ್ತು ರಾಮೆಟೀರಿಯಲ್ಸ್—ಇವೆಲ್ಲವನ್ನೂ ಒದಗಿಸಿಕೊಡತಕ್ಕಂಥ ಜವಾಬ್ದಾರಿಯನ್ನು ಆ ಒಂದು ಸಂಸ್ಥೆ ನಿರ್ವಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ನಮ್ಮಲ್ಲಿ ಇಂತಹ ವ್ಯವಸ್ಥೆ ಇಲ್ಲ. ನಾವು ಎಲೆಕ್ಟ್ರಿಸಿಟಿ ಬೇಕು ಎಂದು ಹೇಳಿ ಕೆ.ಇ.ಬಿ. ಯವರಿಗೆ ಅರ್ಜಿಯನ್ನು ಹಾಕಿಕೊಳ್ಳುವುದಕ್ಕೆ ಹೋಗ ಬೇಕು. ಲ್ಯಾಂಡ್ ಬೇಕು ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವೆಲಪ್‌ಮೆಂಟ್ ಬೋರ್ಡ್ ಮುಂದೆ ಅರ್ಜಿಯನ್ನು ಹಾಕಿಕೊಳ್ಳಬೇಕು. ಷೆಡ್ಸ್ ಬೇಕು ಎಂದರೆ ಕರ್ನಾಟಕ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಅರ್ಜಿ ಹಾಕಿಕೊಳ್ಳಬೇಕು. ಸಾಲ ಬೇಕು ಎಂದರೆ ಕರ್ನಾಟಕ ಸ್ಟೇಟ್ ಫೈನಾನ್ಸಿಯಲ್ ಕಾರ್ಪೊರೇಷನ್ ಮುಂದೆ ಅರ್ಜಿ ಹಾಕಿಕೊಳ್ಳಬೇಕು. ಅವನು ಎಲ್ಲರ ಮನೆ ಬಾಗಿಲಿಗೆ ಹೋಗಬೇಕು. ಹೀಗೆ ಯಾರೋ ಒಬ್ಬ ಹೊರಗಡೆಯಿಂದ ಈ ರಾಜ್ಯದಲ್ಲಿ ಇಂಡಸ್ಟ್ರೀಸ್‌ಗಳನ್ನು ಮಾಡಬೇಕೆಂದು ಬಂದಾಗ ಅವನು ಈ ಎಲ್ಲಾ ಕಂಬಗಳನ್ನು ಸುತ್ತಿಕೊಂಡು ಬಂದು ಮಾನಸಿಕವಾದ ಜಿಗುಪ್ಸೆಯಿಂದ ಹೊರಗೆ ಹೋಗತಕ್ಕಂಥ ಸನ್ನಿವೇಶ ಬರುತ್ತದೆ. ನಾನು ಮೊದಲೇ ಹೇಳಿದ ಹಾಗೆ ಎಲ್ಲಾ ಇನ್‌ಫ್ರಾಸ್ಟ್ರಕ್ಚರನ್ನು ಒದಗಿಸಿಕೊಡ ತಕ್ಕಂಥ ಜವಾಬ್ದಾರಿಯನ್ನು ಕೇವಲ ಒಂದು ಏಜೆನ್ಸಿ ಮುಖಾಂತರ ನಿರ್ವಹಿಸುವುದಾದರೆ ಅನಾವಶ್ಯಕ ಕಾಲಹರಣ, ಜೊತೆಗೆ ಹಣದ ಅಪವ್ಯಯ ಮತ್ತು ಎಲ್ಲಾ ರೀತಿಯ ನಿರುತ್ಸಾಹಕ್ಕೆ ಇಂಬುಗೊಡತಕ್ಕಂಥ ಪ್ರಕರಣಗಳು—ಇವನ್ನೆಲ್ಲಾ ತಡೆಗಟ್ಟತಕ್ಕಂಥಾದಕ್ಕೆ ಅವಕಾಶವಾಗುತ್ತದೆ. ಇದು ಇವತ್ತು ಔದ್ಯಮೀ ಕರಣ ಬೆಳವಣಿಗೆಗೆ ಹೆಚ್ಚು ಇಂಬುಗೊಡುತ್ತದೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗು ತ್ತದೆ. ಮತ್ತು ನಾನು ಮೊದಲೇ ಹೇಳಿದಹಾಗೆ ಗುಜರಾತ್‌ನಲ್ಲಿ ಕೇಂದ್ರ ಸರ್ಕಾರದ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ಸ್ ಏನಿವೆ ಅದರಿಂದ ಹಣವನ್ನು ಪಡೆಯತಕ್ಕಂಥಾದಕ್ಕೆ ಅವಕಾಶವಾಗಿದ್ದರೆ ಇದೊಂದು ಕಾರಣ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಹೊಸೂರಿನಲ್ಲಿ ಮಾಡಲ್ ಇಂಡಸ್ಟ್ರಿಯಲ್ ಕಾಂಪ್ಲೆಕ್ಸನ್ನು ಮಾಡುತ್ತಿದ್ದಾರೆ. ಅಲ್ಲಿ ಒಬ್ಬ ಆಫೀಸರ್ ಇದ್ದಾರೆ. He is co-ordinating officer in-charge of the entire project.

No enterprenur can go to Madras. It is the responsibility of the Co-ordinating officer to solve all these problems. ರಿಯಾಯಿತಿಯನ್ನು ಕೊಡ ತಕ್ಕಂತಹದ್ದನ್ನು ಹೇಳಿದ್ದಾರೆ. ತಮ್ಮ ಸರ್ಕಾರೀ ಆದೇಶದಲ್ಲಿಯೇ ಇದೆ. ತಾವು ಈ ಮಾತನ್ನು ಹೇಳಿರು ವುದಕ್ಕೆ ತುಂಬಾ ಸಂತೋಷ. ತಾವು ಸೇಲ್ಸ್ ಟ್ಯಾಕ್ಸ್ ರಿಯಾಯಿತಿ ಕೊಟ್ಟಿದ್ದೀರಿ. ಮತ್ತೆ ಆಕ್ಟ್ರಾಯಿಗೆ ರಿಯಾಯ್ತಿಯನ್ನು ಕೊಟ್ಟಿದ್ದಾರೆ. ಅಂತ ತಾವು ಹೇಳಿಕೊಂಡು ಬಂದಿದ್ದೀರಿ. ಆದರೆ ಯಾವುದೇ ಒಂದು ಕೈಗಾರಿಕೋದ್ಯಮಿ ಕೈಗಾರಿಕೆಯನ್ನು ಸ್ಥಾಪಿಸಬೇಕಾದರೆ ನಾನು ಮೇಲೆ ಹೇಳಿದ ಎಲ್ಲಾ ಸಂಸ್ಥೆಗಳ ಮುಂದೆ ಹೋಗಬೇಕು. ಆದ್ದರಿಂದ ಇದನ್ನು ತಾವು ಬದಲಾವಣೆ ಮಾಡಬೇಕು. ರಾಜ್ಯದಲ್ಲಿ ಕೈಗಾರಿಕೆಗಳನ್ನು ಬೆಳವಣಿಗೆ ಮಾಡುವ ದೃಷ್ಟಿಯಿಂದ ಕೈಗಾರಿಕೆಗಳ ಪ್ರಗತಿಯಾಗುವ ದೃಷ್ಟಿಯಿಂದ ತಾವು ಬದಲಾವಣೆ ಮಾಡುವುದಕ್ಕೆ ಸಾಧ್ಯ. ತಮಿಳುನಾಡಿನಲ್ಲಿ ಮತ್ತು ಗುಜರಾತಿನಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಒಂದು ಅಪೆಕ್ಸ್ ಬಾಡಿಯನ್ನು ಮಾಡಿ ಅದರಲ್ಲಿ ಸಿಂಗಲ್ ವಿಂಡೋ ಅಪ್ರೋಚ್ ಎಂದು ಅದನ್ನು ಕರೆದಿದ್ದಾರೆ. ಅದಕ್ಕೆ ಸಂಬಂಧಪಟ್ಟ ಲಿಟರೇಚರ್ ಅನ್ನು ನಾನು ಓದಿದ್ದೇನೆ. ಕೈಗಾರಿಕೋದ್ಯಮಿಗೆ ಒಂದೇ ಕಡೆ ಅವನಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒಬ್ಬ ಏಜೆನ್ಸಿ ಮುಖಾಂತರ ದೊರೆಯುವಂತೆ ಮಾಡಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸೂಚನೆ ಒಂದು ಕೊಡುತ್ತೇನೆ. ಒಂದೇ ಕಡೆ ಕೈಗಾರಿಕೋದ್ಯಮಿಗೆ ಬೇಕಾದ ಸೌಲಭ್ಯಗಳನ್ನು ಕೊಡಲು ಒಂದೇ ಏಜೆನ್ಸಿಯನ್ನು ಕ್ರಿಯೇಟ್ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೋ ಆಪರೇಟೀವ್ ಇಂಡಸ್ಟ್ರೀಸ್ ಮತ್ತು ಕೋ ಆಪರೇಟೀವ್ ಟೆಕ್ಸ್‌ಟೈಲ್ ಮಿಲ್ಸ್ ಮತ್ತು ಶುಗರ್ ಮಿಲ್ಸ್ ಇವುಗಳಿಗೆಲ್ಲಾ ತಮಿಳುನಾಡಿನಲ್ಲಿ ಒಂದೇ ಸುವ್ಯವಸ್ಥೆ ಯನ್ನು ಮಾಡಿದ್ದಾರೆ. ಅದೇನೆಂದರೆ ಈ ಟೆಕ್ಸ್‌ಟೈಲ್ಸ್ ಮಿಲ್‌ಗಳು ಪ್ರಾರಂಭ ಮಾಡಿದ ಒಂದೇ ವರ್ಷ ದಲ್ಲಿ ಅವರು ಕೆಲಸವನ್ನು ಪ್ರಾರಂಭ ಮಾಡಿ ಪ್ರೊಡಕ್ಷನ್ ಸಹಾ ಸ್ಟಾರ್ಟ್ ಮಾಡುತ್ತಾರೆ. ಇದಕ್ಕಾಗಿಯೇ ತಮಿಳುನಾಡು ಸರ್ಕಾರದವರು ಒಬ್ಬ ಚೇರ್‌ಮನ್ ನೇಮಕ ಮಾಡಿದ್ದಾರೆ. ಮತ್ತು ಒಬ್ಬ ಡೆಪ್ಯುಟಿ ಕಮಿಷನರ್‌ನ್ನು ಅದಕ್ಕೆ ಇನ್‌ಚಾರ್ಜ್ ಆಗಿ ನೇಮಕ ಮಾಡಿದ್ದಾರೆ. One Chairman and One Deputy Commissioner incharge of acquisition of lands one Deputy Commissioner for acquisition of machinery, one for electricity

ತಮಿಳು ನಾಡಿನಲ್ಲಿ ಎಲ್ಲಾ ಮಿಲ್‌ಗಳಿಗೂ ಒಬ್ಬ ಡೆಪ್ಯುಟಿ ಕಮಿಷನರ್‌ನ್ನು ನೇಮಕ ಮಾಡಿದ್ದಾರೆ. ಅಲ್ಲಿ ಈ ಶುಗರ್ ಮಿಲ್‌ಗಳಲ್ಲಿ ಮತ್ತು ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಅವರಿಗೆ ಹಣ ಸಿಕ್ಕಿದ ಒಂದೇ ವರ್ಷದಲ್ಲಿ ಅವರು ಟೆಕ್ಸ್‌ಟೈಲ್ ಮಿಲ್ ಆಗಲೀ ಅಥವಾ ಶುಗರ್ ಮಿಲ್ ಆಗಲಿ ಕೋ ಅಪರೇಟೀವ್ ಇಂಡಸ್ಟ್ರೀಸ್ ಆಗಲಿ ಪ್ರಾರಂಭ ಮಾಡುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅವನು ಅರ್ಜಿ ಹಾಕಿ ೧೦ ವರ್ಷ ಗಳಾದರೂ ಸಹಾ ಅವನು ಟೆಕ್ಸ್‌ಟೈಲ್ ಮಿಲ್ ಆಗಲಿ ಅಥವಾ ಶುಗರ್ ಮಿಲ್ ಆಗಲಿ ಇಂಡಸ್ಟ್ರೀಸ್ ಆಗಲಿ ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಇದುವರಿವಿಗೂ ಬೇಕಾದಷ್ಟು ಶುಗರ್ ಮಿಲ್‌ಗಳಿಗೆ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಅರ್ಜಿಗಳನ್ನು ಕೊಟ್ಟಿದ್ದಾರೆ ಆದರೆ ಅವರಿಗೆ ಇನ್ನೂ ಹಣ ಸಿಕ್ಕಿಲ್ಲ. ಅವರು ಇಂಡಸ್ಟ್ರೀಸ್ ಪ್ರಾರಂಭ ಮಾಡಿಲ್ಲ. ಏತಕ್ಕೆಂದರೆ ಈ ಎಲ್ಲಾ ಇಂಡಸ್ಟ್ರೀಸ್‌ಗಳಲ್ಲಿ ನಾನ್ ಅಫಿಷೀಯಲ್ ಗಳನ್ನು ನೇಮಕ ಮಾಡಿದ್ದೀರಿ. ತಾವು ಬೇರೆ ಪಕ್ಷ ಇರಬಹುದು ನಾವು ಬೇರೆ ಪಕ್ಷ ಇರಬಹುದು. ಆದರೆ ಪಕ್ಷಾಂತರ ಮಾಡಿದರೆ ತಮಗೆ ಅದರ ಅರಿವು ಗೊತ್ತಾಗುತ್ತದೆ. ಆದ್ದರಿಂದ ಕೈಗಾರಿಕೆಗಳ ಬೆಳವಣಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಕುಂಠಿತವಾಗಿದೆ. ಯಾರಾದರೂ ಉದ್ದಿಮೆಗಳನ್ನು ಪ್ರಾರಂಭ ಮಾಡು ವುದಕ್ಕೆ ಅರ್ಜಿಯನ್ನು ಹಾಕಿದರೆ ತಮ್ಮ ಸರ್ಕಾರದ ಒಂದು ಪರಿಪಾಠವೇನೆಂದರೆ ಅವರು ಅರ್ಜಿಯನ್ನು ಹಾಕಿದ ೩ ತಿಂಗಳಿಗೆ ಉತ್ತರ ಕೊಡುತ್ತೀರಿ. ಫೈನಾನ್‌ಷಿಯಲ್ ಎಬಿಲಿಟಿ ಮಾರ್ಕೆಟ್ ಎಬಿಲಿಟಿ ಎಲ್ಲವೂ ತಮ್ಮ ಉತ್ತರದಲ್ಲಿ ಮಾತ್ರ ತೆಗೆದುಕೊಳ್ಳುವುದಕ್ಕೆ ಯಾವ ಅಡ್ಡಿ ಇಲ್ಲ ಎಂದು ಉತ್ತರವನ್ನು ಕೊಟ್ಟಿರು ತ್ತೀರಿ. ತಾವು ತಮ್ಮ ಒಂದು ಚಕ್ರವ್ಯೂಹದಲ್ಲಿ ತಿರಗಾಡಿಕೊಂಡು ಬರುವುದನ್ನು ತಪ್ಪಿಸಿ ಒಂದೇ ಏಜನ್ಸಿಯ ಮುಖಾಂತರ ಸಹಾಯ ಮಾಡತಕ್ಕಂತಹ ಒಂದು ಅನುಕೂಲವನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಈ ಇಂಡಸ್ಟ್ರೀಯಲ್ ಹೌಸಿಂಗ್ ಪ್ರಾಬ್ಲಂ ಮಹಾರಾಷ್ಟ್ರದಲ್ಲಿ ಮತ್ತು ಗುಜರಾತಿನಲ್ಲಿ ಯಾವ ರೀತಿ ಇದೆ ಎಂದು ನಾನು ಕೇಳಿದ್ದೇನೆ. ಈ Industrial Investment and Development Corporationಗೆ ಬಹಳ ಜವಾಬ್ದಾರಿ ಇದೆ ಎಂದು ನಾನು ಕೇಳಿದ್ದೇನೆ. ಆದರೆ ಹೊರ ಗಡೆಯಿಂದ ಬರತಕ್ಕಂತಹ ಕೈಗಾರಿಕೋದ್ಯಮಿಗಳು ಏನಿದ್ದಾರೆ ಅವರು ಬ್ಯಾಕ್‌ವರ್ಡ್ ಏರಿಯಾಗಳಿಗೆ ಹೋಗಿ ನೋಡಿದರೆ ಉದ್ಯಮ ನಡೆಯುವುದು ಬಹಳ ಕಷ್ಟ, ಎನ್ನುವ ಭಾವನೆ ಬರುತ್ತದೆ. ಅದಕ್ಕಾಗಿಯೇ ನಾವು ಕಾನೂನುಗಳನ್ನು ತಯಾರು ಮಾಡಬೇಕಾಗುತ್ತದೆ. ಹಿಂದುಳಿದ ಪ್ರದೇಶದಲ್ಲಿ ಈ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚು ಹೆಚ್ಚು ಶಕ್ತಿಯನ್ನು ತುಂಬಬೇಕಾದರೆ ನಮ್ಮ ಸರ್ಕಾರ ಹೆಚ್ಚು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆ ಒಂದು ಜವಾಬ್ದಾರಿಯನ್ನು ಇಂಡಸ್ಟ್ರಿಯಲ್ ಹೌಸಿಂಗ್ ವ್ಯಾಪ್ತಿಯಲ್ಲಿ ತರು ವುದು ಸೂಕ್ತ ಎಂದು ನಾನು ಹೇಳಲು ಇಷ್ಟಪಡುತ್ತೇನೆ. ಇನ್ನು ಮಹಾರಾಷ್ಟ್ರ ಅಭಿವೃದ್ಧಿ ಕಾರ್ಪೊ ರೇಷನ್ ಮತ್ತು ಗುಜರಾತ್ ಅಭಿವೃದ್ಧಿ ಕಾರ್ಪೊರೇಷನ್ ಕೂಡ ಈ ದಿಸೆಯಲ್ಲಿ ಸಾಕಷ್ಟು ಅಭಿವೃದ್ಧಿ ಯನ್ನು ಹೊಂದಿವೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ನಮ್ಮ ಸರ್ಕಾರದವರೂ ಕೂಡ ಒಂದು ಸಣ್ಣ ಹೆಜ್ಜೆಯನ್ನು ಇಟ್ಟು ಬೊಮ್ಮಸಂದ್ರದ ಬಳಿಯಲ್ಲಿ ಒಂದು ಕಾಂಪ್ಲೆಕ್ಸ್ ಮಾಡುವುದಕ್ಕೆ ಹೆಜ್ಜೆಯನ್ನು ಇಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಆದರೆ ಇಡೀ ರಾಜ್ಯದಲ್ಲಿಯೇ ಇದು ವ್ಯಾಪಕವಾಗಿ ಕೈಗಾರಿಕೆ ಗಳು ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಬರಬೇಕಾದುದು ಬಹಳ ಅತ್ಯಾವಶ್ಯಕ. ಆದ್ದರಿಂದ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಬೇಕೆಂದು ನಾನು ಸೂಚನೆ ಕೊಡಬಯಸು ತ್ತೇನೆ.

ಇನ್ನು ಕೆಮಿಕಲ್ಸ್ ಇಂಡಸ್ಟ್ರೀಯಲ್‌ಗಳ ಬಗ್ಗೆ ಹೇಳುವುದಾದರೆ Harihar polyfibres. ಕೈಗಾರಿಕೆಯಿಂದ ಹೊರಗಡೆ ಬರತಕ್ಕಂತಹ ನೀರು ಏನಿದೆ ಇದನ್ನು ನಾನು ಕೇಳಿದ್ದೇನೆ, ಆ ನೀರು ಗಲೀಜಾಗಿರುತ್ತದೆ. ಅಂತಹ ನೀರನ್ನು ಟ್ರೀಟ್ ಮಾಡುವ ಜವಾಬ್ದಾರಿಯನ್ನೂ ಕೂಡ ಅವರೇ ತೆಗೆದು ಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ ಈ ಸದನದಲ್ಲಿ ಚರ್ಚೆ ಮಾಡುವಂತಹ ಕಾಲದಲ್ಲಿ Animal and human consumption ಇದರಿಂದ ಆಗತಕ್ಕಂತಹ ಅನಾಹುತಗಳ ಬಗ್ಗೆ ಸಾಕಷ್ಟು ಚರ್ಚೆ ಯನ್ನು ಮಾಡಿದ್ದೇವೆ. ಆದರೂ ಕೂಡ ಈ ಇಂಡಸ್ಟ್ರೀಸ್ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳ ಲಿಲ್ಲ. ಮತ್ತೆ ನಂಜನಗೂಡಿನಲ್ಲಿ ಒಂದು ಕೆಮಿಕಲ್ ಇಂಡಸ್ಟ್ರಿ ಪ್ರಾರಂಭವಾಗಿದೆ ಎಂದು ನಾನು ಕೇಳಿದ್ದೇನೆ. ಇನ್ನು ಸೌತ್ ಕೆನರಾ ಮತ್ತು ನಾರ್ತ್ ಕೆನರಾದಲ್ಲಿಯು ಒಂದು ಕೆಮಿಕಲ್ಸ್ ಇಂಡಸ್ಟ್ರಿ

ಯನ್ನು ಪ್ರಾರಂಭ ಮಾಡಿದ್ದಾರೆ. ಆ ಪ್ರದೇಶಗಳಲ್ಲಿ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಿಕೊಂಡು ಅಲ್ಲಿರತಕ್ಕಂತಹ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಮಾನ್ಯ ಅರ್ಥ ಸಚಿವರು ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅವರ ರಿಪೋರ್ಟ್ ಇಲ್ಲಿದೆ. ಶ್ರೀಮಾನ್ ವೀರಪ್ಪ ಮೊಯ್ಲಿ ಛೇರ್‌ಮೆನ್ ಎಂದು ಹೇಳಿ ಇದೆ. ಆದ್ದರಿಂದ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂದು ನಾನು ಕೇಳುತ್ತೇನೆ. ಈ ಸಿಕ್ ಇಂಡಸ್ಟ್ರೀಸ್‌ಗಳಿಗೆ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ ತಾವು ಖರ್ಚು ಮಾಡುತ್ತಿರುವ ಹಣವೆಲ್ಲಾ ನೀರು ಪಾಲಾಗುತ್ತಿದೆ. ಸರ್ಕಾರ ಹಣ ಖರ್ಚು ಮಾಡುವುದಕ್ಕೆ ತಕ್ಕ ಹಾಗೆ ಒತ್ತಡವಿರಬೇಕು. ಸನ್ನಿವೇಶಕ್ಕೆ ತಕ್ಕ ಒತ್ತಾಯವಿರಬೇಕು, ತಮ್ಮ ವರದಿಯಲ್ಲಿ To give one instance, from your own report. Hegde and Golay ಯವರು ಏನೇನು ಹೆಸರುಗಳನ್ನು ಇಟ್ಟುಕೊಂಡು ನಡೆಸುತ್ತಿದ್ದಾರೆ ಎಂದು ಬರೆದಿದ್ದಾರೆ. ಮತ್ತೆ ಸದರನ್ ವೈರ್ಸ್ ಅದೇ ರೀತಿ ಏನೇನೋ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಇವೊತ್ತು ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಅಧಿಕಾರಿಗಳನ್ನು ಬೆನ್ನು ತಟ್ಟಬೇಕಾಗುತ್ತದೆ. ಏತಕ್ಕೆಂದರೆ ಅವರ ಮುಖ ಸಹಾ ನಾನು ನೋಡಿಲ್ಲ. ನಾನೇನು ಯಾವುದೇ ಇಂಡಸ್ಟ್ರೀಯನ್ನು ಮಾಡಲು ಅರ್ಜಿ ಹಾಕಿರಲಿಲ್ಲ. ಆದರೆ ಅವರು ಆದಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಈ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿರತಕ್ಕಂತಹ ಅಲ್ಪಸ್ವಲ್ಪ ಹಣವನ್ನು ಖರ್ಚು ಮಾಡಿ ಜನತೆಗೆ ವಿನಿಯೋಗವಾಗುವ ರೀತಿಯಲ್ಲಿ ಅನುಕೂಲವನ್ನು ಮಾಡಿದ್ದಾರೆ. ಎಂದು ನಾನು ಕೇಳಿದ್ದೇನೆ. ಆದರೆ ಒಂದಿನಿಂದ ನಡೆದುಕೊಂಡು ಬಂದಿರತಕ್ಕಂತಹ ಪದ್ಧತಿಯ ಪ್ರಕಾರ ಪ್ರಗತಿಯಾಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ಕಡೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಯಾಗುತ್ತಿಲ್ಲ. ಮತ್ತೊಂದು ಕಡೆ ಈ ಸಿಕ್ ಇಂಡಸ್ಟ್ರೀಸ್‌ಗೆ ಹಣವನ್ನು ಖರ್ಚು ಮಾಡಿ ಕೈ ಸುಟ್ಟುಕೊಳ್ಳುತ್ತಿದ್ದಾರೆ. ಈ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ವರದಿಯಲ್ಲಿ ಅವರು ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ನೋಡಿದರೆ ಅವರು ಅಲ್ಲಿ ಅಧ್ಯಕ್ಷರಾಗಿ ಕುಳಿತುಕೊಂಡಿರುವುದಕ್ಕೆ ಏನು ಪ್ರಯೋಜನ ಎಂದು ನನಗನಿಸುತ್ತದೆ,

ಸ್ವಾಮಿ, ನಾನು ಇದೇ ಸಂದರ್ಭದಲ್ಲಿ ಒಂದು ಮಾತನ್ನು ಬಹಳ ನೊಂದ ಹೃದಯದಿಂದ ಹೇಳಬೇಕಾಗುತ್ತದೆ, ನಾನು ಈ ಸರ್ಕಾರದ ಒಂದೂಕಾಲು ವರ್ಷದ ಆಡಳಿತವನ್ನು ನೋಡಿದ್ದೇನೆ. ಅದರ ಪ್ರಕಾರ ನಿಮ್ಮ ವಿಧಾನಸೌಧದಲ್ಲಿ ಒಂದು ಕ್ಲಿಕ್ ಇದೆ. ಅದನ್ನು ತಾವು ಭೇಧಿಸದೆ ಹೋದರೆ ಅದು ಮುಂದೆ ತಮ್ಮ ಬುಡಕ್ಕೆ ಬರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ಮಾತನ್ನು ನಾನು ನೇರವಾಗಿ ಮುಖ್ಯಮಂತ್ರಿಗಳಿಗೇ ಹೇಳುತ್ತಿದ್ದೇನೆ. ನಮ್ಮಲ್ಲಿ ಅತ್ಯಂತ ಉತ್ತಮವಾಗಿ ಕೆಲಸ ಮಾಡುವಂತಹ ಅಧಿಕಾರಿಗಳು ಇದ್ದಾರೆ. ಆದರೆ ಇವರುಗಳು ವಿಧಾನಸೌಧಕ್ಕೆ ಬರುವುದಕ್ಕೆ ಸಾಧ್ಯವಾಗದಂಥ ಒಂದು ಕ್ಲಿಕ್ ಇದೆ. ಇದನ್ನು ತಾವು ಭೇದಿಸಬೇಕಾಗುತ್ತದೆ. ಇಲ್ಲದಿದ್ದರೆ ultimately it will recoil and rebound. ಆದ್ದರಿಂದ ನೀವು ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಇನ್ನು ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ಸ್ ಬಗ್ಗೆ ಹೇಳಬೇಕೆಂದರೆ, ಈ ಸೆಂಟರ್‌ಗಳು ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಅಸ್ತಿತ್ವಕ್ಕೆ ಬಂದಿದ್ದು. ಈಗ ನಮ್ಮ ರಾಜ್ಯದ ೧೩ ಜಿಲ್ಲೆಗಳಲ್ಲಿ ಈ ಸೆಂಟರ್‌ಗಳಿವೆ. ಇನ್ನುಳಿದ ೬ ಜಿಲ್ಲೆಗಳ ಪೈಕಿ ಈ ಸಲ ಮತ್ತೆ ೩-೪ ಜಿಲ್ಲೆಗಳಲ್ಲಿ ಈ ಸೆಂಟರ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಕೇಂದ್ರಸರ್ಕಾರ ಪ್ರಯತ್ನ ಮಾಡಿದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ಆಗುವ ಖರ್ಚಿನ ಅರ್ಧ ಭಾಗವನ್ನು ಕೇಂದ್ರಸರ್ಕಾರ ಕೊಟ್ಟರೆ ಇನ್ನುಳಿದ ಅರ್ಧ ಭಾಗವನ್ನು ರಾಜ್ಯಸರ್ಕಾರ ಕೊಡಬೇಕಾಗುತ್ತದೆ. ಆದ್ದರಿಂದ ಈ ದಿಶೆಯಲ್ಲಿ ರಾಜ್ಯಸರ್ಕಾರ ಎಷ್ಟು ಹಣ ಒದಗಿಸಿದೆ ಎಂಬುದನ್ನು ತಾವು ತಿಳಿಸಬೇಕು. ಈಗ ಪ್ರತಿ ಸೆಂಟರ್‌ನಲ್ಲಿಯೂ ಜಾಯಿಂಟ್ ಡೈರಕ್ಟರ್ ಒಬ್ಬರನ್ನು ಹಾಗೂ ೩ ಜನ ಅಸಿಸ್ಟೆಂಟ್ ಡೈರಕ್ಟರ್‌ಗಳನ್ನು ಇಟ್ಟಿದ್ದೀರಿ. ಈ ಸೆಂಟರ್‌ಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ರಾಜ್ಯ ಮಟ್ಟದಲ್ಲಿ ಒಬ್ಬರು ಜಾಯಿಂಟ್ ಡೈರಕ್ಟರ್ ಇದ್ದಾರೆ. ಇದು ಸಾಲದು. ಏಕೆಂದರೆ, ಈಗ ೧೩ ಜಿಲ್ಲೆಗಳಲ್ಲಿ ಈ ಸೆಂಟರ್‌ಗಳಿವೆ. ಮತ್ತೆ ೩-೪ ಜಿಲ್ಲೆಗಳಲ್ಲಿ ಈ ಸೆಂಟರ್‌ಗಳು ಪ್ರಾರಂಭವಾಗುವುದಿದೆ. ಆದಕಾರಣ ಈ ಎಲ್ಲ ಸೆಂಟರ್‌ಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮೇಲ್ದರ್ಜೆಯ

ಅಧಿಕಾರಿ ಒಬ್ಬರನ್ನು ಅಂದರೆ ಅಡಿಷನಲ್ ಡೈರಕ್ಟರ್ ಒಬ್ಬರನ್ನು ನೇಮಕ ಮಾಡಿ ಯಾವ ಉದ್ದೇಶಕ್ಕಾಗಿ ಈ ಸೆಂಟರ್‌ಗಳು ೧೯೭೭-೭೮ರಲ್ಲಿ ಪ್ರಾರಂಭವಾದವೋ ಆ ಒಂದು ಉದ್ದೇಶವನ್ನು ಸಫಲಗೊಳಿಸಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕುಶಲಕರ್ಮಿಗಳು ಅತ್ಯಲ್ಪ ಬಂಡವಾಳ ಹೂಡಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದರ ಮೂಲಕ ಅವರ ಒಂದು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲಿ ಎಂದು ಇವುಗಳನ್ನು ಪ್ರಾರಂಭ ಮಾಡಿದ್ದು. ಕೇವಲ ಆರ್ಟಿಜಾನ್ಸ್ ಮಾತ್ರವಲ್ಲ, ಇತರೇ ಬೇರೆಬೇರೆ ವರ್ಗದ ಜನರೂ ಸಹ ಸ್ಥಳೀಯವಾಗಿ ಸಿಗತಕ್ಕಂಥ ರಾ-ಮೆಟೀರಿಯಲ್ಸ್‌ನ್ನು ಉಪಯೋಗಮಾಡಿಕೊಳ್ಳಲಿ ಎಂದು ಈ ಸೆಂಟರ್‌ಗಳನ್ನು ಸ್ಥಾಪಿಸಲಾಯಿತು. ಆದರೆ ಈ ದಿಶೆಯಲ್ಲಿ ಈ ಸೆಂಟರ್‌ಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಮ್ಮ ಸರ್ಕಾರ ವಿಫಲಗೊಂಡಿದೆ ಎಂದು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಈ ಸೆಂಟರ್‌ಗಳಿಗೆ ಆಗುವ ಖರ್ಚಿನ ಶೇಕಡಾ ೫೦ರಷ್ಟು ಹಣ ಬಂದರೂ ಸಹ ರಾಜ್ಯಸರ್ಕಾರ ತನ್ನ ಪಾಲಿನ ಹಣ ಕೊಡುವುದರಲ್ಲಿ ಮುನ್ನಡೆಯಿಂದ ಸಾಗಿಲ್ಲ ಎಂದು ನಮಗೆ ಬಂದಿರುವ ಸುದ್ದಿ. ಆದ್ದರಿಂದ ಈ ಒಂದು ಲೋಪವನ್ನು ತಿದ್ದಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಳೆದ ಒಂದು ವರ್ಷದಲ್ಲಿ ಹೇಳಿಕೊಳ್ಳುವಂತಹ ಹೊಸ ಉದ್ಯಮಗಳು ಸ್ಥಾಪನೆಯಾಗಿಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ. ಸದರನ್ ರೈಲ್ವೇನವರು ವೈಟ್‌ಫೀಲ್ಡ್‌ನಲ್ಲಿ ಒಂದು ಇನ್‌ಲೆಂಡ್ ಕನ್‌ಟೈನರ್ ಡಿಪೋ ತೆರೆಯಬೇಕೆಂದು ನಿರ್ಣಯ ಮಾಡಿದ್ದಾರೆ. ಇದಕ್ಕೆ ಕೇಂದ್ರಸರ್ಕಾರದ ಬಡ್ಜೆಟ್‌ನಲ್ಲಿ ೮ ಕೋಟಿ ರೂ.ಗಳನ್ನು ಅಳವಡಿಸಿದ್ದಾರೆ. ಆದರೆ ಇದೂ ಸಹ ಪ್ರಾರಂಭವಾಗದೆ ಇನ್ನೂ ಅಂಬೆಗಾಲಿಡುತ್ತಿದೆ. ಕೇಂದ್ರದವರು ೮ ಕೋಟಿ ರೂ. ಗಳ ಬಂಡವಾಳವನ್ನು ಹೂಡಿದರೆ ನಮ್ಮ ರಾಜ್ಯದಲ್ಲಿರುವಂತಹ ನಿರುದ್ಯೋಗ ಸಮಸ್ಯೆ ಮತ್ತಷ್ಟು ಬಗೆಹರಿಯಲು ಕಾರಣವಾಗುತ್ತದೆ. ಜೊತೆಗೆ ನಮ್ಮ ರಾಜ್ಯದ ಕೈಗಾರಿಕಾ ಬೆಳವಣಿಗೆ ಜಾಸ್ತಿಯಾದಂತೆ ಆಗುತ್ತದೆ. ಆದ್ದರಿಂದ ಈ ಒಂದು ಸನ್ನಿವೇಶದಲ್ಲಿ ಇದರ ಒಂದು ಉಪಯುಕ್ತತೆಯನ್ನು ಪಡೆಯುವುದಕ್ಕೆ ನಿಮಗಿರುವ ಗೊಂದಲವಾದರೂ ಏನು? ಮುಖ್ಯವಾಗಿ ನಮ್ಮ ರಾಜ್ಯಕ್ಕೆ ಒಬ್ಬರು ಪ್ರತ್ಯೇಕ ಕೈಗಾರಿಕಾ ಮಂತ್ರಿಗಳು ಇರಬೇಕಾಗಿತ್ತು. ಆದರೆ ಇಲ್ಲ. ತಮಗೆ ಪೊಲಿಟಿಕಲ್ ಸ್ಟೆಬಿಲಿಟಿ ಬಂದಿದೆ, ತಮ್ಮ ಒಂದು ಸಂಖ್ಯಾ ಬಲ ಹೆಚ್ಚಿದೆ ಎಂದು ಹೇಳಿಕೊಳ್ಳುವುದರಲ್ಲಿಯೇ ತಾವು ಕಾಲ ಕಳೆಯದೆ ಇದರ ಕಡೆಗೂ ಸಹ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ

ಇನ್ನು ಹೊಸ ಕೈಗಾರಿಕೆಗಳಲ್ಲಿ ನಮ್ಮ ರಾಜ್ಯದ ನಿರುದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ನಿರೂಪಣೆ ಮಾಡುವ ಬಗ್ಗೆ ಚರ್ಚೆಯಾಗಿದೆ. ಈ ಒಂದು ನೀತಿಯ ಪ್ರಕಾರ ೫೦೦ ರೂಪಾಯಿಗಳಿಗೂ ಹೆಚ್ಚಿನ ವೇತನ ಬರುವ ಹುದ್ದೆಗಳಿಗೆ ಬೇರೆಯವರನ್ನು ನೇಮಕ ಮಾಡಿಕೊಳ್ಳಲು ಆಸ್ಪದವಿದ್ದರೂ ಸಹ, ಇಂತಹ ಹುದ್ದೆಗಳಿಗೆ ನಮ್ಮಲ್ಲಿಯೇ ಪರಿಣತರು ಇದ್ದರೆ ನಮ್ಮವರನ್ನೇ ನೇಮಕ ಮಾಡಿಕೊಳ್ಳಬೇಕೆಂದು ತಾವು ಉದ್ಯಮ ಸ್ಥಾಪನೆ ಮಾಡುವವರಿಗೆ ಲೈಸನ್ಸ್ ಕೊಡುವ ಕಾಲಕ್ಕೆ ಒಂದು ಷರತ್ತನ್ನು ವಿಧಿಸುವುದು ಸೂಕ್ತ. ಇದರ ಕಡೆಗೆ ತಾವು ಹೆಚ್ಚು ಗಮನ ಕೊಡಬೇಕಾಗುತ್ತದೆಂದು ಹೇಳುತ್ತೇನೆ. ಈ ಒಂದು ದಿಶೆಯಲ್ಲಿಯೂ ಸಹ ಹೆಚ್ಚು ಪ್ರಗತಿ ಸಾಧನೆ ಮಾಡುವುದಕ್ಕಾಗಿಲ್ಲವೆಂದು ಹೇಳುತ್ತೇನೆ.

ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಸಾಗುತ್ತಿಲ್ಲವೆಂಬ ಮಾತನ್ನು ತಾವು ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳುತ್ತೀರಿ ಇದೇನೂ ರಾಜಕೀಯದ ಮಾತಲ್ಲ. ನಿಮ್ಮ ಒಂದು ರಕ್ಷಣೆಗಾಗಿ ಈ ಮಾತನ್ನು ಹೇಳಿದ್ದೀರಿ. ಹೊಸದಾಗಿ ತಾವು ಅಧಿಕಾರಕ್ಕೆ ಬಂದ ಕಾಲದಲ್ಲಿ ಈ ಮಾತನ್ನು ಉತ್ಸಾಹದಿಂದ ಹೇಳಿದ್ದೀರಿ. ಆಗ ಹೇಳಿದ ಮಾತನ್ನು ಈಗ ತಾವು ಒಪ್ಪಿಕೊಳ್ಳುತ್ತೀರಿ. ಇನ್ನು ಮುಂದಾದರೂ ಹೆಚ್ಚಿನ ಅಭಿವೃದ್ಧಿ ಮಾಡುವುದಕ್ಕೆ ಸಾಕಷ್ಟು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ತಾವು ಆರ್ಥಿಕ ಮಂತ್ರಿಗಳಾಗಿ ಈ ರಾಜ್ಯದ ಮಾರಾಟ ತೆರಿಗೆಯ ಬಗ್ಗೆ ಕೆಲವೊಂದು ವಿವರಗಳನ್ನು ಕೊಟ್ಟಿದ್ದೀರಿ. ಈ ರಾಜ್ಯದ ಮಾರಾಟ ತೆರಿಗೆ ೧೯೭೮-೭೯ರಲ್ಲಿ ೧೬೪.೭೪ ಕೋಟಿ ಇದ್ದರೆ, ಅದು ೧೯೭೯-೮೦ರಲ್ಲಿ ೧೯೯.೭೭ ಕೋಟ್‌ಗೆ ಹೆಚ್ಚಿದೆ. ಅದೇ ೧೯೮೦-೮೧ರಲ್ಲಿ ೨೪೪.೭೩ ಕೋಟಿ ರೂ.ಗಳ ಒಂದು ತಾತ್ಕಾಲಿಕ ಆದಾಯವನ್ನು ತಾವು ನಿರೀಕ್ಷೆ ಮಾಡಿದ್ದೀರಿ. ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಅದೇನೆಂದರೆ, ಈ ನಮ್ಮ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಈ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಅವರ ಸಿಬ್ಬಂದಿ ವರ್ಗದವರು

ಶ್ರಮಿಸುತ್ತಿರಬಹುದು. ಇದರ ಜೊತೆಗೆ ಈ ಇಲಾಖೆಯಲ್ಲಿ ಕೆಲಸ ಮಾಡುವವರ ದಕ್ಷತೆಯನ್ನು ಹೆಚ್ಚು ಮಾಡಲು ತಾವು ಪ್ರಯತ್ನ ಮಾಡಿರಬಹುದು, ಆದರೆ ಈ ಆದಾಯ ಹೆಚ್ಚಿಸಲು ತಾವು ಏನು ಪ್ರಯತ್ನ ಮಾಡಿದ್ದೀರಿ. ಇದು ಕೇವಲ ತಮ್ಮ ಒಂದು ದಕ್ಷತೆಗೆ ಸೀಮಿತವಾಗಿಲ್ಲ. ಏಕೆಂದರೆ, ತಾವು ಅಧಿಕ ತೆರಿಗೆಗಳನ್ನು ಸಹ ಹಾಕಿದ್ದೀರಿ. ಇದನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಇವೊತ್ತಿನ ಪರಿಸ್ಥಿತಿಯಲ್ಲಿ ಬೆಲೆಗಳು ನಮ್ಮ ಹತೋಟಿ ತಪ್ಪಿ ಹೆಚ್ಚುತ್ತಾ ಹೋಗುತ್ತಿವೆ ಇದರಿಂದಲೂ ಸಹ ಮಾರಾಟ ತೆರಿಗೆ ಹೆಚ್ಚು ಬರುತ್ತಿದೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಿಮ್ಮ ಇಲಾಖೆಯ ಅಧಿಕಾರಿಗಳ ಒಂದು ದಕ್ಷತೆಯನ್ನು ನಾನು ಕೆಳಮಟ್ಟದ ದೃಷ್ಟಿಯಿಂದ ನೋಡುವುದಿಲ್ಲ. ಏಕೆಂದರೆ, ಉತ್ತಮ ಮಟ್ಟದ ಅಧಿಕಾರಿಗಳು ನಮ್ಮಲ್ಲಿದ್ದಾರೆ.

೫.೩೦. ಪಿ.ಎಂ.

ಅವರ ದಕ್ಷತೆ ಜೊತೆಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ತಾವು ಕೆಲವು ಹೊಸ ತೆರಿಗೆಗಳನ್ನು ಏನು ಹಾಕಿದ್ದೀರಿ, ಅದರ ಬಗ್ಗೆ ನಾನು ತುಂಬ ವಿವರವಾಗಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ ಕೆಲವು ಆತಂಕಗಳೂ ಕೂಡ ಅದರಲ್ಲಿದೆ. ಇದರ ಬಗ್ಗೆ ಮತ್ತೊಂದು ಸಾರಿ ಬೇರೆ ಸಂದರ್ಭವನ್ನು ಉಪಯೋಗಮಾಡಿ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಹೀಗೆ ತಾವು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ಒಂದು ವಿಷಯವನ್ನು ಪ್ರಮುಖವಾಗಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವಿಲೇ ಆಗಬೇಕಾದ ಕರ ನಿರ್ಧಾರ ಪ್ರಕರಣಗಳ ಸಂಖ್ಯೆ ನಾನು ತಮ್ಮ ಇಲಾಖೆ ಬಗ್ಗೆ ಮಾತನಾಡತಕ್ಕಂಥಾದ್ದು ಇದೆ. ಆದರೆ ಇವತ್ತು ಮಾತನಾಡಲಿಕ್ಕೆ ಹೋಗುವುದಿಲ್ಲ. ಪೆಂಡೆನ್ಸಿ ೨ ಲಕ್ಷದ ೬೫ ಸಾವಿರದ ೫ ನೂರು ಒಂದು ಕಡೆ ಆದಾಯ ಹೆಚ್ಚು ಮಾಡುವುದರಲ್ಲಿ ನಿಮ್ಮ ಅಧಿಕಾರಿಗಳು ಶ್ರಮ ಏನು ತೆಗೆದುಕೊಂಡಿದ್ದಾರೆ ಬೇರೆ ಬೇರೆ ಕಾರಣಗಳಿಂದ ಎಂದು ತೋರಿಸಿಕೊಳ್ಳುವುದಾದರೂ, ಮತ್ತೊಂದು ಕಡೆ ಪೆಂಡೆನ್ಸಿ, ಅರಿಯರ್ಸ್ ಕೂಡ ಏಕೆ? ೨,೬೫,೫೦೦ ಇದೆ. ೧೯೭೭–೭೮ರಲ್ಲಿ ೧ ಲಕ್ಷ ೭೫ ಸಾವಿರ ಇದ್ದರೆ, ೧೯೭೯–೮೦ ರಲ್ಲಿ ೨ ಲಕ್ಷ ೪ ಸಾವಿರ ೪೦೦ ಆದರೆ ಕಳೆದ ವರ್ಷ ೨,೬೫,೫೦೦ ಆಗುತ್ತದೆ. ಅಂದರೆ ಪೆಂಡೆನ್ಸಿ ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಇವತ್ತು ಫೈಲ್ ವಿಲೇವಾರಿ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದೇವೆ ಎಂದು ಹೇಳುತ್ತೀರಿ. ಇಷ್ಟೊಂದು ಪೆಂಡೆನ್ಸಿ, ಅರಿಯರ್ಸ್, ಹೆಚ್ಚು ಬೆಳೆಯಲಿಕ್ಕೆ ಕಾರಣ ಏನು ಎನ್ನುವುದನ್ನು ದಯಮಾಡಿ ತಾವು ತಿಳಿಸಬೇಕಾಗುತ್ತದೆ. ಇದರ ಜೊತೆಗೆ ಕೇಂದ್ರ ಮಾರಾಟ ತೆರಿಗೆಗೆ ಸಂಬಂಧಪಟ್ಟಂತೆ ೯೭ ಸಾವಿರ ಆಗುತ್ತದೆ. ಈ ಪೆಂಡೆನ್ಸಿ ಕೇಸ್ ನಿಖಾಲೆ ಆಗದೇಹೋದರೆ, ಎಷ್ಟು ಹಣ ಅರಿಯರ್ಸ್ ಉಳಿದಿದೆ ಎನ್ನುವುದನ್ನು ತಿಳಿಸಬೇಕಾಗುತ್ತದೆ. ಈ ದಿಶೆಯಲ್ಲಿ ಈ ಇಲಾಖೆಗೆ ಹೆಚ್ಚು ಸಿಬ್ಬಂದಿ ಬೇಕಾದರೆ ಒದಗಿಸಿಕೊಡುವುದರ ಮುಖಾಂತರ, ಈ ತರಹ ಪೆಂಡೆನ್ಸಿಗಳನ್ನು ಉಳಿಸುವುದಕ್ಕೆ ತಾವು ಅವಕಾಶಕೊಡಬಾರದು ಎಂದು ಸೂಚಿಸಿ, ಇವತ್ತು ರಾಜ್ಯದ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಏನು ಸಲಹೆಗಳನ್ನು ಕೊಟ್ಟಿದ್ದೇನೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಆಶಿಸಿ, ಈ ದಿಶೆಯಲ್ಲಿ ಹೆಜ್ಜೆ ಇಡಬೇಕು ಎಂದು ಹೇಳಿ, ನನಗೆ ಮಾತನಾಡಲು ಅವಕಾಶಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಹೊಳೆಹೊನ್ನೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಮಂಡಿಸಿದ ೯ ಬೇಡಿಕೆಗಳನ್ನು ಸ್ವಾಗತಿಸುತ್ತಾ ಮುಖ್ಯವಾಗಿ ಕೈಗಾರಿಕಾ ಬೇಡಿಕೆಗಳ ಬಗ್ಗೆ ಕೆಲವು ಪ್ರಸ್ತಾಪಗಳನ್ನು ತಮ್ಮ ಮುಖಾಂತರ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನಾವು ನಿರೀಕ್ಷಿಸಿದಂಥ ಮಟ್ಟದಲ್ಲಿ ಕೈಗಾರಿಕಾ ಬೆಳವಣಿಗೆಯಾಗಿಲ್ಲ ಎನ್ನುವ ಅಂಶವನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಸುಮಾರು ೫೦ ವರ್ಷಗಳ ಹಿಂದೆ ಸರ್. ಎಂ. ವಿಶ್ವೇಶ್ವರಯ್ಯನವರು ದೇಶದಲ್ಲಿ ಕೈಗಾರಿಕಾ ಪ್ರಗತಿ ಆದರೆ ನಮ್ಮ ದೇಶದಲ್ಲಿ ಪ್ರಗತಿ ಸಾಧ್ಯ ಎಂದು ಹೇಳಿದ ಬುದ್ಧಿವಾದವನ್ನು ನಾವು ತತ್ವಶಃ ಆಚರಣೆಗೆ ತರದೇ ಇದ್ದುದರಿಂದ ಈ ತೊಂದರೆಯನ್ನು ಎದುರಿಸಬೇಕಾಗಿದೆ–ಎಂಬತಕ್ಕಂಥ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಒಂದು ಕೈಗಾರಿಕಾ ಘಟಕ ಸ್ಥಾಪನೆ ಮಾಡಬೇಕಾದರೆ ಬಂಡವಾಳ ಹೂಡಿಕೆ ಕೊರತೆ, ಕಚ್ಚಾಪದಾರ್ಥಗಳ ಕೊರತೆ, ವಿದ್ಯುತ್ತಿನ ಕೊರತೆ ಮತ್ತು ಕಾರ್ಮಿಕ ಅಶಾಂತಿ – ಇಂತಹ ಹಲವಾರು ಕಾರಣಗಳಿಂದ ಕೈಗಾರಿಕಾ ಘಟಕವನ್ನು ನಾವು ನಿರೀಕ್ಷಿಸಿದ ಮಟ್ಟಕ್ಕೆ ತರುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರ ಈ ಒಂದು

ಸಮಸ್ಯೆ ಬಗ್ಗೆ ಹೆಚ್ಚಿನ ಗಮನಹರಿಸಿ ಸರಿಯಾದ ವ್ಯವಸ್ಥೆ ಮಾಡುವುದಾದರೆ ಕರ್ನಾಟಕದಲ್ಲಿ ಕೈಗಾರಿಕಾ ಘಟಕಗಳನ್ನು ಸುಸಜ್ಜಿತವಾದ ರೀತಿಯಲ್ಲಿ ಸ್ಥಾಪನೆ ಮಾಡುವುದಕ್ಕೆ ಅವಕಾಶವಾಗುತ್ತದೆ, ಈ ದಿಶೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು ಎಂದು ನಾನಾದರೂ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಾ ಇದ್ದೇನೆ. ನಾನು ಶಿವಮೊಗ್ಗ ಜಿಲ್ಲೆಯನ್ನು ಪ್ರತಿನಿಧಿಸಿ ಬಂದವನಾದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಮುಖ ಕೈಗಾರಿಕೆಗಳಾದ ಎಂ ಪಿ.ಎಂ. ಮತ್ತು ವಿ.ಐ.ಎಸ್.ಎಲ್. ಇವುಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಿಂತಿದ್ದೇನೆ. ಮೈಸೂರು ಪೇಪರ್ ಮಿಲ್ಸ್ ವಿಷಯ ತಮಗೆಲ್ಲಾ ತಿಳಿದಿದೆ. ೧೯೩೬ನೇ ಇಸವಿಯಲ್ಲಿ ಸರ್ ಎಂ ವಿಶ್ವೇಶ್ವರಯ್ಯನವರು ಕಾಗದದ ಅಭಾವವನ್ನು ಅರಿತು ಈ ಒಂದು ಮೈಸೂರು ಪೇಪರ್ ಮಿಲ್ ಎಂಬ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡಿದರು. ಅದು ವರ್ಷಕ್ಕೆ ೪೦೦೦ ಟನ್ ಕಾಗದವನ್ನು ಉತ್ಪಾದನೆ ಮಾಡತಕ್ಕಂಥ ಒಂದು ಕೇಂದ್ರವಾಯಿತು. ಅದು ಕ್ರಮೇಣ ಬೆಳೆದು ೧೯೭೦-೭೧ನೇ ಇಸವಿಯಲ್ಲಿ ಸುಮಾರು ೨೪ ಸಾವಿರ ಟನ್ ಉತ್ಪಾದನೆ ಮಾಡತಕ್ಕಂಥ ಸಾಮರ್ಥ್ಯವನ್ನು ಪಡೆಯಿತು. ಇದು ನಿಜವಾಗಲೂ ಕೂಡ ಪ್ರಶಂಸನೀಯವಾದ ವಿಷಯ. ೧೯೭೦ರ ದಶಕದಲ್ಲಿ ನಮ್ಮ ದೇಶದಲ್ಲಿ ಕಾಗದದ ಅಭಾವ ತಲೆದೋರಿತು ಎನ್ನುವ ವಿಷಯ ತಮಗೆ ಹೇಳಬೇಕಾಗಿಲ್ಲ. ಈ ಅಭಾವವನ್ನು ಹೋಗಲಾಡಿಸು ವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಒಂದು ಯೋಜನೆಮಾಡಿ ನಮ್ಮ ದೇಶದಲ್ಲಿ ಯಾವ ಕಾಗದದ ಕಾರ್ಖಾನೆ ಸದೃಢವಾಗಿ ಬೆಳೆದಿದೆ, ಕಾರ್ಮಿಕ ವರ್ಗದಲ್ಲೂ ಮತ್ತು ಮ್ಯಾನೇಜ್‌ಮೆಂಟ್‌ನಲ್ಲೂ ಮಧುರ ಬಾಂಧವ್ಯವಿದೆ, ಎಲ್ಲಿ ಕೆಲಸ ಸುಸೂತ್ರವಾಗಿ ನಡೆದಿದೆ ಎಂದು ಪರಿಶೀಲನೆಮಾಡಿ, ಭದ್ರಾವತಿಯಲ್ಲಿ ನಡೆಯುತ್ತಾ ಇರತಕ್ಕ ಮೈಸೂರು ಪೇಪರ್ ಮಿಲ್ಲಿನ ಕೆಲಸ ಕಾರ್ಯಗಳನ್ನು, ಕಾರ್ಯ ದಕ್ಷತೆಯನ್ನು, ಅದರ ಪ್ರಗತಿಯನ್ನು ಕಂಡು ಒಂದು ವಿಸ್ತರಣಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಪಟ್ಟರು. ಅದರ ಪರಿಣಾಮವಾಗಿ ೧೯೭೬ನೇ ಇಸವಿಯಲ್ಲಿ ೧೦೦ ಕೋಟಿ ರೂಪಾಯಿನ ಒಂದು ವಿಸ್ತರಣಾ ಯೋಜನೆಯ ಲೆಟರ್ ಆಫ್ ಇಂಡೆಂಟ್ ಕೊಟ್ಟಂಥ ವಿಷಯ ತಮಗೆ ತಿಳಿದಿದೆ. ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಸುಮಾರು ೭೦ ರಿಂದ ೮೦ ಕೋಟಿ ರೂಪಾಯಿ ಹಣವನ್ನು ಕಾಗದ ವನ್ನು ಆಮದು ಮಾಡಿಕೊಳ್ಳುವುದಕ್ಕೋಸ್ಕರ ವಿದೇಶೀ ವಿನಿಮಯಕ್ಕಾಗಿ ಪ್ರತಿವರ್ಷ ನಾವು ಖರ್ಚು ಮಾಡುತ್ತಾ ಇದ್ದೇವೆ. ಈ ಹಿನ್ನೆಲೆಯಲ್ಲಿ ೧೦೦ ಕೋಟಿ ರೂಪಾಯಿನ ಒಂದು ವಿಸ್ತರಣಾ ಯೋಜನೆ ಕಾರ್ಯರೂಪಕ್ಕೆ ಬಂತು, ಜೂನ್ ೧೯೮೦ರೊಳಗೆ ಉತ್ಪಾದನೆ ಮಾಡುವ ನಿಲುವನ್ನೂ ಸಹ ಯೋಜನೆ ಯಲ್ಲಿ ರೂಪಿಸಲಾಯಿತು. ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒಬ್ಬ ದಕ್ಷರಾದ, ಹಿರಿಯರಾದ ಶ್ರೀಮಾನ್ ಜಾಫರ್ ಸೈಫುಲ್ಲಾ ಅವರನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ, ಛೇರ್ಮನ್ನರಾಗಿ ನೇಮಿಸಲಾಯಿತು. ನಾವು ಯಾವುದೇ ಕೆಲಸವನ್ನು ಮಾಡಬೇಕಾದರೂ ಜವಾಬ್ದಾರಿಯುತವಾಗಿ, ಸರಿಯಾದ ರೀತಿಯಲ್ಲಿ ಕೆಲಸಮಾಡಿದರೆ ಅದನ್ನು ಮೆಚ್ಚಿಕೊಳ್ಳತಕ್ಕಂಥಾದ್ದು ಪ್ರತಿಯೊಬ್ಬರ ಕರ್ತವ್ಯ. ಅವರು ನಿಜವಾಗಲೂ ಬಹಳ ದಕ್ಷತೆಯಿಂದ ಹಗಲುರಾತ್ರಿ ಶ್ರಮಿಸಿ, ಮ್ಯಾನೇಜ್‌ಮೆಂಟಿನ ಜವಾಬ್ದಾರಿ ತೆಗೆದುಕೊಂಡು ಈ ೧೦೦ ಕೋಟಿ ರೂಪಾಯಿನ ವಿಸ್ತರಣಾ ಯೋಜನೆಯ ಕೆಲಸ ಬಹಳ ಯಶಸ್ವಿಯಾಗಿ ಬರುವುದಕ್ಕೆ ಪ್ರಯತ್ನಪಟ್ಟರು. ಈ ಒಂದು ಬೃಹದಾಕಾರವಾದ ಫ್ಯಾಕ್ಟರಿಯಲ್ಲಿ, ಈ ಯೋಜನೆ ಕಾರ್ಯ ರೂಪಕ್ಕೆ ಬರಬೇಕಾದರೆ ಸುಮಾರು ೭೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡಬೇಕಾದರೆ ಅದಕ್ಕೆ ಬೇಕಾಗುವ ರಾಮೆಟೀರಿಯಲ್ಸ್ ಏನು, ಅದಕ್ಕೆ ಬೇಕಾದ ಕಚ್ಚಾ ವಸ್ತುಗಳು ಏನು ಎನ್ನು ವುದನ್ನೆಲ್ಲಾ ಲೆಕ್ಕಹಾಕಿದರು. ಇದಕ್ಕೆ ಬೇಕಾದಂಥ ಕಚ್ಚಾವಸ್ತುಗಳು ಅಂದರೆ ೧ ಲಕ್ಷ ೨೦ ಸಾವಿರ ಟನ್ ಬ್ಯಾಂಬು, ೮೦ ಸಾವಿರ ಯೂಕಲಿಪ್ಟಸ್, ೩೦ ಸಾವಿರ ಮಿಕ್ಸೆಡ್ ಹಾರ್ಡ್ ವುಡ್ ಅದಕ್ಕೋಸ್ಕರ ೭೫ ಸಾವಿರ ಎಕರೆ ಜಮೀನನ್ನು ಸರ್ಕಾರದವರು ರಿಲೀಸ್ ಮಾಡಿದ್ದಾರೆ. ಆ ೭೫ ಸಾವಿರ ಎಕರೆ ರಿಲೀಸ್ ಮಾಡಿದ ಜಮೀನಿನಲ್ಲಿ ಸುಮಾರು ೨೫-೩೦ ಸಾವಿರ ಎಕರೆಯಲ್ಲಿ ಬರೀ ಹುಲ್ಲುಗಾವಲು ಇದೆ. ೨೦ ಸಾವಿರ ಎಕರೆಯಲ್ಲಿ ಸಣ್ಣ ಸಣ್ಣ ಕುರುಚಲು ಗಿಡಗಳಿವೆ. ಇನ್ನುಳಿದ ಪ್ರದೇಶದಲ್ಲಿ ಕಾಡು ಇರಬಹುದು. ಆದರೆ ೭೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡಬೇಕಾದರೆ ಈ ರಾ ಮೆಟೀರಿಯಲ್ ಬಗ್ಗೆ ಯೋಗ್ಯವಾದ ಗಮನವನ್ನು ಕೊಟ್ಟಿದ್ದೇವೆಯೇ ಎಂದು ಕೇಳುತ್ತಿದ್ದೇನೆ ; ಎಂ. ಎಂ. ಮ್ಯಾನೇಜ್ ಮೆಂಟ್ ಯೋಗ್ಯ ಗಮನ ಕೊಟ್ಟಿದೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಶ್ರೀಮಾನ್ ಜಾಫರ್ ಸೈಫುಲ್ಲಾ ಅವರು ಇದ್ದಾಗ ಅಫಾರ್‌ಸ್ಟೇಷನ್ ಮಾಡುವುದರ ಬಗ್ಗೆ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವುದರ ಬಗ್ಗೆ, ಎಲ್ಲದರ ಬಗ್ಗೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿದ್ದರು. ಈಗ ಆ ಕೆಲಸ ಸ್ಥಗಿತಗೊಂಡಿದೆ. ಈಗ ಪ್ರೊಡಕ್ಷನ್ ಶುರು ಮಾಡಿದ್ದಾರೆಂದು ಪೇಪರಿನಲ್ಲಿ ಮೊನ್ನೆ ಓದಿದ್ದೇವೆ.

ಆದರೆ ಈಗಿರತಕ್ಕ ರಾಮೆಟೀರಿಯಲ್‌ನಲ್ಲಿ ಎಷ್ಟು ವರ್ಷ ನಾವು ೭೫ ಸಾವಿರ ಟನ್ ನ್ಯೂಸ್‌ಪ್ರಿಂಟನ್ನು ಉತ್ಪಾದನೆ ಮಾಡಬಹುದು ? ಆದುದರಿಂದ ಇದು ಒಂದು ನಗೆಪಾಟಲು ಆಗುತ್ತದೆಂದು ನಾನು ತಿಳಿದು ಕೊಂಡಿದ್ದೇನೆ. ಈಗ ಫಾರೆಸ್ಟ್ ವೆಲ್ತ್, ಅರಣ್ಯ ಸಂಪತ್ತು ದಿನೇ ದಿನೇ ನಶಿಸಿ ಹೋಗುತ್ತಿದೆ. ಆದುದರಿಂದ ಕಬ್ಬಿನ ಸಿಪ್ಪೆಯನ್ನು ರಾಮೆಟೀರಿಯಲ್ ಆಗಿ ಉಪಯೋಗಿಸಬೇಕು ಎಂಬ ನಿಲುವನ್ನು ತೆಗೆದುಕೊಂಡು, Bagasse has been proved scientificaly as the best raw-material for the production of news print. ಅದಕ್ಕೆ ಬೇಕಾದ ಪ್ರತಿಯೊಂದು ವ್ಯವಸ್ಥೆಯನ್ನು ಶ್ರೀ ಜಾಫರ್ ಸೈಫುಲ್ಲಾರವರು ಮಾಡಿದ್ದರು, ಸ್ಕೀಮನ್ನು ರೂಪಿಸಿದ್ದರು. ಇದಕ್ಕಾಗಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಒಟ್ಟು ೨.೫೦೦ ಟನ್ ಕೆಪಾಸಿಟಿವುಳ್ಳ ಫ್ಯಾಕ್ಟರಿಗೆ ಲೈಸೆನ್ಸ್ ದೊರಕುವಂತೆ ಮಾಡಿದರು. ಆ ಶುಗರ್ ಫ್ಯಾಕ್ಟರಿ ಸ್ಥಾಪನೆ ಮಾಡುವುದರ ಬಗ್ಗೆ ಈಗ ಯೋಚನೆಯೂ ಇದ್ದಂತೆ ಇಲ್ಲ. ಅಫಾರ್ಸ್ಟೇಷನ್ ಮಾಡುವುದರ ಬಗ್ಗೆ ಯೋಚನೆ ಇಲ್ಲ. ಹೀಗಾದರೆ ಇದು ಒಂದು ಬರೀ ನಾಟಕವೇ ಎನ್ನುವ ಪ್ರಶ್ನೆಯಾಗಿದೆ. ಆದುದರಿಂದ ಈ ಒಂದು ಸಂದರ್ಭದಲ್ಲಿ ಕೆಲಸ ವಿವಿಧ ಹಂತ ದಲ್ಲಿರುವಾಗ, ಆ ವಿವಿಧ ಕೆಲಸವನ್ನು ಒಂದು ಜವಾಬ್ದಾರಿಯುತವಾಗಿ ಮಾಡುವಾಗ ಅವರನ್ನು ರಾಜಕೀಯ ಉದ್ದೇಶದಿಂದ ಟ್ರಾನ್ಸ್‌ಫರ್ ಮಾಡಿದ್ದುದರಿಂದ ಅದಕ್ಕೆ ಬಹಳ ಪೆಟ್ಟಾಯಿತು ಎಂದು ನಾನಾದರೂ ಹೇಳಬಯಸುತ್ತೇನೆ. ಈಗ ಶ್ರೀ ಮಾನ್ ಕೃಷ್ಣರವರನ್ನು ಅಲ್ಲಿ ಹಾಕಲಾಗಿದೆ. ಶ್ರೀಮಾನ್ ಕೃಷ್ಣರವರು ದಕ್ಷರಲ್ಲ, ಅವರಿಗೆ ಕೆಲಸವನ್ನು ಮಾಡುವ ಶಕ್ತಿ ಇಲ್ಲ ಎಂದು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅವರಲ್ಲಿ ದಕ್ಷತೆ ಇದೆ. ಆದರೆ ಎಂ.ಪಿ.ಎಂ. ಫ್ಯಾಕ್ಟರಿಯಲ್ಲಿರತಕ್ಕಂಥ ಸಿಬ್ಬಂದಿವರ್ಗ ಏನಿದ್ದಾರೆ ಅವರನ್ನು ಅರ್ಥಮಾಡಿಕೊಳ್ಳಬೇಕಾದರೆ ಕಷ್ಟವಾಗುತ್ತದೆ. ಅವರನ್ನು ಅರ್ಥಮಾಡಿಕೊಂಡು ಮ್ಯಾನೇಜ್‌ಮೆಂಟನ್ನು ಕಂಟ್ರೋಲ್ ಮಾಡಿಕೊಂಡು, ಒಂದು ಹಿಡಿತವನ್ನು ಇಟ್ಟುಕೊಳ್ಳಬೇಕಾದರೆ ಎಷ್ಟೋ ಕಾಲ ಕಳೆದು ಹೋಗಿದೆ ಮತ್ತು ಹಾಗೆಯೇ ಕಾಲವೂ ಇನ್ನು ಮುಂದೆಯೂ ವ್ಯರ್ಥವಾಗುತ್ತೆ. ಹೀಗಾಗಿ ಆ ಫ್ಯಾಕ್ಟರಿ ಈಗ ಬಹಳ ತೊಂದರೆಯನ್ನು ಅನುಭವಿಸಬೇಕಾಗಿದೆ. ೧೦೦ ಕೋಟಿ ರೂಪಾಯಿ ಯೋಜನೆ ಈಗ ೧೪೫ ಕೋಟಿ ರೂಪಾಯಿ ಯೋಜನೆಯಾಗಿದೆ. ಕೇಂದ್ರಸರ್ಕಾರ ೧೦೦ ಕೋಟಿ ರೂಪಾಯಿ ಯೋಜನೆ ಮಾಡಿತ್ತು, ಅದು ನಿಯಮಿತ ಕಾಲದಲ್ಲಿ ಆಗಿದ್ದರೆ, ಜೂನ್ ೧೯೮೧ರಲ್ಲಿ ಪ್ರೊಡಕ್ಷನ್ ಶುರುವಾಗಿದ್ದರೆ ೧೦೦ ಕೋಟಿ ರೂಪಾಯಿಯಲ್ಲಿ ನ್ಯೂಸ್‌ಪ್ರಿಂಟ್ ಉತ್ಪಾದನೆಯಾಗುತ್ತಿತ್ತು. ಈ ೪೫ ಕೋಟಿ ರೂಪಾಯಿ ಸಾರ್ವಜನಿಕರ ಮೇಲೆ ಬರ್ಡನ್ ಬರುತ್ತಾ ಇರಲಿಲ್ಲ. ಈ ೪೫ ಕೋಟಿ ರೂಪಾಯಿ ಸಾರ್ವಜನಿಕರ ಮೇಲೆ ಹೊರೆಯಾಗುವುದರ ಜೊತೆಗೆ, ನ್ಯೂಸ್‌ಪ್ರಿಂಟ್ ಉತ್ಪಾದನೆಯಾಗುವ ಒಂದು ಲಾಭವನ್ನೂ ಸಹ ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

ಶ್ರೀಮಾನ್ ಜಾಫರ್ ಸೈಫುಲ್ಲಾರವರು ದಕ್ಷತೆಗೆ ಹೆಸರಾದವರು, ಅವರು ಎಂ.ಪಿ.ಎಂ.ನಲ್ಲಿಯೇ ಇದ್ದಿದ್ದೇ ಆಗಿದ್ದರೆ ಇಷ್ಟರಲ್ಲಿಯೇ ವಿಸ್ತರಣಾ ಕಾರ್ಯವು ಮುಗಿದು ಉತ್ಪಾದನೆಗೆ ಪ್ರಾರಂಭವಾಗು ತ್ತಿತ್ತು. ಜೊತೆಗೆ ಕಚ್ಚಾ ಪದಾರ್ಥಗಳ ವ್ಯವಸ್ಥೆ, ಅಫಾರ್ಸ್ಟೇಷನ್ ವರ್ಕ್ ಮತ್ತು ಸಕ್ಕರೆ ಕಾರ್ಖಾನೆ ಯನ್ನು ಸ್ಥಾಪಿಸಿ, ಅದರಿಂದ ೩೦ ಪರ್ಸೆಂಟ್ ಕಬ್ಬಿನ ಸಿಪ್ಪೆಯನ್ನೂ ಸಹ ಪಡೆಯುತ್ತಿದ್ದರು. ಇವೆಲ್ಲವೂ ಬಹಳ ಸುಗಮವಾಗಿ ನಡೆಯುತ್ತಿದ್ದುವು. ಜೊತೆಗೆ ಸಿಬ್ಬಂದಿವರ್ಗದ ಮೇಲೆ ಅವರ ಸಂಪೂರ್ಣ ಹಿಡಿತ ಇತ್ತು. ಒಂದು ದೊಡ್ಡ ಸಂಸ್ಥೆಯನ್ನು ಯಾವುದೇ ಒಂದು ಕ್ಷುಲ್ಲಕ ರಾಜಕೀಯ ಬಂತು ಎಂದು ಹೇಳಿ ಈ ರೀತಿಯ ಮಾರ್ಪಾಡು ಮಾಡುವುದು ಒಳ್ಳೆಯದಲ್ಲ. ಇದು ಆಲ್ ಇಂಡಿಯಾ ಕೈಗಾರಿಕಾ ನೀತಿಗೆ ತದ್ವಿರುದ್ಧವಾಗುತ್ತದೆ. ಇದನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶಕ್ಕಾಗಿ ಇಂಥಾ ಸಂಸ್ಥೆಗಳನ್ನು ಉಳಿಸಬೇಕು, ಬೆಳೆಸಬೇಕು ಎನ್ನುವ ಭಾವನೆ ಉಂಟಾಗಬೇಕು, ಸ್ವಾರ್ಥ ಮನೋ ಭಾವನೆ ಇರಕೂಡದು ಎನ್ನುವ ಅಂಶವನ್ನು ಅಧ್ಯಕ್ಷರ ಮುಖಾಂತರ ಈ ಸಭೆಯ ಗಮನಕ್ಕೆ ತರಬಯಸು ತ್ತೇನೆ. ಈಗಾಗಲೇ ೭೫ ಸಾವಿರ ಎಕರೆ ಏನು ರಿಲೀಜ್ ಮಾಡಿದ್ದಾರೆ, ರಿಲೀಜ್ ಮಾಡಿ ೩-೪ ವರ್ಷ ಗಳಾದರೂ ಯಾವ ಒಂದು ಕೆಲಸವೂ ಇಲ್ಲಿಯವರೆಗೆ ಆಗಿಲ್ಲ. ಈ ರೀತಿಯ ಒಂದು ಪರಿಸ್ಥಿತಿ ಉಂಟಾದರೆ ಅಭಿವೃದ್ಧಿ ಹೇಗೆ ಆಗುತ್ತದೆಂದು ಮಾನ್ಯ ಅರ್ಥ ಸಚಿವರಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿ ೨ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಶುಗರ್ ಫ್ಯಾಕ್ಟರಿಗಳನ್ನು ಸ್ಥಾಪನೆ ಮಾಡಲು ರೈತರು ಮುಂದೆ ಬಂದಿದ್ದರು, ಅದಕ್ಕೆ ಷೇರು ಬಂಡವಾಳವನ್ನೂ ಸಹ ಹೂಡಿದ್ದರು. ಭದ್ರಾವತಿಯ ಹತ್ತಿರವಿರುವ ಮುಂಗೋಟಿಯಲ್ಲಿ ಒಂದು ಶುಗರ್ ಫ್ಯಾಕ್ಟರಿಯನ್ನು ಮತ್ತು ದಾವಣಗೆರೆಯ ಹತ್ತಿರ ಮತ್ತೊಂದು ಶುಗರ್ ಫ್ಯಾಕ್ಟರಿಯನ್ನು ಪಬ್ಲಿಕ್ ಸೆಕ್ಟಾರಿನಲ್ಲಿ ಪ್ರಾರಂಭ ಮಾಡ

ಲಾಗುತ್ತದೆ ಎಂದಾಗ ಅಲ್ಲಿದ್ದಂಥ ರೈತರು ಬಹಳ ಸಂತೋಷದಿಂದ ತಾವು ಹೂಡಿದ ಷೇರು ಬಂಡವಾಳ ವನ್ನು ಖಾಸಗಿ ಸಂಸ್ಥೆಯಿಂದ ವಾಪಸು ಪಡೆದು, ಪಬ್ಲಿಕ್ ಸೆಕ್ಟಾರಿನಲ್ಲಿ ಎಂ.ಪಿ.ಎಂ.ನಲ್ಲಿ ಪ್ರಾರಂಭ ವಾಗುವ ಶುಗರ್ ಫ್ಯಾಕ್ಟರಿಗೆ ಷೇರು ಬಂಡವಾಳವನ್ನು ಹೂಡಲು ಮುಂದಾದರು. ಆದರೆ ಇದರ ಬಗ್ಗೆ ಎಂ.ಪಿ.ಎಂ ನಿಂದ ಯಾವ ಪ್ರಯತ್ನವೂ ಇಲ್ಲ. ಇದರ ಹಿನ್ನೆಲೆಯನ್ನು ಅಧ್ಯಕ್ಷರೆ, ತಮಗೆ ಹೇಳುವು ದಾದರೆ, ಇದನ್ನು ಮುಚ್ಚಿಡತಕ್ಕ ಪ್ರಶ್ನೆ ಏನೂ ಇಲ್ಲ. ತುಂಗಭದ್ರ ಶುಗರ್ ಫ್ಯಾಕ್ಟರಿ ಒಂದು ಖಾಸಗಿ ಸಂಸ್ಥೆಯವರಿಗೆ ಸೇರಿದಂಥಾದ್ದು. ಅದು ಮಾರ್ವಾಡಿ ಖಾಸಗಿ ಸಂಸ್ಥೆ ಅವರ ಜೊತೆಗೆ ಕೆಲವರು ರಾಜಕಾರಿಣಿಗಳು ಶಾಮಿಲಾಗಿ ಇದನ್ನು ತಡೆ ಹಿಡಿಯುತ್ತಿದ್ದಾರೆ ಎನ್ನತಕ್ಕ ಗುರುತರವಾದ ಅಪರಾಧಕ್ಕೆ ಒಳಗಾಗಿದ್ದಾರೆ. ಇದು ಶಿವಮೊಗ್ಗ ಜಿಲ್ಲೆಯಲ್ಲಿ ಜನಜನಿತವಾಗಿದೆ. ಸರ್ಕಾರ ಬೇಕಾದರೆ ಈ ವಿಚಾರದ ಬಗ್ಗೆ ವಿಚಾರಣೆ ಮಾಡಲಿ.

ಒಂದು ದೊಡ್ಡ ಸಂಸ್ಥೆಯಲ್ಲಿ ಯಾವುದೇ ಒಂದು ಕ್ಷುಲ್ಲಕ ರಾಜಕೀಯ ಬಂತು ಎಂದು ಹೇಳಿ ಈ ರೀತಿಯ ಮಾರ್ಪಾಡು ಮಾಡುವುದು ಒಳ್ಳೆಯದಲ್ಲ, ಇದು ಆಲ್ ಇಂಡಿಯಾ ಕೈಗಾರಿಕಾ ನೀತಿಗೆ ತದ್ವಿರುದ್ಧವಾಗುತ್ತದೆ, ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ನಮ್ಮ ದೇಶಕ್ಕಾಗಿ ಇಂಥಾ ಸಂಸ್ಥೆಗಳನ್ನು ಉಳಿಸಬೇಕು. ಬೆಳೆಸಬೇಕು ಎನ್ನುವ ಭಾವನೆ ಉಂಟಾಗಬೇಕು ಸ್ವಾರ್ಥ ಮನೋ ಭಾವನೆ ಇರಕೂಡದು ಎನು ವ ಅಂಶವನ್ನು ಅಧ್ಯಕ್ಷರ ಮುಖಾಂತರ ಈ ಸಭೆಯ ಗಮನಕ್ಕೆ ತರಬಯಸು ತ್ತೇನೆ. ಈಗಾಗಲೇ ೭೫ ಸಾವಿರ ಎಕರೆ ಏನು ರಿಲೀಜ್ ಮಾಡಿದ್ದಾರೆ, ರಿಲೀಜ್ ಮಾಡಿದ ೩-೪ ವರ್ಷ ಗಳಾದರೂ ಯಾವ ಒಂದು ಕೆಲಸವೂ ಇಲ್ಲಿಯವರೆಗೆ ಆಗಿಲ್ಲ ಈ ರೀತಿಯ ಒಂದು ಪರಿಸ್ಥಿತಿ ಉಂಟಾದರೆ ಅಭಿವೃದ್ಧಿ ಹೇಗೆ ಆಗುತ್ತದೆಂದು ಮಾನ್ಯ ಅರ್ಥ ಸಚಿವರಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಅಲ್ಲಿ ೨ ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಶುಗರ್ ಫ್ಯಾಕ್ಟರಿಗಳನ್ನು ಸ್ಥಾಪನೆಮಾಡಲು ರೈತರು ಮುಂದೆ ಬಂದಿದ್ದರು ಅದಕ್ಕೆ ಷೇರು ಭಂಡವಾಳವನ್ನು ಸಹ ಹೂಡಿದ್ದರು. ಭದ್ರಾವತಿಯ ಹತ್ತಿರವಿರುವ ಮುಂಗೋಟಿಯಲ್ಲಿ ಒಂದು ಶುಗರ್ ಫ್ಯಾಕ್ಟರಿಯನ್ನು ಮತ್ತು ದಾವಣಗೆರೆ ಹತ್ತಿರ ಮತ್ತೊಂದು ಪಬ್ಲಿಕ್ ಸೆಕ್ಟಾರ್‌ನಲ್ಲಿ ಪ್ರಾರಂಭ ಮಾಡಲಾಗುತ್ತಿದೆ ಎಂದಾಗ ಅಲ್ಲಿಂದ್ದಂಥ ರೈತರು ಗಳು ಬಹಳ ಸಂತೋಷದಿಂದ ತಾವು ಹೂಡಿದ ಶೇರು ಬಂಡವಾಳವನ್ನು ಖಾಸಗಿ ಸಂಸ್ಥೆಯಿಂದ ವಾಪಾಸು ಪಡೆದು ಪಬ್ಲಿಕ್ ಸೆಕ್ಟಾರಿನಲ್ಲಿ ಎಂ.ಪಿ.ಎಂ. ನಲ್ಲಿ ಪ್ರಾರಂಭವಾಗುವ ಶುಗರ್ ಫ್ಯಾಕ್ಟರಿಗೆ ಷೇರು ಬಂಡ ವಾಳವನ್ನು ಹೂಡಲು ಮುಂದಾದರು. ಆದರೆ ಇದರ ಬಗ್ಗೆ ಎಂ.ಪಿ ಎಂ. ನಿಂದ ಯಾವ ಪ್ರಯತ್ನವೂ ಇಲ್ಲ ಇದರ ಹಿನ್ನೆಲೆಯನ್ನು ಅಧ್ಯಕ್ಷರೇ ತಮಗೆ ಹೇಳುವುದಾದರೆ, ಇದನ್ನು ಮುಚ್ಚಿಡತಕ್ಕ ಪ್ರಶ್ನೆ ಏನೂ ಇಲ್ಲ ತುಂಗಭದ್ರಾ ಶುಗರ್ ಫ್ಯಾಕ್ಟರಿ ಒಂದು ಖಾಸಗಿ ಸಂಸ್ಥೆಯವರಿಗೆ ಸೇರಿದಂಥದ್ದು ಅದು ಮಾರ್ವಾಡಿ ಖಾಸಗಿ ಸಂಸ್ಥೆ ಇದೆ ಅವರ ಜೊತೆಗೆ ಕೆಲವರು ರಾಜಕಾರಣಿಗಳು ಶಾಮಿಲಾಗಿ ಇದನ್ನು ತಡೆ ಹಿಡಿಯುತ್ತಿ ದ್ದಾರೆ ಎನ್ನತಕ್ಕ ಗುರುತರವಾದ ಅಪರಾಧಕ್ಕೆ ಒಳಗಾಗಿದ್ದಾರೆ ಎನ್ನುವುದು ಇದು ಶಿವಮೊಗ್ಗ ಜಿಲ್ಲೆಯಲ್ಲಿ ಜನಜನಿತವಾಗಿದೆ. ಸರ್ಕಾರ ಬೇಕಾದರೆ ಈ ವಿಚಾರದ ಬಗ್ಗೆ ವಿಚಾರಣೆ ಮಾಡಲಿ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಆ ಜಿಲ್ಲೆಯ ಕೆಲವರು ಎಂದರೆ ಯಾರು ಸ್ವಾಮಿ, ಅವರ ಹೆಸರನ್ನು ಹೇಳಲಿ.

ಅಧ್ಯಕ್ಷರು.—ನೀವು ಅದಕ್ಕೆ ವಿರುದ್ಧವಾಗಿದ್ದೀರೋ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಇಲ್ಲ ತುಂಗಭದ್ರಾ ಶುಗರ್ ಫ್ಯಾಕ್ಟರಿಯವರೊಂದಿಗೆ ಶಾಮೀಲಾಗಿದ್ದಾರೆಂದು ಹೇಳಿದರು ಆವರು ಯಾರು ಎಂದು ಹೇಳಿದರೆ ನಾವು ಕೇಳಬಹುದು.

ಶ್ರೀ ಜಿ. ಬಸವಣಪ್ಪ.—ನಾನು ಇದನ್ನು ಹಗುರವಾಗಿ ಹೇಳುತ್ತಿಲ್ಲ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಎಂ.ಪಿ.ಎಂ. ನಲ್ಲಿ ಸಕ್ಕರೆ ಕಾರ್ಖಾನೆ ಬರುವುದನ್ನು ತಪ್ಪಿಸಲು ತುಂಗಭದ್ರಾ ಶುಗರ್ ಫ್ಯಾಕ್ಟರಿಯ ಮಾಲೀಕ ಮಾರ್ವಾಡಿ ಜೊತೆ ಶಾಮೀಲ್ ಆಗಿದ್ದಾರೆ. ಇದರಿಂದ ಸಾರ್ವಜನಿಕ ಸಂಸ್ಥೆಗೆ ಅಗಾದವಾದ ಪೆಟ್ಟು ಬೀಳುತ್ತೆ. ಸರ್ಕಾರ ಇದರ ಬಗ್ಗೆ ಗಮನಹರಿಸಿ. ಆದಷ್ಟು ಬೇಗ ಎಂ.ಪಿ.ಎಂ. ನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವುದಕ್ಕೆ ಪ್ರಯತ್ನಿಸಬೇಕು. ಅದರಿಂದ ೩೦ ಪರ್ಸೆಂಟ್ ರಾಮೆಟೀರಿಯಲ್ ಕಬ್ಬಿನ ಸಿಪ್ಪೆಯ ರೂಪದಲ್ಲಿ ದೊರಕುತ್ತೆ ಈ ಮುಖಾಂತರ ರಾಮೆಟೀರಿಯಲ್ ಕೊರತೆಯನ್ನು ನೀಗಿಸ ಬಹುದು. ಇನ್ನೊಂದು ದೊಡ್ಡ ಸಂಸ್ಥೆಯಾದ ವಿ.ಐ.ಎಸ್.ಎಲ್ ಬಗ್ಗೆ ಪ್ರಸ್ತಾಪ ಮಾಡಲು ಅಪೇಕ್ಷಿಸುತ್ತೇನೆ. ಎರಡನೆಯದಾಗಿ ವಿ.ಐ.ಎಸ್.ಎಲ್ ದಿಂದ ಹಲವಾರು ವರ್ಷಗಳಿಂದ ಈ ಫ್ಯಾಕ್ಟರಿ

ನಷ್ಟದಿಂದ ತುಂಬಿ ಹೋಗಿತ್ತು, ಕಳೆದ ವರ್ಷ ಇದು ಲಾಭದಾಯಕವಾಗಿ ನಡೆಯುತ್ತಿದೆ. ೧೯೭೮-೭೯ ರಲ್ಲಿ ೪೮ ಲಕ್ಷ ರೂ.ಗಳ ಲಾಭವನ್ನು ಪಡೆದಿದೆ. ೧೯೭೯-೮೦ರಲ್ಲಿ ಸುಮಾರು ೫ ಕೋಟಿ ರೂ.ಗಳ ಲಾಭವನ್ನು ಪಡೆದಿದೆ. ಮತ್ತೆ ಅಲ್ಲಿಯ ಕೆಲಸ ಕಾರ್ಯಗಳು ನಿಜವಾಗಿಯೂ ಬಹಳ ಚೆನ್ನಾಗಿ ನಡೆಯುತ್ತಿದೆ. ಉತ್ಪತ್ತಿಯ ಕಾರ್ಯದಲ್ಲೂ ಸಹ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ. ನಿಜವಾಗಿಯೂ ಒಳ್ಳೆಯ ಅಭಿವೃದ್ಧಿಯನ್ನು ಸಾಧಿಸಿರುವುಕ್ಕಾಗಿ ನಾವು ಮ್ಯಾನೇಜ್‌ಮೆಂಟ್‌ಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಜೊತೆಗೆ ಈ ಒಂದು ಕಾರ್ಖಾನೆ...... ..

ಅಧ್ಯಕ್ಷರು.—೧೫ ನಿಮಿಷಗಳ ಕಾಲ ತಮಗೆ ಕೊಟ್ಟಿದ್ದೇನೆ. ತಮ್ಮ ವೇಳೆ ಮುಗಿಯಿತು.

ಶ್ರೀ ಜಿ. ಬಸವಣಪ್ಪ.—ಈ ಅಂಗ್ಸಿಲರಿ ಯೂನಿಟ್‌ಗಳೇನಿವೆ ಅದನ್ನು ಈ ವರ್ಷ ಸ್ಥಾಪನೆ ಮಾಡಿ ಅದರ ಮುಖಾಂತರ ಈ ಒಂದು ಕೆಲಸಕಾರ್ಯಗಳನ್ನು ಇನ್ನೂ ಚೆನ್ನಾಗಿ ನಿರ್ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಾರ್ಖಾನೆ ಅನೇಕ ಪ್ರಗತಿಪರವಾದ ಯೋಜನೆ ಗಳನ್ನು ಕೈಗೊಂಡಿರುವುದು ಬಹಳ ಒಳ್ಳೆಯದು ಅದರಲ್ಲಿ ಬಹಳ ಮುಖ್ಯವಾದುದು ಎಂದರೆ.

(1) Vaccum degassing and vaccum oxigen Decarbonisation.
(2) Optimisation scheme installation
(3) Ferrovaradium Project
(4) New Cement Plant
(5) Captive Power Plant
(6) Gas Hobler
(7) Water pollution Control Activities.

ಇವುಗಳೆಲ್ಲಾ ಮುಂದೆ ಬರತಕ್ಕ ಯೋಜನೆಗಳು ನಿಜವಾಗಿಯೂ ಮೆಚ್ಚತಕ್ಕ ವಿಷಯವಾಗಿದೆ. ಹೊಸದಾಗಿ ಸಿಮೆಂಟ್ ಪ್ಲಾಂಟ್‌ನ್ನು ಎಸ್ಟಾಬ್ಲಿಶ್ ಮಾಡಬೇಕೆಂದು ಹೊರಟಿದ್ದಾರೆ. ದೇಶದಲ್ಲಿ ಇವತ್ತು ಸಿಮೆಂಟಿಗೆ ಅಭಾವವಿರುವುದರಿಂದ ಆದಷ್ಟು ಬೇಗ ಇದನ್ನು ಅತ್ಯಂತ ಶೀಘ್ರಗತಿಯಿಂದ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇನ್ನು ಕಾರ್ಮಿಕ ಸಂಘಟನೆ, ಅವರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನೂ ಸಹ ಹಾಕಿ ಕೊಂಡಿದ್ದಾರೆ. ಸ್ಕೂಲ್ ಕಾಲೇಜುಗಳನ್ನು ಸ್ಥಾಪಿಸುವುದು, ಕ್ರಿಡಾ ಚಟುವಟಿಕೆಗಳನ್ನು ಸಹ ಈ ವಿ.ಐ.ಎಸ್.ಎಲ್.ನವರು ಇಟ್ಟುಕೊಂಡು ಮಾಡಲು ಹೊರಟಿದ್ದಾರೆ ಇದು ಬಹಳ ಸಂತೋಷದ ವಿಷಯ. ಅಲ್ಲಿ ಸುಮಾರು ೨೧ ವಿವಿಧ ರೀತಿಯ ಕಬ್ಬಿಣದ ಉತ್ಪಾದನೆಯಾಗುತ್ತದೆ. ಅದನ್ನು ಇನ್ನು ಸರಿಯಾಗಿ ಮಾಡಿ ಅದು ಸ್ಥಳೀಯವಾಗಿ ಮತ್ತು ವಿದೇಶಿ ಮಾರ್ಕೆಟ್‌ನಲ್ಲಿ ಪೈಪೋಟಿಯನ್ನು ಎದುರಿಸುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಅಲ್ಲಿ ವಿ ಐ.ಎಸ್.ಎಲ್. ಮತ್ತು ಎಂ.ಪಿ.ಎಂ. ನಲ್ಲಿ ವಿದ್ಯುತ್‌ನ ಕೊರತೆ ಬಹಳ ಇದೆ. ವಿದ್ಯುತ್‌ನ ಕೊರತೆಯನ್ನು ಅನುಭವಿಸಬೇಕಾಗಿದೆ. ಆದುದರಿಂದ ವಿ.ಐ.ಎಸ್.ಎಲ್. ನವರು ಮತ್ತು ಎಂ.ಪಿ.ಎಂ. ಕಾರ್ಖಾನೆಗಳವರು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಹೊಂದತಕ್ಕದ್ದು ಬಹಳ ಮುಖ್ಯವಾದುದೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಅತಿ ಮುಖ್ಯವಾಗಿ ಸಿಕ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ಇವತ್ತು ಕೇಂದ್ರ ಸರ್ಕಾರದವರು ಮತ್ತು ರಿಜರ್ವ್ ಬ್ಯಾಂಕ್‌ನವರು ಕೆಲವೊಂದು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದಾರೆ. ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರದವರು ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಐ.ಡಿ.ಸಿ ಮುಖಾಂತರ ಈ ರೋಗಗ್ರಸ್ಥ ಘಟಕಗಳಿಗೆ ಪುನರುಜ್ಜೀವನಗೊಳಿಸತಕ್ಕಂಥ ಕೆಲಸವಾಗಬೇಕಾಗಿದೆ. ಆದುದರಿಂದ ಈ ಘಟಕಗಳಿಗೆ ಪ್ರತ್ಯೇಕಚಿಕಿತ್ಸಾಲಯವನ್ನು ವ್ಯವಸ್ಥೆಮಾಡಿ ಅವುಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ಶ್ರೀಮಾನ್‌ದೇವೇಗೌಡರವರು ಹೇಳಿದ ಹಾಗೆ ಈ ಕೆ.ಎಸ್.ಎಫ್.ಸಿ. ಬಗ್ಗೆ ಬಹಳ ಪ್ರಶಂಸನೀಯವಾದ ಮಾತುಗಳನ್ನು ಹೇಳಿದರು. ಕಳೆದ ೩ ವರ್ಷಗಳಿಂದ ಇದರ ಕೆಲಸ ಕಾರ್ಯಗಳನ್ನು ನಾನು ವೀಕ್ಷಿಸಿದ್ದೇನೆ ನೋಡಿ ಬಹಳ ಸಂತೋಷವಾಗುತ್ತದೆ. ಕೇವಲ ೧ ವರ್ಷದಲ್ಲಿ ಸುಮಾರು ೨೦ ಕೋಟಿ ಹಣವನ್ನು ಅನೇಕ ಘಟಕಗಳಿಗೆ ಮಂಜೂರ್ಮಾಡಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—೨೨ ಕೋಟಿ ರೂ. ಗಳು.

ಶ್ರೀ ಜಿ. ಬಸವಣಪ್ಪ.—ಜೊತೆಗೆ ಅಲ್ಲಿ ಕಲೆಕ್ಷನ್ (arrears) ಅದರ ಬಗ್ಗೆ ಕೂಡ ಒಂದು ಪ್ರಗತಿಯನ್ನು ಸಾಧಿಸಿದ್ದಾರೆ. ಸಾಲ ಕೊಡುವುದು ಅದನ್ನು ವಾಪಸ್ಸು ತೆಗೆದು ಕೊಳ್ಳತಕ್ಕಂಥದ್ದು ಆ ವಿಷಯದಲ್ಲೂ ಸಹ ಬಹಳ ದಕ್ಷತೆಯಿಂದ ಅವರು ಕೆಲಸ ಮಾಡಿದ್ದಾರೆ. ಮತ್ತೆ ಈ ಪರ್ಮಿಟ್ ಕೋಟಾ ಸಿಸ್ಟಮ್ ಮೇಲೆ ಬೇಕಾದಷ್ಟು ಟೀಕೆ ಟಿಪ್ಪಣೆಗಳಾಗಿವೆ. ಯಾರಿಗೆ ನೀವು ಪರ್ಮಿಟ್ ಕೋಟಾವನ್ನು ಕೊಡುತ್ತೀರೊ ಅದರ ಲಿಸ್ಟನ್ನು List of addresses should be published in newspapers. ಇಲ್ಲದಿದ್ದರೆ ಕೋಟಾ ಪರ್ಮಿಟ್‌ನ್ನು ಯಾರು ಮಿಸ್ ಯೂಜ್ ಮಾಡುತ್ತಾರೆ, they should be punished severely and permits should be cancelled immeidiately ಇದಕ್ಕೆ ಸರಿಯಾದ ವ್ಯವಸ್ಥೆಯಾಗಬೇಕೆಂದು ಹೇಳಿ, ಇಷ್ಟು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. The Government should take all meassage to establish a sugar factory early. which helps to produce 30% of the raw-material i.e., Bagase. I am very particular about the improvement of Mysore Paper Mills. ಅಲ್ಲಿ ೭೫ ಸಾವಿರ ಟನ್ ನ್ಯೂಸ್ ಪ್ರಿಂಟ್ ಪೇಪರ್‌ನ್ನು ಉತ್ಪಾದನೆ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಸರ್ಕಾರದವರೇ ಖುದ್ದು ಪರಿಶೀಲಿಸಿ ಮಾಡಿ ಆ ಕೆಲಸವಾಗುವಂತೆ ನೋಡಿಕೊಳ್ಳಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮಂತ್ರಿಗಳು ತಂದಿರತಕ್ಕ ೮ ಬೇಡಿಕೆಗಳ ಪೈಕಿ ನಾನು ಒಂದೆರಡು ಬೇಡಿಕೆಗಳ ಬಗ್ಗೆ ಮಾತ್ರ ಮಾತನಾಡಬಯಸುತ್ತೇನೆ. ಇವತ್ತಿನ ದಿವಸ, ರೇಷ್ಮೆ ಇಲಾಖೆ ಏನು ವಿಶ್ವ ಬ್ಯಾಂಕಿನಿಂದ ೯ ಕೋಟಿ ರೂಪಾಯಿಗಳನ್ನು ಪಡೆದಿದೆ ಆ ಹಣವನ್ನು ಖರ್ಚು ಮಾಡಲು ಅನೇಕ ರೀತಿಯಲ್ಲಿ ತೊಡಕಾಗಿದೆ. ಇಲಾಖೆಯವರು ಹಣ ಖರ್ಚು ಮಾಡತಕ್ಕದ್ದರಲ್ಲಿ ಏನೋ ಒಂದು ರೀತಿಯ ಸಂಶಯ ಬಂದಿದೆ. ಅದನ್ನು ಯಾವ ರೀತಿ ಖರ್ಚು ಮಾಡಬೇಕು, ಯಾರಿಗೆ ತಲುಪಿಸಬೇಕೆಂಬ ವಿಷಯವನ್ನು ಕೂಲಂಕಷವಾಗಿ ಯೋಚನೆ ಮಾಡಬೇಕಾಗಿದೆ. ಅಡಿಯಿಂದ ತೆಗೆದುಕೊಳ್ಳುವುದಾದರೆ ಅನೇಕ ಜನ ರೈತರಿಗೆ ಈ ಇಲಾಖೆಯಿಂದ ಸುಮಾರು ಕೆಲಸ ಕಾರ್ಯಗಳು ಸಿಗುತ್ತವೆಂಬ ಅಂದಾಜಿನ ಮೇಲೆ ಸರ್ಕಾರ ಈ ಕೆಲಸವನ್ನು ಮಾಡಿದೆ. ನಮ್ಮಲ್ಲಿರತಕ್ಕ ಅನೇಕ ಕೈಗಾರಿಕೆಗಳನ್ನು ಅಂದರೆ ಉದಾಹರಣೆಗೆ ಸಿಲ್ಕ್ ಫಿಲೇಚರ್ ಅನ್ನು ನಾವು ಸರಿಯಾದ ರೀತಿಯಲ್ಲಿ ನಡೆಸುತ್ತಿಲ್ಲ. ಸರ್ಕಾರ ಕೂಡ ಇದರ ಬಗ್ಗೆ ಸರಿಯಾದ ಗಮನ ಕೊಡುತ್ತಿಲ್ಲ, ಆದ್ದರಿಂದ, ಇನ್ನು ಮುಂದಾದರೂ ಇದರ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ ಅದನ್ನು ನಡೆಸುವಾಗ ಸರಿಯಾದ ರೀತಿಯಲ್ಲಿ ಯಾವ ಬಂದೂಬಸ್ತು ಇಲ್ಲದೆ, ಮತ್ತು ಕಕೂನ್ ಅನ್ನು ಕೊಳ್ಳುವಾಗ ಹಾಗೂ ಅದನ್ನು ಸಾಗಣೆ ಮಾಡತಕ್ಕ ಕಾಲದಲ್ಲಿ ಅನೇಕ ದುಂದು ವೆಚ್ಚಗಳು ನಡೆದು ಆ ಒಂದು ರಂಗದಲ್ಲಿರತಕ್ಕ ಕಸುಬಿಗೇ ತುಂಬ ನಷ್ಟ ಉಂಟಾಗಿದೆ. ಈಗತಾನೇ ಮಾನ್ಯ ಬಸವಣ್ಣಪ್ಪನವರು ಮಾತನಾಡುತ್ತಾ ಪೇಪರ್ ಮಿಲ್‌ನಲ್ಲಿ ಡೈರೆಕ್ಟರ್ ಹಣ ಸಂಪಾದಿಸಿದ್ದಾರೆ ಎಂದರು. ಅಂದಾಗ ನಮಗೆ ಆ ಫಲ ದೊರೆಯುಲಿಲ್ಲವಲ್ಲ ಅನ್ನಿಸುತ್ತದೆ, ನಮ್ಮ ಕೊಳ್ಳೇಗಾಲ, ಮಾಂಬಳ್ಳಿ, ಮಿಟಗೇನಹಳ್ಳಿಯಲ್ಲಿ ಕಾರ್ಖಾನೆಗಳಿದ್ದೂ ಅಲ್ಲಿ ಕೆಲಸದಲ್ಲಿದ್ದವರನ್ನು ತೆಗೆದು ಮಾಡುವುದಾದರೂ ಏನು ಎಂಬುದನ್ನು ಕೇಳಬೇಕಾಗಿದೆ. ಎಷ್ಟೋ ಜನ ಕೆಲಸಗಾರರನ್ನು ಇವತ್ತು ತೆಗೆದಿದ್ದಾರೆ, ಆದರೂ ಆ ಜಾಗಗಳಿಗೆ ಇದುವರೆಗೆ ಜನರನ್ನು ಭರ್ತಿ ಮಾಡದೆ ಸರಿಯಾದ ವ್ಯವಹಾರವನ್ನು ರೂಢಿಸಲಿಲ್ಲ. ಅವನ್ನು ಮುಚ್ಚಿಸಬೇಕೆಂಬ ಮಾತುಕತೆ ಕೂಡ ನಡೆದಿದೆ ಎಂದು ತಿಳಿದು ಬಂದಿದೆ. ಇದು ಖಂಡಿತ ಸರಿಯಾದ ನೀತಿಯಲ್ಲ. ಕಾರ್ಪೊರೇಷನ್ನಿನವರು ಆ ಕಾರ್ಖಾನೆಗಳನ್ನು ತೆಗೆದುಕೊಳ್ಳುತ್ತಾರೆ ಅಂದಾಗ ಸುಮಾರು ಸಾವಿರಾರು ಕುಟುಂಬಗಳಿಗೆ ಅನಾನುಕೂಲವಾಗುತ್ತದೆ. ಅದನ್ನೇ ನಂಬಿರುವವರಿಗೆ ಬಹಳ ತೊಂದರೆಯಾಗುತ್ತದೆ, ಅಲ್ಲಿ ಸಾವಿರಾರು ಜನ ಕೆಲಸಗಾರರ ಅವಶ್ಯಕತೆ ಇದ್ದರೂ ಕೂಡ ಕೇವಲ ೨-೩ ನೂರು ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇನ್ನೂ ಎರಡು ಸಾವಿರ ಜನರನ್ನು ಕೆಲಸಕ್ಕೆ ತೆಗೆದುಕೊಂಡರೂ ನಡೆಯುತ್ತದೆ ಮತ್ತು ಅದರಿಂದ ರೈತರಿಗೆ ಕೂಡ ಅನುಕೂಲವಾಗುತ್ತದೆ, ಅದಕ್ಕೋಸ್ಕರ ವಿಶ್ವ ಬ್ಯಾಂಕಿನಿಂದ ಸಹ ಸರ್ಕಾರ ಹಣ ಪಡೆದಿದೆ, ನಾವು ತಾನೇ ಎಷ್ಟು ಜನರಿಗೆ ಅಂಥ ಸಂಬಳ ಸಾರಿ ಗಳನ್ನು

ಕೊಡುವುದಕ್ಕಾಗುತ್ತದೆ? ಇವರು ಮಾಡುತ್ತಿರುವ ಕೆಲಸದಿಂದ ಫಿಲೇಚರ್‌ಗಳಿಗೆ ನಷ್ಟ ಮಾಡುವುದಲ್ಲದೆ ಇಲಾಖೆಗೆ ಕೂಡ ಲಕ್ಷಾಂತರ ರೂಪಾಯಿಗಳನ್ನು ನಷ್ಟ ಮಾಡುತ್ತಿದ್ದಾರೆ. ಇದರ ಜೊತೆಗೆ ಕೆಲಸಗಾರರು ಕೂಡ ಅನೇಕರು ಕೆಲಸ ಇಲ್ಲದೆ ಮನೆಯಲ್ಲಿದ್ದಾರೆ ದಯಮಾಡಿ, ಸರ್ಕಾರ ಮರು ಆಲೋಚನೆ ಮಾಡಿ ಎಲ್ಲರಿಗೂ ಕೆಲಸ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೊಳ್ಳೇಗಾಲ ಫಿಲೇಚರ್, ಮಾಂಬಳ್ಳಿ ರೇಷ್ಮೆ ಅಂದರೆ ಭಾರತದಲ್ಲಿ ಏಕೆ ಇಡೀ ಪ್ರಪಂಚದಲ್ಲೇ ಹೆಸರುವಾಸಿ. ಹೀಗಿರುವಾಗ ಆ ಕಾರ್ಖಾನೆಗಳಲ್ಲಿ ಸರಿಯಾಗಿ ಕೆಲಸ ನಡೆಸದೆ ಇರುವುದು ಈ ರೇಷ್ಮೆ ಇಲಾಖೆಗೆ ಅವಮಾನಕರ. ನಮ್ಮಲ್ಲಿರ ತಕ್ಕ ಸಿಲ್ಕ್ ರೀಲರ್ಸ್ ಅನ್ನು ಚಾಲೆಂಜ್ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆ ಕಾರ್ಖಾನೆಗಳಲ್ಲಿ ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲದೆ ಕಡಿಮೆ ಬೆಲೆಗೆಲ್ಲಾ ರೇಷ್ಮೆಯನ್ನು ಮಾರಾಟ ಮಾಡಿ ಲಾಸ್ ಆಗುವ ಸಂಭವ ಇದೆ. ಆದ್ದರಿಂದ, ಇಲಾಖೆಯವರು ಅದರ ಕಡೆ ತೀವ್ರ ಗಮನ ನೀಡಬೇಕೆಂದು ಹೇಳುತ್ತೇನೆ. ಈ ರೀತಿಯಾಗಿ ಮೈಸೂರು ಜಿಲ್ಲೆಯಲ್ಲಿ ಹೆಸರು ವಾಸಿಯಾದ ರೇಷ್ಮೆ ಕೈಗಾರಿಕೆಗಳು ಮುಳುಗಿದರೆ ಸರ್ಕಾರಕ್ಕೆ ತುಂಬ ಅಪಮಾನವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತೀವ್ರ ಗಮನ ನೀಡಿ ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಏನೇನು ಮಾಡಬೇಕೆಂಬುದನ್ನು ಆಲೋಚನೆ ಮಾಡಬೇಕು. ಅದಕ್ಕೆ ಒಂದು ನಾನ್ ಅಫಿಷಿಯಲ್ ಕಮಿಟಿ ಮಾಡಿ ಅದರ ಸಲಹೆಗಳನ್ನು ತೆಗೆದುಕೊಂಡು ಫಿಲೇಚರ್ ನಡೆಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಕಕೂನ್ ಮಾರ್ಕೆಟ್ ಮಾಡಿದ್ದಾರೆ ಅಲ್ಲಿ ಹರಾಜಿನಲ್ಲಿ ಮಾಲನ್ನು ತೆಗೆದುಕೊಳ್ಳುತ್ತಾರೆ. ಹಾಗೆ ತೆಗೆದುಕೊಳ್ಳುವಾಗ ರೀಲರ್ಸ್ ಒಂದು ಕಡೆ ಹರಾಜು ಕೂಗುತ್ತಾರೆ ಮತ್ತೊಂದು ಕಡೆ ಫಿಲೇಚರ್‌ನವರು ಕೂಗುತ್ತಾರೆ. ಫಿಲೇಚರ್‌ನವರು ಕೂಗಿದ ಮೇಲೆ ರೀಲರ್ಸ್ ಜಾಸ್ತಿ ಮಾಡಬೇಕಾಗುತ್ತದೆ. ಅಲ್ಲದೆ, ಅಲ್ಲಿ ನಡೆಯತಕ್ಕ ಅವ್ಯವಹಾರ ಹೇಳತೀರದು. ಅವ್ಯವಹಾರ ಎಂದರೆ ತೂಕ ಮಾಡುವಾಗ ವ್ಯತ್ಯಾಸ ಮಾಡುವುದು. ಅಲ್ಲಿ ಅಧಿಕಾರದ ಅಡಿಯಲ್ಲಿರು ವವರು ಎಲ್ಲವನ್ನು ತಪ್ಪಾಗಿ ಮಾಡುತ್ತಾರೆ. ಅದನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೇಷ್ಮೆ ಮಾರ್ಕೆಟಿಂಗ್ ಎಂದು ಮಾಡಿದ್ದಾರೆ. ರೈತರಲ್ಲೂ ಸಹ ಅನೇಕರು, ಸರ್ಕಾರ ಸಾಕಷ್ಟು ಹಣ ಕೊಡುತ್ತದೆಂದೂ ಮತ್ತು ಅವನ್ನು ತೆಗೆದುಕೊಂಡು ಹೋಗಿ ರೇಷ್ಮೆ ಗೂಡನ್ನು ಕೊಂಡು ಮಾರಾಟ ಮಾಡಿ ಜೀವನ ಮಾಡಬಹುದೆಂದು ಬರುತ್ತಾರೆ. ಅಲ್ಲಿ ಸಣ್ಣ ಸಣ್ಣ ವ್ಯಾಪಾರ ಮಾಡುವವರಿಗೋಸ್ಕರ ಸೊಸೈಟಿಗಳನ್ನು ಮಾಡಿದ್ದಾರೆ. ಅಲ್ಲದೆ ಬಂಡವಾಳ ಕೂಡ ಹೂಡಬೇಕಾಗಿಲ್ಲ, ಬಂಡವಾಳವನ್ನು ಮಾರ್ಕೆಟಿಂಗ್ ಇಲಾಖೆಯವರು ಕೊಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಸಣ್ಣ ಸಣ್ಣ ರೇಷ್ಮೆ ಉದ್ದಿಮೆದಾರರು ಹಣ ಸಿಗದೆ ನೊಂದು ಹೋಗಿರುವುದರಿಂದ ಅಂಥ ವರಿಗೆ ಸೊಸೈಟಿಯವರು ಹಣ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅಲ್ಲಿ ರೇಷ್ಮೆ ವ್ಯವಸಾಯ ಮಾಡ ಬೇಕೆನ್ನುವವರಿಗೆ ಹಣ ಇರುವುದಿಲ್ಲ. ಆದ್ದರಿಂದ, ದಯಮಾಡಿ ಇಲಾಖೆಯವರು ಸೊಸೈಟಿಗಳ ಮುಖೇನ ರೇಷ್ಮೆ ಉದ್ದಿಮೆದಾರರಿಗೆ ಹಣ ಒದಗಿಸಿ, ಅವರು ಬೆಳೆದಂತಹ ರೇಷ್ಮೆಯನ್ನು ತಂದ ಗಿರವಿ ಇಟ್ಟು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ನಮ್ಮ ಕಡೆ ಮಳೆ ಇಲ್ಲದೆ ಊಜಿ ನೊಣದ ಹಾವಳಿ ಉಂಟಾಗಿದೆ. ಅದನ್ನು ತಪ್ಪಿಸಲಿಕ್ಕೆ ನಾನು ವೃತ್ತ ಪತ್ರಿಕೆಗಳಲ್ಲಿ ನೋಡಿದ ಹಾಗೆ ಸೊಳ್ಳೆ ಪರದೆಗಳನ್ನು ಹಾಕಿದರೆ ಬರುವುದಿಲ್ಲ, ಅಂಟನ್ನು ಹಾಕಿದರೆ ಬರುವುದಿಲ್ಲ. ಅದು ಅಲ್ಲೇ ಸಿಕ್ಕಿಹಾಕಿಕೊಳ್ಳುತ್ತದೆಂದು ಇಲಾಖೆಯ ಕೆಲವರು ಹೇಳಿಕೆ ಕೊಟ್ಟಿದ್ದಾರೆ. ಇದು ಸತ್ಯವೇ ಎಂದು ಕೇಳುತ್ತೇನೆ. ಈ ಊಜಿ ನೊಣ ಇಲಾಖೆಯಿಂದಲೇ ಬಂತು ಎಂದು ಗೊತ್ತಾಗಿದೆ. ಹೇಗೆಂದರೆ, ಮೊಟ್ಟೆ ಮಾರತಕ್ಕವರಿಗೆ ನಿರ್ಬಂಧ ಹಾಕಿದಾಗ ಅವರು ಕಳ್ಳತನದಲ್ಲಿ ಮಾಲನ್ನು ಬಂಗಾಳ ದಿಂದ ತಂದರು. ಅಲ್ಲಿ ಇದ್ದ ನೊಣಗಳು ಇಲ್ಲಿಗೆ ಬಂದವು. ಎಂದು ಇಲಾಖೆಯವರೇ ವರದಿ ಮಾಡಿದ್ದಾರೆ ಆದ್ದರಿಂದ, ಇಲಾಖೆಯವರೇ ಈ ಒಂದು ನೊಣಗಳ ಹಾವಳಿಯನ್ನು ತಡೆಗಟ್ಟಲು ತಕ್ಕ ಕ್ರಮ ಕೈ ಗೊಳ್ಳಬೇಕೆಂದು ಹೇಳುತ್ತೇನೆ. ಮತ್ತು ಮೊಟ್ಟೆ ಮಾರುವವರಿಗೆ ಹಾಕಿರತಕ್ಕ ನಿರ್ಬಂಧವನ್ನು ತೆಗೆದು ಅವರು ಅವುಗಳನ್ನು ಸಲೀಸಾಗಿ ಮಾರಲು ಅವಕಾಶ ಮಾಡಿಕೊಟ್ಟಾಗ ಎಲ್ಲರೂ ಸಂತೋಷದಿಂದ ಕೆಲಸ ಮಾಡುತ್ತಾರೆ. ಆಗ ಇಲಾಖೆ ಕೂಡ ಚೆನ್ನಾಗಿ ನಡೆಯುತ್ತದೆ. ದಯಮಾಡಿ ಸರ್ಕಾರ ಈ ಒಂದು ಅಂಶ ವನ್ನು ಗಮನಕ್ಕೆ ತೆಗೆದುಕೊಂಡು ಆ ಒಂದು ತೊಂದರೆಯನ್ನು ತಪ್ಪಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅರ್ಥ ಸಚಿವರು ಈ ಬಗ್ಗೆ ಸಂಬಂಧಪಟ್ಟ ಶಾಸಕರನ್ನು ಕರೆದು ಮೀಟಿಂಗ್ ಮಾಡಿ ಏನು ಮಾಡಬೇಕೆಂಬುದನ್ನು ಆಲೋಚನೆ ಮಾಡೋಣ ಎಂಬ ಅಭಿಪ್ರಾಯವನ್ನು ತಿಳಿಸಿದ್ದರು. ಆದರೆ ಇದುವರೆಗೆ ಯಾರನ್ನೂ ಕರೆಯಲಿಲ್ಲ, ಮತ್ತು ಅದಕ್ಕೆ ಏನೂ ವ್ಯವಸ್ಥೆ ಮಾಡಲಿಲ್ಲ. ಅದನ್ನು

Bangalore Date .... No ....

ಕೂಡಲೇ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಇದೆ ಅದು ಏನಾಗಿದೆ ಎಂದರೆ, ಅಲ್ಲಿ ಮ್ಯಾನೇಜ್‌ಮೆಂಟ್ ಸರಿಯಿಲ್ಲ.

ಅಧ್ಯಕ್ಷರು — ಸಹಕಾರ ಇಲಾಖೆಯ ಬೇಡಿಕೆ ಬಂದಾಗ ಮಾತನಾಡಿ. ಈಗ ಚರ್ಚೆಯದು ಆಯಿತಲ್ಲ ಆದಾದ ಮೇಲೆ ಕೈಗಾರಿಕೆ. ಅದನ್ನು ಬಿಟ್ಟು ಸಹಕಾರ ರಂಗಕ್ಕೆ ಏಕೆ ಹೋಗುತ್ತೀರಿ?

ಶ್ರೀ ಎಂ. ಸಿದ್ಧಮಾದಯ್ಯ.—ಈ ಊಜಿ ನೊಣದ ಹಾವಳಿಯನ್ನು ತಪ್ಪಿಸುವ ಸಲುವಾಗಿ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ತಿಳಿದಿದ್ದೇನೆ. ಇದರಿಂದ ಸರ್ಕಾರದ ಬೊಕ್ಕಸದ ಹಣ ಅನ್ಯಾಯವಾಗುತ್ತಿದೆ, ಏಕೆಂದರೆ ಇದುವರೆಗೆ ಆ ಒಂದು ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ.

೬-೦೦ ಪಿ.ಎಂ.

ಊಜಿ ನೊಣ ತಪ್ಪಿಸುವುದಕ್ಕೆ ಏನೇನೋ ಕ್ರಮ ತೆಗೆದುಕೊಳ್ಳುತ್ತೇವೆ, ತಂತಿ ಬೇಲಿ ಹಾಕಿ ಸೊಳ್ಳೆ ಪರದೆ ಹಾಕಿ ಹಾವಳಿ ತಪ್ಪಿಸಬಹುದು ಎಂದು ಹೇಳುತ್ತಿದ್ದಾರೆ. ಆದರೆ ಅದನ್ನು ಆ ರೀತಿ ತಪ್ಪಿಸುವುದಕ್ಕಾಗುವುದಿಲ್ಲ. ಅದು ಪ್ರಕೃತಿಯಿಂದ ಬಂದಿರತಕ್ಕದ್ದು, ಬಂಗಾಳದಿಂದ ಬಂದಿರತಕ್ಕದ್ದು. ಮಳೆ ಜಾಸ್ತಿ ಬಂದರೆ ತಾನಾಗಿಯೇ ಹೋಗುತ್ತದೆ. ಮಳೆ ಇಲ್ಲದೇ ಇರುವುದರಿಂದ ಇದು ಕಾಣಿಸಿಕೊಳ್ಳುತ್ತಿದೆ. ದಯಮಾಡಿ ಹಣ ವ್ಯಯವಾಗದಂತೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟವರನ್ನು ಕರೆದು, ನಾನ್-ಅಫಿಷಿಯಲ್ಸ್ ಮುಂತಾದವರನ್ನು ಕರೆದು ತಿಳಿವಳಿಕೆ ತೆಗೆದುಕೊಂಡು ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕೆಂದು ನನ್ನ ಅಭಿಪ್ರಾಯ. ಇದನ್ನು ತಾವು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮಲ್ಲಿ ಮೊಟ್ಟೆ ಮಾಡತಕ್ಕವರಿಗೆ ಸರ್ಕಾರದವರು ಸೌಕರ್ಯ ಒದಗಿಸುತ್ತಿಲ್ಲ. ಬಂದಿರುವ ಹಣದಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆಯೇ ಹೊರತು ರೈತರಿಗೆ ಅನುಕೂಲ ಒದಗಿಸುತ್ತಿಲ್ಲ. ತಾವು ಕೊಟ್ಟ ಮಿಶ್ರ ತಳಿ ಮೊಟ್ಟೆ ಫೈಲ್ಯೂರ್ ಆಗುತ್ತದೆ. ಅದೇ ರೀತಿ ರೈತರು ಅವರಿಗೆ ಕೊಟ್ಟಿದ್ದ ಮೊಟ್ಟೆ ಬಿತ್ತನೆ ಸರಿಯಿಲ್ಲದೆ ಫೈಲ್ಯೂರ್ ಆಗುತ್ತವೆ. ಆದ್ದರಿಂದ ರೈತರಿಗೆ ಸಹ ಮಾರ್ಜಿನ್ ತೋರಿಸಬೇಕು, ಅನುಕೂಲ ಮಾಡಿಕೊಡಬೇಕು. ಪರೀಕ್ಷೆ ಮಾಡುವಾಗ ಮೈಕ್ರೋಸ್ಕೋಪ್ ಇಟ್ಟುಕೊಂಡು ಮಾಡುವಂಥ ವ್ಯವಸ್ಥೆ ಮಾಡಬೇಕು. ಈಗ ಏನು ಮಾಡುತ್ತಿದ್ದಾರೆ ಎಂದರೆ ಒಂದೊಂದು ಏರಿಯಾದಲ್ಲಿ ೨೦-೨೦ ಜೀಪ್ ಇರುತ್ತದೆ, ಅದರಲ್ಲಿ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ಸುಮ್ಮನೆ ಓಡಾಡುತ್ತಿರುತ್ತಾರೆ. ಯಾರೂ ಚೆಕಿಂಗ್ ಮಾಡುತ್ತಿಲ್ಲ. ಮೈಕ್ರೋಸ್ಕೋಪ್ ಇಟ್ಟುಕೊಂಡು ಸರಿಯಾಗಿ ಚೆಕಪ್ ಮಾಡುವಂಥ ವ್ಯವಸ್ಥೆ ಮಾಡಬೇಕು. ಹಿಂದೆ ಮಾಡುತ್ತಿದ್ದ ರೀತಿಯಲ್ಲಿ ಹೆಚ್ ಷೀಟ್ ಮಾಡಿ ಫ್ಯಾಬ್ರಿನ್, ಪ್ಲಾಸ್‌ರಿನ್ ಎಂಬುದನ್ನು ಕಂಡುಹಿಡಿದು ಇಂಥ ಮೊಟ್ಟೆಯನ್ನು ಜನರಿಗೆ ಒದಗಿಸಬೇಕು. ಹಿಂದೆ ಈ ರೀತಿ ಮೊಟ್ಟೆ ಕೊಡುತ್ತಿದ್ದರು. ಆ ವ್ಯವಸ್ಥೆ ಮಾಡಬೇಕು. ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಅಲ್ಲಲ್ಲಿ ತೆರೆದಿದ್ದಾರೆ. ಚಾಕಿ ಸಾಕಾಣಿಕೆ ಕೇಂದ್ರಕ್ಕೆ ರೈತ ಮೊಟ್ಟೆ ಕೊಡುತ್ತಾನೆ. ಆದರೆ ಆ ಸಾಕಾಣಿಕೆ ಕೇಂದ್ರದಲ್ಲಿ ಸೊಪ್ಪು ಇಲ್ಲದಿರುವುದರಿಂದ ರೈತನೇ ಸೊಪ್ಪನ್ನು ತೆಗದುಕೊಂಡು ಹೋಗಿ ಕೊಡಬೇಕಾಗಿದೆ. ಸೊಪ್ಪು ತೆಗೆದುಕೊಂಡು ಹೋಗಿ ಕೊಡದಿದ್ದರೆ ಅವರು ಸೊಪ್ಪು ಹಾಕದೇ ಹಾಗೆಯೇ ಇಟ್ಟುಬಿಡುತ್ತಾರೆ. ಎರಡು ಮೈಲಿ ಆದರೂ ಹೋಗಿ ಸಾಕಾಣಿಕೆ ಕೇಂದ್ರಕ್ಕೆ ರೈತ ಸೊಪ್ಪು ತಂದು ತೆಗೆದುಕೊಂಡು ಹೋಗಿ ಕೊಡಬೇಕು. ಹೀಗಾಗಿ ಅನೇಕ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಎಲ್ಲೆಲ್ಲಿ ಚಾಕಿ ಸಾಕಾಣಿಕೆ ಕೇಂದ್ರಗಳಿವೆ ಅಲ್ಲೆಲ್ಲಾ ಸರ್ಕಾರದವರು ಸೊಪ್ಪನ್ನು ಖರೀದಿಸಿ ಸಣ್ಣ ಮೊಟ್ಟೆ ಮರಿಗಳಿಗೆ ಒದಗಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಅನೇಕ ವಿಚಾರಗಳು ಮಾತನಾಡುವುದಕ್ಕಿದ್ದರೂ ಸಮಯ ಸಾಕಾಗದಿರುವುದರಿಂದ ಇಷ್ಟಕ್ಕೇ ನಿಲ್ಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—Now the House stands adjourned to meet tomorrow at 12 P.M.

The House adjourned at Three minutes past Six of the Clock to meet again at Twelve of the Clock on Thursday the 23rd July 1981.